# ಅಪರಂಜಿ

**ತಿಳಿನಗೆಯ ಕಾರಂಜಿ** **ಜುಲೈ 2023**




ಬಿಡಿ ಪ್ರತಿ: ರೂ. 10/-

TEMPLE OF KNOWLEDGE

# ಪುಸ್ತಕವಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ

ಬೀChiಯವರ ವಿಡಂಬನೆ ಹಾಸ್ಯದ ಮೂಲಕ ಮೌಲ್ಯಗಳು ಬೆಳೆಯುತ್ತದೆ ಹಾಗೂ ಬೀChi ಅವರ ಪುಸ್ತಕಗಳು ಪ್ರೇರಣೆ, ಸ್ಫೂರ್ತಿ ಮತ್ತು ಮನರಂಜನೆಯಿಂದ ತುಂಬಿವೆ ಸಕಾರಾತ್ಮಕ ಪರಿಣಾಮ ಬೀರುತ್ತದೆ.

**50 ಪುಸ್ತಕಗಳ ಪ್ಯಾಕ್**

ನಿಮಗಾಗಿ ಮತ್ತು ಇತರರಿಗೆ ಉಡುಗೊರೆಯಾಗಿ ನೀಡಲು ಈ ಅದ್ಭುತ ಪುಸ್ತಕಗಳ ಸಂಗ್ರಹವನ್ನು ಖರೀದಿಸಿ ಆಸಕ್ತ ಓದುಗರು, ಶಾಲೆಗಳು, ಕಾಲೇಜುಗಳು, ಕಾರ್ಪೊರೇಟ್‌ಗಳು, ವಿಶ್ವವಿದ್ಯಾನಿಲಯಗಳು ಮತ್ತು ಓದಲು ಆಸಕ್ತಿ ಹೊಂದಿರುವ ಇತರ ಸಂಸ್ಥೆಗಳಿಗೆ ಇದನ್ನು ಹಂಚಿಕೊಳ್ಳಿ. ಪುಸ್ತಕಗಳು ನಿಮ್ಮ ಮನೆ ಸೇರಲಿ ಹಾಗೂ ಬಂಧುಗಳಿಗೆ, ಸ್ನೇಹಿತರಿಗೆ ಕಾಣಿಕೆಯಾಗಿ ಎಲ್ಲಾ ಸಮಾರಂಭಕ್ಕೂ ಪುಸ್ತಕಗಳು ಉಡುಗೊರೆಯಾಗಿ ಕೊಡಬಹುದು.

**ಬೆಲೆ ರೂ7592 after discount ರೂ 6799 ಪ್ರತಿಗಳನ್ನು ಪಡೆಯಲು ಸಂಪರ್ಕಿಸಿ**


Pay 9845264304

ಆಸಕ್ತರು ಸಂಪರ್ಕಿಸಿ : 080–29731414 ಮೊ : 9035302302

---

# BEECHI PRAKASHANA

# ಬೀchi ಪ್ರಕಾಶನ,



## BOOKS AVAILABLE

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

---

Email : admin@beechi.in | www.beechi.in | 9845264304

# Ravi Graphics

OFFSET PRINTERS

*Bringing colours alive*

***What we specialize into :***

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

*Bag is everything*

# bag factory

bagfactory.co.in

## Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

**+91 89719 95599 | sales@bagfactory.co.in | bagfactory.co.in**

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

www.mallige.com

NABH ACCREDITED — PATIENT SAFETY & QUALITY OF CARE

Certificate No.: MC-2068



Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages: 40+4 APARANJI KANNADA MONTHLY.

**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

ಚಂದಾ ವಿವರ :

ಬಿಡಿ ಪ್ರತಿ : ರೂ. 10/-

ವಾರ್ಷಿಕ ಚಂದಾ : ರೂ. 100/-

ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 40**

**ಸಂಚಿಕೆ – 10**

**ಜುಲೈ–2023**

*ಈ ಸಂಚಿಕೆಯಲ್ಲಿ...*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 1 |
| ಸ್ನೇಕ್ ಪ್ಯಾಟರ್ನ್ಡ್ ಸ್ವೆಟರು | **ವತ್ಸನ** | 3 |
| ಎಚ್.ಕೆ.ಒ.ಕೆ | **ಬೇಲೂರು ರಾಮಮೂರ್ತಿ** | 8 |
| ಹೋಲಿಕೆಗಳ ಮಾಲಿಕೆ | **ಆರತಿ ಘಟಿಕಾರ್** | 12 |
| ಮಕಮಲ್ ಶಾವಿಗೆ ಮತ್ತು ಊರುಸಾಬರಿ! | **ಜಯಶ್ರೀ ದೇಶಪಾಂಡೆ** | 15 |
| ಕಡೀ ಸೇಂಗಾ | **ಶೀನೂ** | 19 |
| ನ್ಯೂಯಾರ್ಕ್ ಕಿಂದರಿಜೋಗಿ | **ಆನಂದ** | 22 |
| ತುಂತುರು | **ದಂಸಆ** | 23 |
| ಹಾಫ್–ಹೆಲ್ಮೆಟ್ ಲಕ್ಕಣ್ಣ | **ವಿನಾಯಕ ಕಾಮತ್** | 24 |
| ನಮ್ಮ ರಾಮಿ ಮದ್ವೆ | **ಇ.ಆರ್. ರಾಮಚಂದ್ರನ್** | 29 |
| ವಾಸನೆಯೆಂಬೋ ಯಾತನೆ | **ಲತಾ ಹೆಗಡೆ** | 33 |
| ಟೋಪಿಗಳು ಸಾರ್! | **ಡಾ॥ ಸಹನ ಪ್ರಸಾದ್** | 35 |
| ನನ್ನ ಪ್ರೀತಿಯ ಅಪ್ಪ | **ಮಂಗಳ ಎಂ ನಾಡಿಗ್** | 37 |

**ವ್ಯಂಗ್ಯ ಚಿತ್ರಗಳು :**

**ಹೊರ ಪುಟ–ಮಂಜು**


*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003,* email: koravanjiaparanji@gmail.com ಮೊಬೈಲ್:9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com

**For Online payment of ubscription:** Name : KORAVANJI APARANJI TRUST

Current Account No.: 109804180000056, IFS Code : SVCB0000098

SVC Co-operative Bank Ltd., Branch: Malleshwaram

Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿ) ಸಹಕಾರನಗರ*



# ಅಪರಂಜಿ ಕಿಡಿ

● ಪ್ರಕಾಶ್

ರಾಜ್ಯದಲ್ಲೆಲ್ಲ ವಿದ್ಯುತ್ ಕಣ್ಣಾಮುಚ್ಚಾಲೆ

ಪತ್ರಿಕೆ

ಇದು ನಮಗೆ ತುಂಬಾ ಅಭ್ಯಾಸ ಆಗಿದೆ ಸ್ವಾಮಿ !!

******

2018 ರಲ್ಲಿ ದಾಖಲಾಗಿದ್ದ ವಂಚನೆ ಪ್ರಕರಣ ; ಈಗ ಆರೋಪಿಗಳ ಬಂಧನ

ದಿನಪತ್ರಿಕೆ

ನ್ಯಾಯವೆಂಬ ಚಕ್ರ ನಿಧಾನವಾಗಿ ಉರುಳುತ್ತೆ !!

*****

24 ಗಂಟೆಯೂ ಹೋಟೆಲ್ ತೆರೆಯಲು ಅವಕಾಶ ಕೊಡಿ

ಹೇಳಿಕೆ

ವೈದ್ಯರೆಲ್ಲ ಗಾಬರಿಪಟ್ಟರಂತೆ ಪಾಪ !!

*****

ಗ್ಯಾರಂಟಿ ಯೋಜನೆಗಳಿಗೆ ಯಾವ ಹಣ ಬಳಕೆ ?

ಮಾಜಿ ಮುಖ್ಯಮಂತ್ರಿಗಳು

ಆಹಾ, ಯಕ್ಷಪ್ರಶ್ನೆ ಎಂದರೆ ಇದೇ ಇರಬೇಕು !!

*******

ಸಾಲ ಕಟ್ಟಲ್ಲ, ಏನು ಮಾಡ್ತೀರೋ ಮಾಡ್ಕೊಳ್ಳಿ

ಹೇಳಿಕೆ

ಸ್ತ್ರೀಶಕ್ತಿ ಎಂದರೇನು ಕಡಮೆಯೇ !!

******

ನಿಜವಾದ ಇತಿಹಾಸ ಯಾವುದು ?

ಅಭಿಮತ ಲೇಖನ

ಇತ್ತೀಚೆಗೆ ಅದು "ಅತಿ ಹಾಸ್ಯ" ಆಗುತ್ತಿದೆ !!

******

ತರಕಾರಿ ಬೆಳೆ ಗಗನಕ್ಕೆ; ಹುರುಳಿ, ಬಟಾಣಿ, ಕ್ಯಾರಟ್ 100 ರೂಪಾಯಿ

ಸರಿ

ನಮಗೆ ಸೊಪ್ಪು ಸದೆಯೇ ಗತಿ

******

■

# ಸ್ನೇಕ್ ಪ್ಯಾಟರ್ನ್ಡ್ ಸ್ವೆಟರು

✍ವತ್ಸನ

ಮೊಟ್ಟ ಮೊದಲ ಬಾರಿಗೆ ಶರಲೇಖನ ಅನುಪಸ್ಥಿತಿಯಲ್ಲಿ ಈ ಪ್ರಸಂಗವನ್ನು ಬರೆಯಲು ಪ್ರಾರಂಭಿಸಿದ್ದೇನೆ. ಮೊನ್ನೆ ಶರಲೇಖ ಬಹಳ ತರಾತುರಿಯಲ್ಲಿ ದೆಹಲಿಗೆ ಹೊರಟುಬಿಟ್ಟ. ಇತ್ತೀಚೆಗಷ್ಟೇ ಆದ ಒಡಿಶಾ ರೈಲು ದುರಂತಕ್ಕೂ ಅವನ ಧಾವಿಸುವಿಕೆಗೂ ಸಂಬಂಧವನ್ನು ಪುರಾವೆಯಿಲ್ಲದೇ ಕಲ್ಪಿಸುವುದು ಸರಿಯಲ್ಲ ಎಂಬುದು ನನ್ನ ಅನಿಸಿಕೆ. ಅದು ಹೇಗೆ ಇರಲಿ ಈ ಬಾರಿ ಅವನ ಪ್ರಸಂಗ ನಾಸ್ತಿ ಎಂದುಕೊಳ್ಳುತ್ತಿ ರುವಾಗಲೇ ಫೋನು ರಿಂಗಣಿಸಿತು. ಆಚೆಬದಿಯಿಂದ ರವಿಕಿರಣ್, "ಮಾವ, ನಾಳೆ ನಮ್ಮ ಪೇರೆಂಟ್ಸ್ ಗೋಲ್ಡನ್ ವೆಡಿಂಗ್ ಸಮಾರಂಭ. ಲೋಕೇಷನ್ ವಾಟ್ಸಪ್‌ನಲ್ಲಿ ಕಳಿಸಿದ್ದೇನೆ. ಖಂಡಿತಾ ಬರಬೇಕು. "ಅಂತ ಬಹು ಆದರದಿಂದ ಆಹ್ವಾನಿಸಿದ." ಖಂಡಿತಾ ಬರ್ತೀನಿ ಕಣೋ" ಅಂತ ಹೇಳಿ ಮಾತು ಮುಗಿಸಿದೆ.

ರವಿ ನನ್ನ ಮೈದುನ ಶಂಕರನ ಮಗ. ಬಹಳ ಪ್ರತಿಭಾವಂತ. ಚೆನ್ನೈ ಐಐಟಿಯಲ್ಲಿ ಇಂಜಿನಿಯರಿಂಗ್ ಮುಗಿಸಿ, ಅನಂತರ ಆ ಕಸುಬಿಗೇ ವಿದಾಯ ಹೇಳಿ ಕನ್ನಡ ಸಿನಿಮಾ ನಿರ್ದೇಶನ ಮಾಡ್ತೀನಿ ಅಂತ ಏನೇನೋ ಹುಚ್ಚಾಟ ಮಾಡಿ ಶಂಕರ ಮತ್ತು ವೈಜಯಂತಿಯರಿಗೆ ಅಸಿಡಿಟಿ ಬರಿಸಿದ್ದ ರವಿಕಿರಣ್. ನಾವೆಲ್ಲಾ "ಇದೊಂದು ಗಾನ್‌ಕೇಸ್" ಎಂದುಕೊಳ್ಳುತ್ತಿರುವಾಗಲೇ ರವಿ ಸಿನಿಮಾ ಕ್ಷೇತ್ರದಲ್ಲಿ ಅಸಾಧಾರಣ ಯಶಸ್ಸು ಗಳಿಸಿದ್ದೇ ಅಲ್ಲದೆ, ಉದಯೋನ್ಮುಖ ತಾರೆಯೊಬ್ಬಳನ್ನು ಮದುವೆಯಾಗಿ, ಮಾವನ ಬಲದಿಂದ ಯಶಸ್ಸಿನ ಏಣಿಯನ್ನು ಸರಸರ ಏರಿದ್ದು, ಅವನನ್ನು ಟೀಕಿಸಿದವರಿಗೆಲ್ಲಾ ಅಸಿಡಿಟಿ ಬರುವಂತೆ ಮಾಡಿತ್ತು.

ಶಂಕರ ಇರೋದು ಮಲ್ಲೇಶ್ವರದಲ್ಲಿ. ಆ ಬಡಾವಣೆಯಲ್ಲೇ ಇರುವ ರಿಜಾಯ್ಸ್ ಎಂಬ ಭವನದಲ್ಲಿ ಸಮಾರಂಭವನ್ನು ಏರ್ಪಡಿಸಿದ್ದರು. ನಾನು ಅಲ್ಲಿಗೆ ಸೇರಿದಾಗ ಹನ್ನೊಂದು ಆಗಿತ್ತು. ಅಷ್ಟು ಹೊತ್ತಿಗಾಗಲೇ ಅಲ್ಲಿ ಕನ್ನಡ ಸಿನಿಮಾ ರಂಗದ ಖ್ಯಾತನಾಮರನೇಕರು ಜಮಾಯಿಸಿದ್ದರು. "ಯು ಆರ್ ನೋನ್ ಬೈ ದ ಕಂಪನಿ ಯು ಕೀಪ್" ಎಂದು ಇಂಗ್ಲೀಷಿನಲ್ಲಿ ಒಂದು ನಾಣ್ಣುಡಿಯಿದೆ. ಅದು ನಿಜವಾದರೆ ರವಿ ಸೊಗಸಾದ ಸಭ್ಯರ ಗುಂಪನ್ನೇ ಆಕರ್ಷಿಸಿದ್ದ ಎಂದು ಹೇಳಬಹುದಾಗಿತ್ತು.

ಶಂಕರ ವೈಜುರಿಗೆ ಶುಭ ಕೋರಿ, ಆಶೀರ್ವಾದ ಮಾಡಿ, ಆ ಹಾಲಿನಲ್ಲಿ ಒಂದು ಮೂಲೆಯಲ್ಲಿದ್ದ ಕುರ್ಚಿಯಲ್ಲಿ ಕುಳಿತೆ. ಅಲ್ಲಿದ್ದವರೆಲ್ಲಾ ನನಗೆ ಅಪರಿಚಿತರೇ. ಹಾಗಾಗಿ ಮಾತಿಗೆ ಯಾರೂ ಸಿಕ್ಕಲಿಲ್ಲ. ಮೊಬೈಲ್ ತೆಗೆದು ವರ್ಡ್ಲ್ ಬಿಡಿಸಲು ಪ್ರಾರಂಭಿಸಿದೆ.

ಅಷ್ಟು ಹೊತ್ತಿಗೆ ರವಿ ನನ್ನ ಬಳಿ ಬಂದ. ಅವನ ಜೊತೆಯಲ್ಲಿ ಒಬ್ಬ ಸಜ್ಜನರು ಇದ್ದರು. ಸುಮಾರು ಐವತ್ತರ ಪ್ರಾಯ. "ಮಾವ, ಇವರು ಬಾಲಚಂದ್ರ ಅಂತ. ಸಿನಿಮಾ ನಟರು. ಖ್ಯಾತ ನಿರ್ದೇಶಕ ರಾಜೇಂದ್ರ ಬಾಬು ತಯಾರಿಸಿದ ದೇವರ ಮಗ ಚಿತ್ರದಲ್ಲಿ ಇವರು ಅಂಬರೀಷ್ ಜೊತೆ ನಟಿಸಿದ್ದರು" ಅಂತ ಅವರ ಕಿರು ಪರುಚಯ ಮಾಡಿಸಿ ಅವರನ್ನು ನನ್ನ ಪಕ್ಕದಲ್ಲಿ ಕೂರಿಸಿ ಇತರ ಅತಿಥಿಗಳನ್ನು ಸ್ವಾಗತಿಸಲು ಹೊರಟ.

ಬಾಲಚಂದ್ರ ಅವರು ನನ್ನನ್ನು ಕುರಿತು, "ರವಿ ಸಾರ್ ತುಂಬಾ ಒಳ್ಳೆಯೋರು.

ನಿಮಗೆ ಅವರು ಏನಾಗಬೇಕು ?' ಅಂತ ಕೇಳಿದರು.

"ಅವನು ನನ್ನ ಮೈದುನನ ಮಗ." ಅಂತ ಉತ್ತರಿಸಿದೆ.

"ನಿಮಗೆ ಕನ್ನಡ ಸಿನಿಮಾ ಪ್ರಪಂಚ ಅಷ್ಟೇನೂ ಪರಿಚಯ ಇಲ್ಲ ಅಂತ ಕಾಣುತ್ತೆ" ಬಾಲಚಂದ್ರ ಮಾರ್ಮಿಕವಾಗಿ ನುಡಿದರು. "ಯಾಕೆ ಹಾಗಂತೀರಾ" ಅಂತ ಕೇಳಿದೆ.

"ರಾಜೇಂದ್ರ ಬಾಬು ಖ್ಯಾತ ನಿರ್ದೇಶಕರು. ಅಂಬರೀಷ್ ಆ ಕಾಲದಲ್ಲಿ ಮನೆಮಾತಾಗಿದ್ದವರು. ಆ ಹೆಸರುಗಳನ್ನು ಕೇಳಿದಾಗ ನಿಮ್ಮ ಮುಖದಲ್ಲಿ ಒಂದು ನಿರ್ಲಿಪ್ತತೆ ಇತ್ತು. ಹಾಗಾಗಿ ನಿಮ್ಮ ಜಗತ್ತೇ ಬೇರೆ ಇರಬಹುದು ಅಂತ ಊಹಿಸಿದೆ"

"ನಿಜ. ನಾನು ವೃತ್ತಿಯಲ್ಲಿ ವೈದ್ಯ. ಪ್ರವೃತ್ತಿಯಲ್ಲಿ ಬರಹಗಾರ. ನನ್ನ ಗೆಳೆಯ ಶರಲೇಖನ ಪತ್ತೇದಾರಿ ಸಾಹಸಗಳನ್ನು ದಾಖಲಿಸುವುದು ನನ್ನ ಒಂದು ಹವ್ಯಾಸ" ಎಂದು ಹೇಳಿದೆ.

"ನಾನೂ ಸಹಾ ಸಾಹಿತ್ಯ ಪ್ರಿಯ. ಕೈಲಾಸಂ ಅವರ ಅನೇಕ ನಾಟಕಗಳಲ್ಲಿ ಹಿಂದೆ ನಾನು ಪಾತ್ರ ವಹಿಸಿದ್ದುಂಟು. ಹವ್ಯಾಸಿ ನಾಟಕರಂಗದಲ್ಲಿ ತಕ್ಕಮಟ್ಟಿಗೆ ಹೆಸರು ಮಾಡಿದ ಮೇಲೆ ಸಿನಿಮಾ ರಂಗ ಪ್ರವೇಶಿಸಿದೆ. ಇರಲಿ ನನ್ನ ಪುರಾಣ ಇಷ್ಟು ಸಾಕು. ಈಗ ಹೇಳಿ ಒಬ್ಬ ನಟ ನಾಟಕದಲ್ಲಿ ನಟಿಸುವುದಕ್ಕೂ ಸಿನಿಮಾದಲ್ಲಿ ನಟಿಸುವುದಕ್ಕೂ ಏನು ವ್ಯತ್ಯಾಸ ತಿಳಿಸಬಲ್ಲಿರಾ?"

ಬಾಲಚಂದ್ರರಿಂದ ಬೋರು ಹೊಡೆಸಿಕೊಳ್ಳುವುದಕ್ಕೆ ಸಿದ್ಧನಾಗುತ್ತಿದ್ದ ನನಗೆ ಅವರ ಈ ಪ್ರಶ್ನೆ ತೀರ ಅನಿರೀಕ್ಷಿತವಾಗಿತ್ತು. ಸ್ವಪ್ರಶಂಸೆಯಲ್ಲೇ ಕಾಲ ಕಳೆಯುತ್ತಾನೆ ಎಂದುಕೊಂಡಿದ್ದ ಆಸಾಮಿ ಹಠಾತ್ತನೆ ಒಂದು ಸ್ವಾರಸ್ಯಕರವಾದ ಬೌದ್ಧಿಕ ವಿಷಯವೊದನ್ನು ಪ್ರಸ್ತಾಪಿಸಿದ್ದು ನೋಡಿ ಖುಷಿ ಆಯಿತು.

"ಇಲ್ಲ. ನಾಟಕದಲ್ಲಿ ಪಾತ್ರವಹಿಸುವುದಕ್ಕೂ ಸಿನಿಮಾದಲ್ಲಿ ನಟಿಸುವುದಕ್ಕೂ ಏನು ವ್ಯತ್ಯಾಸಗಳು ನೀವೇ ಹೇಳಿಬಿಡಿ." ಅಂತ ನಾನು ಉತ್ತೇಜಿಸಿದೆ.

ಅವರು ಹೇಳಿದ್ದೆಲ್ಲವನ್ನೂ ನಾನು ಇಲ್ಲಿ ದಾಖಲಿಸುವುದಿಲ್ಲ. ಒಟ್ಟಿನಲ್ಲಿ ಆತನಿಗೆ ತನ್ನ ಕ್ಷೇತ್ರದ ಬಗ್ಗೆ ಇದ್ದ ಜ್ಞಾನದ ವಿಶಾಲ ಹರಹು, ಸಂವೇದನಾಶೀಲತೆ, ಇತರ ನಟ ನಟಿಯರ ಬಗ್ಗೆ ಅವರು ಹಂಚಿಕೊಂಡ ತಮಾಷೆ ಪ್ರಸಂಗಗಳು ಇವನ್ನೆಲ್ಲಾ ಕೇಳುತ್ತಿದ್ದ ನನಗೆ ಕಾಲ ಸರಿದದ್ದೇ ತಿಳಿಯಲಿಲ್ಲ. ರವಿ ಬಂದು ನಮ್ಮನ್ನು ಊಟಕ್ಕೆ ಎಬ್ಬಿಸಿದಾಗ, ಬಾಲಚಂದ್ರ ನನ್ನನ್ನು ಕುರಿತು, "ನಿಮ್ಮೊಂದಿಗೆ ಹರಟಿದ್ದು ಬಹು ಅಪ್ಯಾಯಮಾನವಾಗಿತ್ತು. ಖಂಡಿತಾ ನೀವು ರವಿ ಸಾರ್‌ರೊಂದಿಗೆ ನಮ್ಮ ಮನೆಗೆ ಬರಬೇಕು" ಎಂದು ಹೇಳಿ, ಪರಸ್ಪರ ಮೊಬೈಲ್ ನಂಬರ್‌ಗಳ ವಿನಿಮಯದನಂತರ ಅವರು ಹೊರಟರು. ನಾನು ಊಟ ಮುಗಿಸಿ ಮನೆಗೆ ಹಿಂತಿರುಗಿದೆ.

ಎರಡು ದಿನಗಳ ನಂತರ ಫೋನ್ ರಿಂಗಾಯಿತು. ಆ ಬದಿಯಲ್ಲಿ ಬಾಲಚಂದ್ರ, "ಇಂದು ಸಂಜೆ ನಮ್ಮ ಮನೆಗೆ ಬರಲಾದೀತೆ? ರವಿ ಸಾರ್‌ಗೂ ನಮ್ಮ ಮನೆಗೆ ಬರಲು ಆಹ್ವಾನಿಸಿರುವೆ. ಅವರಿಗೆ ನನ್ನ ಮನೆ ಗೊತ್ತು ನೀವು ಅವರೊಂದಿಗೇ ಬರಬಹುದು." ಎಂದು ಆಹ್ವಾನಿಸಿದರು. ಇದೆಲ್ಲಿಯ ಗ್ರಹಚಾರವಪ್ಪಾ ಎಂದು ನನಗೆ ಅನಿಸಿದರೂ ಹೋಗದಿದ್ದರೆ ರವಿ ಏನು ತಿಳಿದುಕೊಳ್ಳುತ್ತಾನೋ ಎಂಬ ದಾಕ್ಷಿಣ್ಯದಿಂದ ನಾನು ಆಹ್ವಾನವನ್ನು ಮನ್ನಿಸಿ ಒಪ್ಪಿಗೆ ಸೂಚಿಸಿದೆ.

ಆ ಮೇಲೆ ನಾನು ಸಂಜೆಯ ಕಾರ್ಯಕ್ರಮವನ್ನು ಭದ್ರಗೊಳಿಸಲು ರವಿಗೆ ಫೋನ್ ಮಾಡಿ, ಬಾಲಚಂದ್ರರ ಆಹ್ವಾನದ ಬಗ್ಗೆ ಹೇಳಿದೆ.

ರವಿ ಗಾಬರಿಯಿಂದ "ನೀವು ಒಪ್ಪಿಕೊಳ್ಳಲಿಲ್ಲ ತಾನೇ?" ಅಂತ ಕೇಳಿದ." ಅದ್ಯಾಕೆ ಹಾಗಂತೀಯಾ? ನಿನ್ನ ಪರಿಚಯದವನು ಅಂತ ಒಪ್ಪಿಕೊಂಡು ಬಿಟ್ಟೆ ಕಣೋ. " "ಅಯ್ಯೋ ರಾಮ, ಆ ಬಾಲಚಂದ್ರ ಹಳೇ ತಲೆಮಾರಿನ ನಟವರ್ಗದೋರು. ಹಾಗಾಗಿ ಅವರಿಗೆ ಈಚೆಗೆ ಯಾವ ಕೆಲಸಗಳೂ ಸಿಗ್ತಾ ಇಲ್ಲ. ನನಗೊಂದು ನಟಿಸೋ ಛಾನ್ಸ್ ಕೊಡು ಅಂತ ನನಗೆ ದುಂಬಾಲು ಬಿದ್ದಿದ್ದಾರೆ. ಈಗ ನಿನ್ನ ಮೂಲಕ ನನ್ನ ತಾರೀಫ್ ಮಾಡುಕ್ಕೆ ಪ್ರಯತ್ನ ಇದು. ಸರಿ, ನಮ್ಮ ಮಾವ ಒಪ್ಪಿದರೆ  ಬರ್ತೀನಿ ಅಂತ ಹೇಳಿದ್ದೆ. ತಕ್ಷಣ ನಿಮಗೆ ಫೋನ್ ಮಾಡಿಬಿಟ್ಟಿದ್ದಾನೆ ಖದೀಮ! ಆಯ್ತು. ಸಂಜೆ ಏಳಕ್ಕೆ ನಿಮ್ಮನ್ನ ಪಿಕ್ ಮಾಡ್ತೀನಿ ಮಾವ" ಅಂತ ರವಿ ಹೇಳಿದ.

ಬಾಲಚಂದ್ರರ ಮನೆ ಇದ್ದದ್ದು, ಪದ್ಮನಾಭ ನಗರದಲ್ಲಿ. ದೇವೇಗೌಡ ಪೆಟ್ರೋಲ್ ಬಂಕಿನ ಆಸುಪಾಸು ಎನ್ನಬಹುದು. ಹಳೆಯ ಕಾಲದ ಮನೆ. ಪುಟ್ಟ ಕಾಂಪೌಂಡು. ಮಲ್ಲಿಗೆ, ಪಾರಿಜಾತದ ಗಿಡಗಳು. ಎಡಬದಿಯಲ್ಲಿ ತುಳಸಿ ಕಟ್ಟೆ. ಜಾಲರಿ ಕಿಟಕಿಗಳ ವೆರಾಂಡಾದಲ್ಲಿ ಬಾಲಚಂದ್ರ ನಮ್ಮ ಬರವನ್ನೇ ಇದಿರು ನೋಡುತ್ತಿದ್ದರು. ನಮ್ಮನ್ನು ಕಂಡ ಕೂಡಲೇ ಅವರ ಮುಖ ಊರಗಲವಾಯಿತು.

ಮನೆಯೊಳಗೆ ಸೇರಿ ಅವರ ಪುಟ್ಟ ಡ್ರಾಯಿಂಗ್ ರೂಮಿನಲ್ಲಿ ಕುಳಿತೆವು. ತುಂಬಾ ಅಚ್ಚುಗಟ್ಟು ಆ ಕೊಠಡಿ. ಒಂದು ಗೋಡೆಗೆ ಆತುಕೊಂಡಂತೆ ಪುಸ್ತಕದ ಬೀರುಗಳು. ಇನ್ನೊಂದು ಗೋಡೆಯ ಬದಿಯ ಷೋ ಕೇಸಿನಲ್ಲಿ ಅವರಿಗೆ ಬಂದಿದ್ದ ಅನೇಕ ಪಾರಿತೋಷಕಗಳು, ಗೌರವ ಕಾಣಿಕೆಗಳು.

ನಮ್ಮ ಮುಂದೆ ಬಲಗಡೆ ಒಂದು ತಾತನ ಕಾಲದ ಸೋಫಾ. ಮರದ ಆರ್ಮ್ ಸಪೋರ್ಟ್ ಇರುತ್ತಲ್ಲಾ, ಅಂತಹದು. ಅದರ ಮೇಲೆ ಒಂದು ಬಿಳೀ ಬಣ್ಣದ ಸ್ವೆಟರ್ ಬಿದ್ದಿತ್ತು. ನಾವೆಲ್ಲಾ ಕುಳಿತ ಮೇಲೆ ಬಾಲಚಂದ್ರ , "ಜಾನಕಮ್ಮಾ" ಅಂತ ಕೂಗಿದಾಕ್ಷಣ ಒಬ್ಬ ಮಧ್ಯವಯಸ್ಕ ಮಹಿಳೆ ಬಂದರು.

ಅವರನ್ನು ನಮಗೆ ಪರಿಚಯ ಮಾಡಿಸುತ್ತಾ,  "ಇವರು ಜಾನಕಮ್ಮ, ನಮ್ಮ ಮನೆ ಔಟ್‌ಹೌಸಿನಲ್ಲಿ ಇವರು ಇರೋದು. ಮನೆ ಕೆಲಸಕ್ಕೆ ಎಲ್ಲ ಸಹಾಯಾನೂ ಇವರದ್ದೇ. ಇವರೇ ಇವತ್ತು ನಮಗೆ ಅನ್ನದಾತರು" ಅಂತ ಬಹು ಆತ್ಮೀಯತೆಯಿಂದ ನುಡಿದರು.

ಜಾನಕಮ್ಮ ಎಲ್ಲರಿಗೂ ಪಾನಕ ಕೊಟ್ಟನಂತರ ಬಾಲಚಂದ್ರ ಮಾತಿಗೆ ಪ್ರಾರಂಭಿಸಿದರು. "ನೀವಿಬ್ಬರೂ ನಮ್ಮ ಮನೆಗೆ ಬರಲು ಒಪ್ಪಿದ್ದು ನನ್ನ ಸುಯೋಗ ಅಂತ ಭಾವಿಸುವೆ. ನನ್ನ ಈ ಆಹ್ವಾನಕ್ಕೆ ಕಾರಣದ ಬಗ್ಗೆ ತಮ್ಮ ಮನಸ್ಸಿನಲ್ಲಿ ತಪ್ಪು ಕಲ್ಪನೆ ಇರಬಹುದು. ಆ ತಪ್ಪು ಕಲ್ಪನೆ ಏನು ಎಂಬುದನ್ನು ನಾನು ಊಹಿಸಬಲ್ಲೆ. ಹೇಳಲೇ?'

"ಅಗತ್ಯವಾಗಿ ಹೇಳಿ. ನಮ್ಮ ಮಟ್ಟಿಗೆ ನೀವು ಇಷ್ಟು ಆತ್ಮೀಯತೆಯಿಂದ ಕರೆದ ಮೇಲೆ ಒಪ್ಪದಿರುವುದು ಶಿಷ್ಟಾಚಾರವಲ್ಲ ಎಂಬುದಷ್ಟೇ ಕಾರಣ" ಅಂತ ರವಿ ಹೇಳಿದ.

"ಅದು ನಿಮ್ಮ ದೊಡ್ಡತನ. ಆದರೆ ನಾನು ಹಲವು ತಿಂಗಳುಗಳಿಂದ ನಟನೆಗೆ ಒಂದು ಅವಕಾಶ ಕೊಡಿ ಎಂದು ದುಂಬಾಲು ಬಿದ್ದಿದ್ದು ನಿಜ. ಹಾಗಾಗಿ ಈ

ಔತಣದ ಮೂಲಕ ನಿಮ್ಮ ಮನಸ್ಸನ್ನು ಹದಗೊಳಿಸುವ ಪ್ರಯತ್ನ ಇದು ಎಂದು ನೀವು ಭಾವಿಸಿರುವ ಸಾಧ್ಯತೆ ಇರಬಹುದಲ್ಲವೇ?'

"ಬಾಲಚಂದ್ರ ಅವರೇ, ನೀವು ಹಿರಿಯರು. ಆದರೆ ನಿಮ್ಮ ನಟನಾ ಸಂಪ್ರದಾಯ ಹಳೆಯ ಕಾಲದ್ದು. ನಿಮ್ಮ ಅನಿಸಿಕೆ ನಿಜ ಅಂತ ಹೇಳಲು ನನ್ನದೇನೂ ಅಭ್ಯಂತರವಿಲ್ಲ." ರವಿ ನಗುತ್ತಾ ಹೇಳಿದ.

"ಈ ಆಹ್ವಾನದ ನಿಜವಾದ ಕಾರಣ ಇದು..." ಎನ್ನುತ್ತಾ ಬಾಲಚಂದ್ರ ಎದ್ದು ನಿಂತು ತಮ್ಮ ಪಾರಿತೋಷಕಗಳಿದ್ದ ಬೀರುವಿನ ಬಳಿ ಸಾರಿ, "ಇಗೋ ಇಲ್ಲಿನ ಪ್ರತಿಯೊಂದು ವಸ್ತುವೂ ನನಗೆ ಒಂದು ಅವಿಸ್ಮರಣೀಯ ಘಟನೆಯನ್ನು ನೆನಪಿಸುತ್ತದೆ. ನನ್ನ ನಂತರ ಇವುಗಳೆಲ್ಲಾ ಮೂಲೆಗುಂಪಾಗಬಹುದು ಎಂಬ ಭಯ ನನ್ನನ್ನು ಆವರಿಸಿತು. ನಿಮ್ಮಂತಹ ಒಬ್ಬ ಒಬ್ಬ ಸಂವೇದನಾಶೀಲ ಸಜ್ಜನರಿಗೆ ಇದನ್ನು ಒಪ್ಪಿಸಿಕೊಡುವ ಹಂಚಿಕೆಯಿಂದ ನಿಮ್ಮನ್ನು ಇಲ್ಲಿಗೆ ಕರೆತಂದೆ." ಎಂದು ಹೇಳಿ ತಮಗೆ ಅತ್ಯಮೂಲ್ಯವೆನಿಸಿದ್ದ ಆ ಪಾರಿತೋಷಕಗಳನ್ನು ಒಂದೊಂದಾಗಿ ವಿವರಿಸಲು ಪ್ರಾರಂಭಿಸಿದರು. ನನಗಂತೂ ಹೃದಯ ತುಂಬಿಬಂತು. ಕೊನೆಗೆ ಬಾಲಚಂದ್ರ ನಮ್ಮ ಮುಂದಿದ್ದ ಸೋಫಾದ ಬಳಿಬಂದು ಅದರ ಮೇಲೆ ಹರಡಿದ್ದ ಆ ಬಿಳೀ ಸ್ವೆಟರನ್ನು ಕೈಗೆತ್ತಿಕೊಂಡರು. ಅದನ್ನು ಸ್ನೇಕ್ ಪ್ಯಾಟರ್ನ್‌ನಲ್ಲಿ ಹೆಣೆದಿದ್ದರು.

"ಈ ಸ್ವೆಟರು ಇಲ್ಲಿರುವ ಎಲ್ಲಾ ವಸ್ತುಗಳಲ್ಲಿ ನನಗೆ ಬಹು ಆಪ್ತವಾದದ್ದು ಅಂತ ಹೇಳಬಲ್ಲೆ. ತೊಂಭತ್ತರ ದಶಕದಲ್ಲಿ ನಾನು ವೇಮಗಲ್ ಜಗನ್ನಾಥ ರಾವ್ ಎಂಬ ನಿರ್ದೇಶಕರೊಂದಿಗೆ ಕೆಲಸ ಮಾಡುತ್ತಿದ್ದೆ. ನನ್ನ ಸಹನಟ ಹರ್ಷ. ಹೀರೋಯಿನ್ ಮಾಧವಿ ಎಂಬ ಯುವತಿ. ಆಂಧ್ರ ಮೂಲದ ಈಕೆ ತನ್ನ ನಟನಾ ಚಾತುರ್ಯದಿಂದ ಎಲ್ಲರನ್ನೂ ಬೆರಗುಗೊಳಿಸಿದ್ದಳು. ಮಾಧವಿ ಸ್ನೇಹ ಜೀವಿ. ಎಲ್ಲ ನಟರೊಂದಿಗೂ ಬಹು ಸಲಿಗೆ. ನನಗಂತೂ ಷಿ ಈಸ್ ಟಾಪ್ಸ್ ಅಂತ ಖಚಿತವಾಗಿತ್ತು. ಸಮಸ್ಯೆ ಏನಾಗಿತ್ತು ಅಂದರೆ ನನ್ನ ಸಹನಟ ಹಾಗೂ ಆಪ್ತ ಗೆಳೆಯ ಹರ್ಷನಿಗೂ ಮಾಧವಿಯ ಬಗ್ಗೆ ಇದೇ ಬಗೆಯ ಹುಚ್ಚು ಅಭಿಮಾನ ಬೆಳೆದಿತ್ತು. ಹರ್ಷನಿಗೆ ಅತೀವ ನೋವನ್ನುಂಟುಮಾಡದೇ ನಾನು ಮಾಧವಿಯನ್ನು ನನ್ನವಳನ್ನಾಗಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಸಮಸ್ಯೆಯನ್ನು ಪರಿಹರಿಸುವ ಆಶೆಯಿಂದ ಒಮ್ಮೆ ನಾನು ಹರ್ಷನ ಬಳಿಸಾಗಿದೆ. ನನ್ನ ಕೈಯಲ್ಲಿ ಒಂದು ಗುಲಾಬಿ. "ಇಬ್ಬರೂ ಒಂದೊಂದು ಎಸಳನ್ನು ಕೀಳೋಣ. ಕೊನೆಯ ಎಸಳು ಯಾರದ್ದಾಗುತ್ತೋ ಅವರು ಮಾಧವಿಯನ್ನು ಸಮೀಪಿಸಿ ತಮ್ಮ ಪ್ರೇಮವನ್ನು ತಿಳಿಸಬಹುದು." ಎಂದೆ. ಆತ ಒಪ್ಪಿದ. ಕೊನೆಯ ಎಸಳು ನನಗೆ ಬಂತು. ಎದೆಯುಬ್ಬಿಸಿಕೊಂಡು ನಾನು ಮಾಧವಿಯ ಬಳಿ ಹೋಗಿ ಅವಳನ್ನು ಮದುವೆಯಾಗುವ ಆಶಯವನ್ನು ವ್ಯಕ್ತಪಡಿಸಿದೆ. ಆಕೆಯ ಮುಖ ಕಪ್ಪಿಟ್ಟಿತು. "ನಾನು ಎಂದೋ ನನ್ನ ಹೃದಯವನ್ನು ಹರ್ಷನಿಗೆ ಅರ್ಪಿಸಿಬಿಟ್ಟಿದ್ದೇನೆ. ಅವನಿಗೆ ಅದನ್ನು ತಿಳಿಸುವ ಅವಕಾಶ ಬಂದಿಲ್ಲ" ಎಂದಳು ಮಾಧವಿ.

ನಾನು ಭಗ್ನ ಹೃದಯಿಯಾಗಿ ಹರ್ಷನ ಹತ್ತಿರ ಹೋಗಿ ಅವನಿಗೆ ವಿಷಯ ತಿಳಿಸಿದೆ. ಅವನು ನನ್ನನ್ನು ತಬ್ಬಿಕೊಂಡು, "ಬಾಲಾ, ಇವತ್ತು ನನಗೆ ಸಂತಸದ ಸುದ್ದಿಗಳ ಸುರಿಮಳೆ. ಇದೇತಾನೇ ಮುಂಬೈ ನಿಂದ ಮೆಸೇಜ್ ಬಂದಿದೆ. ಬಾಲಿವುಡ್ ನಲ್ಲಿ ನನಗೊಂದು ನಟನೆಯ ಅವಕಾಶ ಒದಗಿದೆ. ಈಗಲೇ ಹೋಗಿ ಮಾಧವಿಗೆ ತಿಳಿಸುವೆ. " ಎಂದು ಹೇಳಿ ಮಾಧವಿಯತ್ತ ಹೊರಟ. ಅಂದಿನಿಂದ ನನ್ನ ವೈವಾಹಿಕ

ಜೀವನದ ಕನಸು ಗೋರಿಯನ್ನು ಕಂಡಿತು."

ನಾವಿಬ್ಬರೂ ಮಂತ್ರಮುಗ್ಧರಾಗಿ ಬಾಲಚಂದ್ರನ ಮಾತುಗಳನ್ನು ಕೇಳುತ್ತಿದ್ದೆವು. ಆತ ತನ್ನ ಜೀವಿತದ ಎಲ್ಲ ಭಾವನಾತ್ಮಕ ಕ್ಷಣಗಳನ್ನು ಯಾವುದೇ ಭಿಡೆಯಿಲ್ಲದೇ ಎಳೆ ಎಳೆಯಾಗಿ ನಮ್ಮ ಮುಂದೆ ಬಿಚ್ಚಿಡುತ್ತಿದ್ದ. ಅವನ ಕಥಾನಕ ಮುಂದುವರಿಯಿತು. ತಾನು ಮುಂಬೈನಲ್ಲಿ ವಾಸ್ತವ್ಯ ಹೂಡಿದ ನಂತರ ಮಾಧವಿಯನ್ನು ಅಲ್ಲಿಗೆ ಕರೆಸಿಕೊಳ್ಳುವ ಭಾಷೆ ಕೊಟ್ಟು ಹರ್ಷ ಮುಂಬೈಗೆ ತೆರಳಿದ್ದು, ಅಲ್ಲಿ ಹಲವಾರು ತಿಂಗಳುಗಳ ನಂತರ ಆತ ಮತ್ತೊಬ್ಬ ತರುಣಿಯನ್ನು ಮದುವೆಯಾದದ್ದು, ಮಾಧವಿ ಹರ್ಷನಿಂದಾದ ಮಾನಸಿಕ ಆಘಾತಕ್ಕೆ ದೈಹಿಕವಾಗಿ ಸ್ಪಂದಿಸಿ, ಕ್ಯಾನ್ಸರ್‌ಗೆ ತುತ್ತಾದದ್ದು, ಅವಳ ಕೊನೆಯ ದಿನಗಳಲ್ಲಿ ಬಾಲಚಂದ್ರ ಅವಳಿಗೆ ಸಾಂತ್ವನ ನೀಡಿದ್ದು ಇವೆಲ್ಲವನ್ನೂ ಕೇಳಿಸಿಕೊಳ್ಳುತ್ತಾ ರವಿ ಮತ್ತು ನಾನು ಬೇರೆಯದೇ ಆದ ಒಂದು ಲೋಕಕ್ಕೆ ತೆರಳಿದ್ದೆವು.

ಬಾಲಚಂದ್ರ ಮುಂದುವರಿದು, "ಅವಳ ಕೊನೆಯ ದಿನಗಳಲ್ಲಿ ಅವಳನ್ನು ಅಕ್ಕರೆಯಿಂದ ನೋಡಿಕೊಂಡ ಸಂತೃಪ್ತಿ ನನಗಿದೆ. ಒಮ್ಮೆ ಅವಳನ್ನು ನೋಡಲು ಹೋಗಿದ್ದಾಗ, ಅವಳು, "ಬಾಲ, ನನ್ನದೊಂದು ಕೊನೆಯ ಆಶೆ. ನಡೆಸಿಕೊಡಬೇಕು" ಅಂತ ಹೇಳಿ, ಈ ಸ್ವೆಟರನ್ನು ನನ್ನ ಕೈಗಿಟ್ಟಳು. ಹರ್ಷ ನನ್ನ ಕೈಬಿಟ್ಟರೂ ನನಗೆ ಅವನನ್ನ ಬಿಡುವುದು ಸಾಧ್ಯವಾಗಿಲ್ಲ. ಹಿಂದಿನ ಎರಡು ತಿಂಗಳಿಂದ ಈ ಸ್ವೆಟರನ್ನು ಅವನಿಗಾಗಿ ಹೆಣೆದಿದ್ದೇನೆ. ನನ್ನ ನಂತರ ನೀನು ಅವನನ್ನು ಸಂಪರ್ಕಿಸಿ ಇದು ಅವನಿಗೆ ನನ್ನ ಕೊನೆಯ ಉಡುಗೊರೆ ಅಂತ ಹೇಳಿ, ಅವನಿಗೆ ತಲುಪಿಸಬೇಕು." ಎಂದು ವಿನಂತಿಸಿದಳು.

ಎಷ್ಟೇ ಪ್ರಯತ್ನ ಮಾಡಿದರೂ ಅವಳ ಈ ಒಂದು ಆಶೆಯನ್ನು ನೆರವೇರಿಸುವುದು ನನ್ನಿಂದ ಸಾಧ್ಯವಾಗಿಲ್ಲ. ಅವಳ ಮನೆಯಿಂದ ಹಿಂತಿರುಗಿದಾಗಿನಿಂದ ಈ ಸ್ವೆಟರು ಇಲ್ಲೇ ಬಿದ್ದಿದೆ." ಎಂದು ಕಣ್ಣೊರೆಸಿಕೊಳ್ಳುತ್ತಾ ಬಾಲಚಂದ್ರ ಹೇಳಿದರು.

ಅಷ್ಟು ಹೊತ್ತಿಗೆ ಜಾನಕಮ್ಮ ಡ್ರಾಯಿಂಗ್ ರೂಮಿಗೆ ಬಂದು. "ಊಟಕ್ಕೆ ಎಲ್ಲಾ ಸಿದ್ಧ. ಯಾವಾಗ ಬೇಕಾದರೂ ಬರಬಹುದು" ಎಂದರು. ನಂತರ ಸೋಫಾದ ಮೇಲಿದ್ದ ಸ್ವೆಟರನ್ನು ನೋಡಿ, "ಪುಟ್ಟು ತನ್ನ ಸ್ವೆಟರನ್ನ ಬೆಳಗಿನಿಂದ ಹುಡುಕ್ತಾ ಇದ್ಲು ಇಲ್ಲಿದೆಯಾ ಇದು" ಎನ್ನುತ್ತಾ, ಅದನ್ನ ಕೈಗೆತ್ತಿಕೊಂಡು ತೆರಳಿದರು.

ರವಿ ಅವಾಕ್ಕಾಗಿ ಬಾಲಚಂದ್ರರ ಮುಖ ನೋಡಿದ. ಅವರು, "ನನ್ನ ನಟನಾ ಪ್ರತಿಭೆಯನ್ನ ನಿಮ್ಮ ಮುಂದೆ ಪ್ರದರ್ಶಿಸುಕ್ಕೆ ಒಂದು ಅವಕಾಶ ಕಲ್ಪಿಸಿಕೊಂಡೆ. ತಪ್ಪಾಗಿದ್ದರೆ ಕ್ಷಮೆ ಇರಲಿ" ಅಂತ ವಿನಂತಿಸಿಕೊಂಡರು.

ರವಿ, ಬಾಲಚಂದ್ರರನ್ನು ಕುರಿತು, "ಅಭಿನಯ ವಿಶಾರದರೇ, ನಿಮ್ಮ ಸ್ಕ್ರಿಪ್ಟ್ ರೆಡಿ ಇರುತ್ತೆ. ನಾಳೆ ಆಫೀಸಿಗೆ ಬಂದು ಕಲೆಕ್ಟ್ ಮಾಡಬಹುದು." ಎಂದ ನಂತರ ಎಲ್ಲರೂ ಊಟ ಮಾಡಲು ಹೊರಟೆವು. ■

**ABC ಪದ್ಯ**

A ನು ಬರೆಯಲಿ ನಾನು
B ಳಿಯ ಹಾಳೆಯ ಮೇಲೆ
C ಗದಂಥ ಗೆಳತಿ ನಿನಗೆ

# ಎಚ್.ಕೆ.ಒ.ಕೆ

**ಬೇಲೂರು ರಾಮಮೂರ್ತಿ**

ಸೋಮಿ ಆಗಾಗ ಸೋಮುನ ಒಂಟಿಯಾಗಿ ಬಿಟ್ಟು ಅಮ್ಮನ ಮನೆಗೆ, ತಂಗಿ ಮನೆಗೆ ಅಂತ ಹೋಗುವುದು ಇದೇನೂ ಹೊಸದಲ್ಲ. ಸುಮಾರು ಮೂವತ್ತು ವರ್ಷಗಳಿಂದಲೂ ನಡೆಯುತ್ತಿದೆ. ಹಾಗೆ ಅವಳು ಹೋದಷ್ಟು ದಿನ ಸೋಮುಗೆ ಇಲ್ಲಿ ಸ್ವರ್ಗ ಅಂದರೆ ತಪ್ಪಿಲ್ಲ. ಈ ಸಾರಿ ಸೋಮಿ ಊರಿಗೆ ಹೊರಟಾಗ ರೀ ಕಸದ ಟೈಂ ಟೇಬಲ್ ಅಲ್ಲಿ ಗೋಡೆಗೆ ಅಂಟಿಸಿದ್ದೀನಿ. ಅದನ್ನು ನೋಡ್ಕೊಂಡು ಯಾವತ್ತು ಹಸಿ ಕಸ ಯಾವತ್ತು ಒಣ ಕಸ ಅಂತ ಅದರ ಪ್ರಕಾರ ಹಾಗೇ ಇಡಿ. ಇಲ್ಲದಿದ್ದರೆ ಕಸ ತಗೊಂಡು ಹೋಗೋಕೆ ಬರೋನು ಕಸಾನ ನಿಮ್ಮ ಮುಖದ ಮೇಲೇ ಎಸೆದು ಹೋದಾನು ಅಂತ ಎಚ್ಚರಿಸಿ ಹೋಗಿದ್ದಳು. ಸೋಮುಗೆ ಹಸಿ ಕಸ ಯಾವುದು ಒಣ ಕಸ ಯಾವುದು ಅನ್ನುವುದು ತಿಳಿದಿಲ್ಲವೇ. ಹೀಗಾಗಿ ಅವನು ಸೋಮಿ ಮಾತಿಗೆ ಅಷ್ಟು ಗಮನ ಕೊಡಲಿಲ್ಲ.

ಮೊದಲೊಂದೆರಡು ದಿನ ಫ್ರಿಜ್‌ನಲ್ಲಿದ್ದ ಗೊಜ್ಜು, ಪಲ್ಯ ಇವುಗಳಲ್ಲೇ ಹೊಟ್ಟೆ ತುಂಬಿಸಿಕೊಂಡ. ಹೆಂಡ್ತಿ ಊರಲ್ಲಿಲ್ಲ ಅಂತ ಕೆಲವು ಸ್ನೇಹಿತರು ರಾತ್ರಿ ಮನೆಗೆ ಕರೆದು ಊಟ ಹಾಕಿದರು. ಮರುದಿನ ಉಪ್ಪಿಟ್ಟು ಮಾಡಿಕೊಳ್ಳೋಣ ಅಂತ ಅವನು ಹಿಂದಿನ ದಿನವೇ ಕಾಯಿ ಒಡೆದು ತುರಿದು ತುರಿಯನ್ನು ಡಬ್ಬದಲ್ಲಿ ಹಾಕಿ ಫ್ರಿಜ್ಜಿನಲ್ಲಿಟ್ಟಿದ್ದ. ಹುಳಿಗೆ ಅಂತ ಸೌತೇ ಕಾಯಿ ಹೆಚ್ಚಿಕೊಂಡ. ಉಪ್ಪಿಟ್ಟಿಗೆ ಈರುಳ್ಳಿ ಸಿಪ್ಪೆ ಸುಲಿದು ಅದನ್ನು ಹೆಚ್ಚಿಕೊಂಡು ಇಟ್ಟುಕೊಂಡ. ಕರಟ, ಸೌತೇಕಾಯಿ ಸಿಪ್ಪೆ, ಈರುಳ್ಳಿ ಸಿಪ್ಪೆ ಎಲ್ಲವನ್ನೂ ಕಸದ ಡಬ್ಬಕ್ಕೆ ಹಾಕಿದ. ಬೆಳಗ್ಗೆ ಟೈಂ ಟೇಬಲ್ ನೋಡಿದಾಗ ಅವತ್ತು ಒಣ ಕಸ ತಗೊಂಡು ಹೊಗೋನು ಬರೋದು ಅಂತ ತಿಳೀತು. ಹಾಗಾದರೆ ಕರಟ ಮತ್ತು ಈರುಳ್ಳಿ ಸಿಪ್ಪೆ ಮಾತ್ರ ಹಾಕಬೇಕು. ಸೌತೇಕಾಯಿ ಸಿಪ್ಪೆ ನಾಳೆ ಹಾಕಬೇಕು ಅಂದುಕೊಂಡು ನೋಡಿದರೆ ಸೌತೇ ಕಾಯಿ ಸಿಪ್ಪೆ ಒಣಗಿಹೋಗಿತ್ತು. ಹಾಗಾದರೆ ಇದೂ ಒಣ ಕಸ ಇರಬೇಕು ಅನಿಸಿತು. ಆದರೂ ಒಂದು ಸಾರಿ ಖಚಿತಪಡಿಸಿಕೊಳ್ಳಬೇಕು ಅನಿಸಿ ಗುರುಮೂರ್ತಿಗೆ ಫೋನ್ ಮಾಡಿ ಲೋ ಸ್ವಲ್ಪ ಒಣ ಕಸ ಹಸಿ ಕಸಕ್ಕೆ ಸರಿಯಾದ ಡೆಫನಿಷನ್ ಕೊಡೋ ಅಂದ. ಗುರುಮೂರ್ತಿ ಬೆಳ್ ಬೆಳಗ್ಗೆ ನಿನ್ದು ಏನೋ ತಕರಾರು ಅಂತ ನೋಡಯ್ಯಾ ಈಗ ನೀನು ಉಸಿರಾಡ್ತಾ ಇದೀಯ ನಿನ್ನ ಮೈಯಲ್ಲಿ ನೀರು, ರಕ್ತ ಎಲ್ಲ ಇದೆ. ಹೀಗಾಗಿ ನೀನು ಬದುಕಿದೀಯ ಅಂದ್ಕೊ. ಹೊಟ್ಟೆಯೊಳಗೆ ನೀನು ಕುಡಿದಿರೋ ಕಾಫಿ, ನೀರು ಇನ್ನೂ ಏನೇನು ಕುಡಿದಿರ್ತೀಯೋ ಅದೆಲ್ಲಾ ಇರುತ್ತೆ. ಆಗ ನೀನು ಹಸಿ ಕಸ. ನೀನು ಸತ್ತುಹೋದೆ ಅಂದ್ಕೊ ಮೈಯಲ್ಲಿರುವ ನೀರೆಲ್ಲಾ ಒಣಗಿಹೋಗುತ್ತೆ. ರಕ್ತ ಹೆಪ್ಪುಗಟ್ಟಿರುತ್ತೆ ಆಗ ಒಣ ಕಸ ಅಂದ. ಸೋಮು ಅಲ್ವೋ ಬದುಕಿರೋರ್ನೇ ಕಸ ಮಾಡ್ತಿದೀಯಲ್ಲೋ. ನಾನು ಕೇಳಿದ್ದು ದಿನಾ ನಾವು ಕಾರ್ಪೊರೇಷನ್‌ನವರಿಗೆ ಕೊಡ್ತೀವಲ್ಲ ಅದು ಅಂದ. ಮತ್ತೆ ಗುರುಮೂರ್ತಿ ನಾನು ಹೇಳಿದ್ದನ್ನು ಕಾರ್ಪೊರೇಷನ್ನಿನವರಿಗೇ ಕೊಡೋದು ಅಲ್ವಾ ಅಂದಿದ್ದಕ್ಕೆ ಸೋಮುಗೆ ಸಿಟ್ಟು ಬಂದು ಕರೆ ಬಂದ್ ಮಾಡಿ ಕಾರ್ಪೊರೇಷನ್ನಿನವರಿಗೇ ಕರೆ ಮಾಡೋದು ಒಳ್ಳೇದು ಅಂದುಕೊಂಡ. ನಂತರ ಈ ಉಸಾಬರಿ ಎಲ್ಲ ಯಾಕೆ ಸೋಮಿಗೇ ಫೋನ್ ಮಾಡಿ ಕೇಳೋಣ ಅಂದುಕೊಂಡರೆ ಊರಲ್ಲಿ ಎಲ್ಲರೂ ನನ್ನನ್ನು ಆಡ್ಕೊಳ್ತಾರೆ ಅನಿಸಿ ನೇರ ಕಾರ್ಪೊರೇಷನ್ ಕಛೇರಿಗೆ ಫೋನ್ ಮಾಡೋಣ ಅಂದುಕೊಂಡು

ತನ್ನ ಕೆಲಸ ಮುಗಿಸಿಕೊಳ್ಳೋ ಹೊತ್ತಿಗೆ ಹತ್ತು ಗಂಟೆ ಆಗಿತ್ತು. ಇಷ್ಟೊತ್ತಿಗೆ ಕಾರ್ಪೊರೇಷನ್ನಿನವರು ಬಂದಿರ್ತಾರೆ ಅಂತ ಅವನಿಗೆ ಗೊತ್ತಿದ್ದ ನಂಬರು ತಿರುಗಿಸಿದ. ಹೇಳೋರು ಕೇಳೋರು ಯಾರೂ ಇಲ್ಲ ಅನ್ನುವಂತೆ ಫೋನ್ ಹೊಡ್ಕೊಂಡ್ತೇ ಹೊರತು ಯಾರೂ ರಿಸೀವ್ ಮಾಡಲಿಲ್ಲ. ಸರಿ ಇವತ್ತು ಕಸದ ತಂಟೆಯೇ ಬೇಡ ಅಂತ ಆಫೀಸಿಗೆ ಹೋದ.

ಸ್ವಲ್ಪ ಹೊತ್ತಾದ ಮೇಲೆ ಪಕ್ಕದಲ್ಲಿ ಕೂತಿದ್ದ ನಳಿನಿ ಏನ್ಸಾರ್ ಯಾವುದೋ ಕಸ ಮನಸಿನಲ್ಲಿ ತುಂಬ್ಕೊಂಡಿರೋ ಹಾಗೆ ಇದೀರ ಅಂತ ಕೇಳಿದಾಗ ಸೋಮು ಹೌಹಾರಿ ಅರೇ ನಿಮಗೆ ಹೇಗೆ ಗೊತ್ತ್ರೀ ಅಂತ ಕೇಳಿದ. ತಬ್ಬಿಬ್ಬಾದ ನಳಿನಿ ಯಾವುದು ಸರ್ ಅಂತ ಕೇಳಿದಳು. ಅದೇ ಕಸ ಅಂದ್ರಲ್ಲ ಅದೂರಿ ಅಂದ. ಅಂದ್ರೆ ನಿಜವಾಗಲೂ ನೀವು ಮನಸಿನಲ್ಲಿ ಕಸ ತುಂಬ್ಕೊಂಡಿದೀರ ಸರ್ ಅಂತ ಕೇಳಿದಳು. ನಾನು ತುಂಬ್ಕೊಂಡಿಲ್ಲ ರೀ ಅದೇ ಬಂದು ತುಂಬ್ಕೊಂಡಿದೆ ರೀ ನಳಿನಿ ನಿಮ್ಮ ಮನೇಲಿ ಒಣ ಕಸ ಹಸಿ ಕಸ ಅಂತ ಸೆಗ್ರೆಗೇಟ್ ಮಾಡ್ತೀರೇನ್ರೀ ಅಂತ ಕೇಳಿದ. ಹೌದು ಸರ್ ಖಂಡಿತಾ ಮಾಡ್ತೀವಿ. ಆದರೆ ಅದು ನಮ್ಮ ಮನೆಯವರ ಕೆಲಸ. ನಾನು ಕಸಕ್ಕೆಲ್ಲಾ ಕೈ ಹಾಕೋಲ್ಲ ಅಂದಳು. ಸರಿ ಈಗ ಕಾಯಿ ತುರಿದಿರ್ತೀವಲ್ಲ ಉಳಿದಿರೋ ಕರಟ ಹಸಿ ಕಸನೋ ಒಣಕಸಾನೋ, ಯಾಕಂದ್ರೆ ಕಾಯಿ ಹಸಿ ಹಸಿಯಾಗಿರುತ್ತೆ ಅಂದ. ನನಗೊತ್ತಿಲ್ಲ ಸರ್. ಯಾಕೆಂದ್ರೆ ನಾನು ಯಾವತ್ತು ಕಾಯಿ ತುರಿದಿಲ್ಲ ಅದೇನಿದ್ರೂ ನಮ್ಮ ಯಜಮಾನರ ಕೆಲಸ. ಆದರೂ ಒಂದು ಮಾತು ಹೇಳಬಹುದು ಅಂದ್ರೆ ಕಾಯಿ ತುರಿದಾದ ಮೇಲೆ ಕರಟಕ್ಕೆ ಓಂಚೂರಾದ್ರೂ ಅಂಟಿಕೊಂಡಿರುತ್ತಲ್ಲ ಅದಕ್ಕೇ ಅದು ಹಸಿ ಕಸ ಅನ್ನಬಹುದು ಅಂದಳು. ಸೋಮುಗೆ ಖುಷಿಯಾಯಿತು. ಸರಿ ಈರುಳ್ಳಿ ಸಿಪ್ಪೆ ಹಸಿ ಕಸನೋ ಒಣ ಕಸಾನೋ ಅಂತ ಕೇಳಿದ. ನಳಿನಿ ತಲೆಯಾಡಿಸಿ ಅದು ಮಾತ್ರ ಗೊತ್ತಿಲ್ಲಪ್ಪ ಯಾಕಂದ್ರೆ ನಮ್ಮನೇಲಿ ಈರುಳ್ಳಿ ತರೋದೇ ಇಲ್ಲ ಅಂದಳು. ಸೋಮು ತಲೆ ಕೆರ್ಕೊಂಡು ಈಗ ನೋಡಿ ಸೌತೇ ಕಾಯಿ ಸಿಪ್ಪೆ ಸುಲಿದಿರ್ತೀವಲ್ಲ ಅದು ಹಸಿಯಾಗಿದ್ರೆ ಹಸಿ ಕಸ, ಅದೇ ಸಿಪ್ಪೆ ಒಣಗಿಹೋಗಿದ್ರೆ ಅದು ಒಣ ಕಸಾನಾ ಅಂತ ಕೇಳಿದ. ಸರ್ ಕಸದ ಬಗೆಗೆ ನನಗೆ ಇಷ್ಟೊಂದು ಜ್ಞಾನ ಇಲ್ಲ ಮತ್ತೆ ನನಗೆ ಅಂಥಾ ಜ್ಞಾನವೂ ಬೇಕಾಗಿಲ್ಲ ಅಂದಳು. ಸೋಮು ತಲೆ ಕೆರ್ಕೊಂಡು ಏನೋಪ್ಪ ಎಲ್ಲಾ ಗೊಂದಲಪುರಂ ಆಗಿಹೋಗಿದೆ. ನಾನಂತೂ ಈಗೊಂದೆರಡು ದಿನಗಳಿಂದ ಗೊಂದಲಪುರಂ ಗೋಪಾಲಯ್ಯ ಆಗಿಹೋಗಿದ್ದೀನಿ. ನೋಡಿ ಅವತ್ತು ಮನೆಯೆಲ್ಲಾ ಕಸ ಗುಡಿಸಿದೆ. ಒಂದಿಷ್ಟು ಕಸ ಬಂತು. ಅದು ನನ್ನ ಪ್ರಕಾರ ಒಣಕಸಾನೇ. ಆದರೆ ಕಸ ತೆಗೆಯೋಕೆ ಮೊರ ತಗೊಂಡು ಬರುವಾಗ ಚೊಂಬಿನಲ್ಲಿದ್ದ ನೀರು ಕಸದ ಮೇಲೆ ಚೆಲ್ಲಿತು. ಕಸವೆಲ್ಲಾ ನೀರಾಯಿತು. ಈಗ ಹೇಳಿ ಅದು ಒಣ ಕಸಾನೋ ಇಲ್ಲಾ ಹಸಿ ಕಸಾನೋ ಅಂತ ಕೇಳಿದ. ನಳಿನಿ ನಕ್ಕು ನನಗನಿಸ್ತಿದೆ ಈಗ ನನ್ನ ಪಾಲಿಗೆ ನೀವೇ ಕಸ ಅಂದಳು. ಸೋಮು ಯಾಕ್ರೀ ಹಾಗಂತೀರ ಅಂತ ಕೇಳಿದ್ದಕ್ಕೆ ಏನು ಮಾಡೋದು ಸೋಮು ಸರ್ ನನಗೆ ಆಗಾಗ ಕೈಲಾಸಂ ಮೈ ಮೇಲೆ ಬರ್ತಾರೆ ಅವರು ಯಾವುದು ಕಸ ಅನ್ನೋದಕ್ಕೆ ಬಹಳ ಒಳ್ಳೆಯ ಉದಾಹರಣೆ ಕೊಟ್ಟಿದ್ದರು. ಅದು ನಿಮಗೆ ಗೊತ್ತಾ ಸಾರ್ ಅಂತ ಕೇಳಿದಳು. ಸೋಮು ತಲೆಯಾಡಿಸಿದ. ನಳಿನಿ ನಾನು ಹೇಳ್ತೀನಿ ಕೇಳಿ. ಯಾರೋ ಒಬ್ಬ ಹುಡುಗ ಕೈಲಾಸಂ ಅವರ ಮನೆಗೆ ಹೋದಾದ ಮನೆಯೆಲ್ಲಾ ಕಸದಿಂದ ಕೂಡಿತ್ತಂತೆ. ಕೈಲಾಸಂ ಮನೆ ಇದ್ದದ್ದೇ ಹಾಗೆ. ಅದು ಎಲ್ಲರಿಗೂ ಗೊತ್ತು. ಆದರೆ ಇದು ಆ ಹೊಸ ಹುಡುಗನಿಗೆ ಗೊತ್ತಿಲ್ಲ. ಅವನು

ತಕ್ಷಣ ಏನ್ನಾರ್ ಇಲ್ಲಿ ಇಷ್ಟೊಂದು ಕಸ ಅಂದನಂತೆ. ಅದಕ್ಕೆ ತಕ್ಷಣ ಕೈಲಾಸಂ ಏನೋ ಮಗು ನಿನಗೆ ಕಸದ ಬಗೆಗೆ ಡೆಫನಿಷ್ನ್ ಗೊತ್ತೇನೋ ಅಂತ ಕೇಳಿದರು. ಹುಡುಗನಿಗೆ ಕಸಕ್ಕೂ ಒಂದು ಡೆಫನಿಷನ್ ಇದೆಯಾ ಅಂತ ಕುತೂಹಲ. ಅವನು ಸುಮ್ಮನಿದ್ದ ಆಗ ಕೈಲಾಸಂ ನೋಡು ಮಗು ಯಾವ ವಸ್ತು ಎಲ್ಲಿ ಇರಬಾರದೋ ಅದು ಅಲ್ಲಿದ್ರೆ ಅದು ಕಸ ಫಾರ್ ಎಕ್ಸಾಂಪಲ್ ಯೂ ಇನ್ ಮೈ ರೂಮು ಅಂದರಂತೆ. ಹಾಗಾಯ್ತು ನಿಮ್ಮ ಕತೆ ಅಂದು ನಳಿನಿ ನಕ್ಕಾಗ ಏನ್ರೀ ನಾನು ನಿಮ್ಮ ಪಕ್ಕ ಕೂತ್ಕೊಬಾರದಾ ನಾನು ನಿಮ್ಮ ಪಾಲಿಗೆ ಕಸಾನಾ ಅಂತ ಕೇಳಿದಳು. ಮತ್ತೆ ಅವಳೇ ನಕ್ಕು ಇಲ್ಲ ಸರ್ ನೀವು ಕಸ ಅಲ್ಲ. ಕಸದಿಂದ ರಸ ತೆಗೆಯಬಹುದು ಅಂಥಾ ಸೋಮು ನೀವು ಅಂದು ತನ್ನ ಕೆಲಸದ ಕಡೆ ಗಮನ ಕೊಟ್ಟಳು.

ಆದರೆ ಸೋಮು ನೆಮ್ಮದಿಯಾಗಿ ಕೆಲಸ ಮಾಡುವಂತಿರಲಿಲ್ಲ. ಆಫೀಸ್ ಕೆಲಸ ಮಾಡೋ ಹುಡುಗ ಎಲ್ಲರ ಡಸ್ಟ್ ಬಿನ್ ಕ್ಲಿಯರ್ ಮಾಡಲು ಬಂದಾಗ ಅವನನ್ನೂ ಇದೇ ಪ್ರೆಶ್ನೆ ಕೇಳಿದ. ಅವನು ಸರ್ ನೀವು ಆಫೀಸಿನ ಕೆಲಸ ಮಾಡುವಾಗ ಹಾಕಿದ ತುಂಡು ಪೇಪರು ಇತ್ಯಾದಿಗಳು ಒಣಕಸ. ಆದರೆ ನೀವು ಹೋಟೆಲಿನಿಂದ ದೋಸೆ ಪಾರ್ಸಲ್ ತರಿಸಿಕೊಂಡು ಬಿಸಾಕ್ತೀರಲ್ಲ ಬಾಳೆ ಎಲೆ ಅದು ಹಸಿ ಕಸ ಅಂದು ಈಗ ಯಾಕೆ ಸಾರ್ ಆ ಸಮಸ್ಯೆ ಅಂತ ಕೇಳಿದ ಸೋಮು ಇರುವ ವಿಚಾರ ತಿಳಿಸಿದಾಗ ಅವನು ಸರ್ ಅದಕ್ಕೆ ಇಷ್ಟೆಲ್ಲಾ ಯಾಕೆ ತಲೆ ಕೆಡಿಸಿಕೊಳ್ತೀರ. ನೀವು ಹಸಿ ಕಸ ಒಣ ಕಸ ಎಲ್ಲವನ್ನೂ ಒಂದೇ ಕವರ್‌ಗೆ ಹಾಕಿ ನಿಮ್ಮ ಮನೆಯ ಕಾಂಪೌಂಡ್ ಮೇಲಿಡಿ. ಕಸ ತಗೊಂಡು ಹೊಗೋನು ಬಂದಾಗ ಆ ಕವರ್ ಜೊತೆ ಒಂದು ಇಪ್ಪತ್ತು ರೂಪಾಯಿ ಇಡಿ ಅಲ್ಲಿಗೆ ನಿಮ್ಮ ಸಮಸ್ಯೆ ತೀರಿತು ಅಂದ. ಸೋಮುಗೆ ಹೌದಲ್ವ ನಾನು ಉಗುರಲ್ಲಿ ಹೋಗೋದಕ್ಕೆ ಕೊಡಲಿ ತಗೊಂಡ್ನಲ್ಲ ಅನಿಸಿತು. ಆದರೂ ಅವನಿಗೆ ಶಂಖದಿಂದ ಬಿದ್ದರೇ ತೀರ್ಥ ಅನ್ನುವಂತೆ ಕಾರ್ಪೊರೇಷನ್ ಅವರನ್ನೇ ಕೇಳಿ ತಿಳಿದುಕೊಳ್ಳಬೇಕು ಅನಿಸಿತು.

ಮಧ್ಯಾನ್ಹದ ಹೊತ್ತಿಗೆ ಕಾರ್ಪೊರೇಷನ್ ಕಛೇರಿಗೆ ಫೋನ್ ಮಾಡಿದ. ಸರ್ ನನಗೆ ಹಸಿ ಕಸ ಒಣ ಕಸದ ಒಂದು ಲಿಸ್ಟ್ ಬೇಕು ಸರ್ ಅಂದ. ಅಂಥಾ ಯಾವ ಲಿಸ್ಟೂ ನಮ್ಮಲ್ಲಿ ಇಲ್ಲಾರೀ ಅಂದರು. ಮತ್ತೆ ಹಸಿ ಕಸ ಒಣ ಕಸ ಅಂತ ನಾವು ಹೇಗೆ ಬೇರ್ಪಡಿಸೋದು ಸರ್ ಅಂತ ಕೇಳಿದ. ನಿಮ್ಮ ಏರಿಯಾದಲ್ಲಿ ದೊಡ್ಡ ಬೋರ್ಡ್ ಹಾಕಿರ್ತಾರೆ ನೋಡ್ರೀ ಅಂದು ಫೋನ್ ಕುಕ್ಕಿದರು. ನಳಿನಿ ಸೋಮು ಫಜೀತಿ ಕಂಡು ನಕ್ಕಳು. ಸರ್ ಒಂದ್ಕೆಲ್ಸ ಮಾಡಿ ಇವತ್ತು ರಾತ್ರಿ ಊಟ ಆದ ಮೇಲೆ ನೀವು ಮಲಗೋ ಮುಂಚೆ ನಿಮ್ಮ ಮನೆಯ ಕಸವನ್ನು ಅದು ಒಣ ಕಸವೋ ಹಸಿ ಕಸವೋ ಯಾವುದಾದರೂ ಸರಿ ತಲೆ ಕೆಡಿಸಿಕೊಳ್ಳದೇ ಎಲ್ಲಾನೂ ಒಂದು ಕವರಲ್ಲಿ ತುಂಬಿ ಆ ಕವರನ್ನು ತಗೊಂಡು ಹೋಗಿ ಯಾರೂ ಇಲ್ಲದಿರುವ ಕಡೆ ಬಿಸಾಕಿ ಬಂದು ನೆಮ್ಮದಿಯಾಗಿ ಮಲ್ಕೊಳಿ ಅಂದಳು. ಸೋಮು ರೀ ಇದೆಂಥಾ ದರಿದ್ರ ಸಲಹೆ ಕೊಡ್ತಿದೀರ ರೀ. ನಾಗರೀಕರಾಗಿ ನಾವು ಹಾಗೆ ಮಾಡೋದಾ. ನಮಗೆ ಗೊತ್ತಿಲ್ಲದಿರುವ ವಿಚಾರಗಳನ್ನು ಒಂದಲ್ಲಾ ಹತ್ತು ಸಾರಿ ಕೇಳಿ ತಿಳ್ಕೊಬೇಕು ಕಣ್ರೀ. ನಮ್ಮ ನಡವಳಿಕೆ ಇತರರಿಗೆ ಮಾದರಿಯಾಗಿರಬೇಕು ಗೊತ್ತಾ ಅಂದು ಕೆಲಸದ ಕಡೆ ಗಮನ ಹರಿಸಿದ.

ಸಂಜೆ ಆಫೀಸ್ ಬಿಡೋ ಮೊದಲು ಇನ್ನೊಂದು ಸಾರಿ ಕಾರ್ಪೊರೇಷನ್ ಕಛೇರಿಗೆ ಫೋನ್ ಮಾಡಿದ. ಆಗ ಯಾರೋ ಫೋನ್ ರಿಸೀವ್ ಮಾಡಿದ

ಪುಣ್ಯಾತ್ಮ ಸರ್ ತೆಂಗಿನ ಕಾಯಿ ತುರಿ ಹಸಿಯಾಗಿರುತ್ತೆ ಕರಟ ಗಟ್ಟಿಯಾಗಿರುತ್ತೆ. ಹೀಗಾಗಿ ಕರಟ ಒಣ ಕಸ. ಮತ್ತೆ ಈರುಳ್ಳಿ ಸಿಪ್ಪೆ ಹಸಿ ಕಸ ಯಾಕಂದ್ರೆ ಈರುಳ್ಳಿ ಯಾವಾಗಲೂ ಹಸಿಹಸಿಯಾಗಿರುತ್ತೆ ಅಲ್ವಾ ಮತ್ತೆ ಯಾವುದೇ ತರಕಾರಿಯ, ಹಣ್ಣಿನ ಸಿಪ್ಪೆ ಅದು ಹಸಿಯಾಗಿರಲಿ, ಅರ್ಧ ಒಣಗಿರಲಿ, ಅಥವಾ ಪೂರ್ತಿ ಒಣಗಿರಲಿ ಅದು ಹಸಿ ಕಸವೇ ಅಂದರು. ಅಲ್ಲಿಗೆ ಸೋಮುಗೆ ಇದ್ದ ಅನುಮಾನ ಪರಿಹಾರವಾದಂತಾಯ್ತು. ಆದರೂ ಇನ್ನೊಂದು ಅನುಮಾನವನ್ನೂ ಕೇಳಿಬಿಡೋಣ ಅಂದು ಸರ್ ನಿಮ್ಮ ಸಲಹೆಗೆ ಧನ್ಯವಾದಗಳು. ನನಗೆ ಇನ್ನೂ ಒಂದು ಅನುಮಾನವಿದೆ ಅದನ್ನು ಪರಿಹಾರ ಮಾಡಿಬಿಡಿ ಸರ್. ಏನಂದ್ರೆ ಈಗ ಸೌತೇಕಾಯಿ ಸಿಪ್ಪೆ ಅರ್ಧಂಬರ್ಧ ಒಣಗಿದೆ, ಹಾಗೆ ಈರುಳ್ಳಿ ಸಿಪ್ಪೆಯೂ ಸಹ. ಆಗ ಅದರ ಮೇಲೆ ನೀರು ಬಿದ್ದು ಮತ್ತೆ ಅದು ಒದ್ದೆ ಒದ್ದೆಯಾದರೆ ಅದು ಹಸಿ ಕಸಾ ತಾನೇ ಅಂತ ಕೇಳಿದ. ಕಸದ ಬಗೆಗೆ ನಿಮ್ಮ ತಿಳುವಳಿಕೆಗೆ ನನ್ನ ಧನ್ಯವಾದಗಳು ಸರ್, ಚನ್ನಾಗಿ ತಿಳ್ಕೊಂಡಿದೀರ. ಇನ್ನೇನಾದರೂ ಅನುಮಾನ ಇದೆಯಾ ಅಂತ ಕೇಳಿದರು. ಇನ್ನೊಂದು ಅನುಮಾನವಿದೆ ಸರ್. ಈಗ ಮನೇಲಿ ಬಿಸಿಬೇಳೆ ಬಾತ್ ಮಾಡಿರ್ತಾರೆ. ಅದು ಸ್ವಲ್ಪ ಸೀದುಹೋಗಿರುತ್ತೆ ಅಂದರೆ ಒಣಗಿದ ರೊಟ್ಟಿಯ ಹಾಗಿರುತ್ತೆ ಅದು ಹಸಿ ಕಸಾನೋ ಇಲ್ಲಾ ಒಣ ಕಸಾನೋ ಅಂತ ಕೇಳಿದ. ಕಾರ್ಪೊರೇಷನ್ ಆಫೀಸಿನವರು ಅದು ಒಣ ಕಸಾನೂ ಅಲ್ಲಾ ಹಸಿ ಕಸಾನೂ ಅಲ್ಲ ಅಂದರು. ಸೋಮು ಅಚ್ಚರಿಯಿಂದ ಮತ್ತೆ ಅದನ್ನು ಏನು ಮಾಡೋದು ಸರ್. ನೀವು ತಗೊಳೋದು ಒಣ ಕಸ ಇಲ್ಲಾ ಹಸಿ ಕಸ ಇವೆರಡೂ ಅಲ್ಲದ್ದನ್ನು ಏನು ಮಾಡೋದು ಅಂತ ಕೇಳಿದಾಗ ಅವರು ನಿಮ್ಮ ಮನೇಲಿ ಮಿಕ್ಸಿ ಇದೆಯಾ ಅಂತ ಕೇಳಿದರು. ಇದೆ ಸರ್ ಅಂದ ಸೋಮು. ಹಾಗಿದರೆ ನೀವು ಹೇಳಿದ್ರಲ್ಲ ಸೀದು ಒಣಗಿ ಹೋಗಿರುವ ಬಿಸಿಬೇಳೆ ಬಾತ್ ಇದೆಯಲ್ಲಾ ಅದನ್ನು ಮಿಕ್ಸಿಲಿ ಹಾಗೆ ಚನ್ನಾಗಿ ರುಬ್ಬಿ. ಆಗ ಅದು ತೆಳುವಾಗಿ ನೀರು ನೀರಾಗಿ ಇರುತ್ತೆ. ಅದನ್ನು ನಿಮ್ಮ ತಲೆಗೆ ಮೆತ್ತೊಂಡು ಚನ್ನಾಗಿ ಬಿಸಿ ಬಿಸಿ ನೀರು ಹಾಕಿಕೊಂಡು ಸ್ನಾನ ಮಾಡಿ ಅಂದವರು ಶಬ್ದ ಆಗುವ ಹಾಗೆ ರಿಸೀವರ್ ಕುಕ್ಕಿದ್ದು ಕೇಳಿಸಿತು. ಸೋಮು ಪೆಚ್ಚಾದ. ನಳಿನಿ ಮಾತ್ರ ಜೋರಾಗಿ ನಕ್ಕಳು. ಸೋಮು ತನ್ನ ಮೊಬೈಲಲ್ಲಿ ಸ್ಪೀಕರ್ ಆನ್ ಮಾಡಿಕೊಂಡು ಮಾತಾಡಿದ್ರಿಂದ ಅವನ ಸಂಭಾಷಣೆ ಎಲ್ಲರಿಗೂ ಕೇಳಿಸಿತ್ತು. ನಳಿನಿ ಏನ್ಸಾರ್ ನಾಳೆ ನಿಮ್ಮನೇಲಿ ಬಿಸಿ ಬೇಳೆ ಬಿಸಿ ಬಿಸಿ ಬಾತ್ ನಡೆಯುತ್ತಾ ಸರ್ ಅಂತ ಕೇಳಿದಳು. ಸೋಮು ಸಿಟ್ಟಿನಿಂದ ಹೌದ್ರೀ ಬೇಕಾದ್ರೆ ನೀವೂ ಬನ್ನಿ ನಿಮ್ಮ ತಲೆಗೂ ಮೆತ್ತೆ ನೀರು ಸುರೀತೀನಿ ಅನ್ನುತ್ತಿರುವಾಗ ಸೋಮು ಮೊಬೈಲ್ ಹೊಡ್ಕೊಂಡ್ತು. ಬೇಜಾರಿಂದ ಸೋಮು ಮೊಬೈಲ್ ಕಿವಿಗಿಟ್ಟುಕೊಂಡು ಏನೇ ಅಂದ. ಅದೇರೀ ನಾನು ಹೇಳಿದ್ನಲ್ಲ ಒಣ ಕಸ ಹಸಿ ಕಸ ಸರಿಯಾಗಿ ವಿಂಗಡನೆ ಮಾಡಿ ಕೊಡ್ತಿದೀರ ತಾನೇ ಅಂತ ಸೋಮಿ ಕೇಳಿದಾಗ ನಿನ್ನ ಪಿಂಡ ನೀನು ಬೇಗ ಊರಿಗೆ ಬಾ ಅಲ್ಲೀವರೆಗೂ ಯಾವ ಕಸವೂ ಇಲ್ಲ ಅಂದು ಮೊಬೈಲ್ ಆಫ್ ಮಾಡಿ ಮನೆಗೆ ಹೊರಟವನಿಗೆ ಸೋಮಿ ಊರಿಗೆ ಬರೋತನಕ ಎಲ್ಲ ಕಸವೂ ಮನೆಯೊಳಗೇ ಇರಲಿ ಅನಿಸಿತು.

■

## ಹೋಲಿಕೆಗಳ ಮಾಲಿಕೆ

ಆರತಿ ಘಟಿಕಾರ್

ಭಾನುವಾರ ಹೊಟ್ಟೆ ಬಿರಿಯ ಉಂಡು ಈ ಬಿಸಿಲಿಗೆ ಸೊಂಪಾಗಿ ಪವಡಿಸಿ ಕೊಂಡಿರುವಾಗ ನಮ್ಮ ಬೀದಿ ಮಕ್ಕಳ ಆಟ ಗಲಾಟೆಗಳಿಗೆ ಎಚ್ಚರವಾಗಿ "ಥೋ ! ಒಂದಿಷ್ಟು ನಿದ್ದೆ ಮಾಡೋಕೂ ಬಿಡದೆ ,ಏನ್ ಕತ್ತೆ ತರಾ ಕಿರುಚಾಡ್ತಾವಪ್ಪ" ಎಂದು ಬಯ್ದಿಕೊಂಡೆ ನಾನು ಮಗ್ಗಲಾಗುವುದು ಮಾಮೂಲು. ಆದರೆ ಮಗರಾಯ ಸಂಜೆ ಐದಾದರೂ ಏಳದೆ ಎಬ್ಬಿಸಿ ಸಾಕಾಗಿ "ಇದೇನೋ ಸಂಜೆಯಾದರೂ ಇನ್ನು 'ಎಮ್ಮೆ' ತರಾ ಮಲಗಿದ್ದೀಯಲ್ಲ! ಎದ್ದೇಳೋ" ಎಂದು ಅವನಿಗೆ ನನ್ನ ಗದರುವಿಕೆಯ ರಿಂಗ್ ಟೋನ್ ಮೊಳಗುತ್ತದೆ. ಏನೇ ಅನ್ನಿ ಮನುಷ್ಯರ ಗುಣ ಸ್ವಭಾವ ವರ್ತನೆಗಳಿಗೆ ಈ ಪಾಪದ ಪ್ರಾಣಿ ಪಕ್ಷಿಗಳನ್ನು ಸಲೀಸಾಗಿ ಎಳೆದು ತರುವುದು ನಮ್ಮ ದಿನನಿತ್ಯದ ಚಟವೆ ಆಗಿದೆ ! ಎಮ್ಮೆ ಹಾಲಿನ ಚಹಾ/ ಕಾಫೀ ರುಚಿಯೋ ರುಚಿ ಎಂದು ಬಾಯಿ ಚಪ್ಪರಿಸುತ್ತ ಕುಡಿದರೂ ಸೋಮಾರಿಯಂತೆ ಬಿದ್ದು ಕೊಳ್ಳುವ ಮಂದಿಗೆ "ಎಮ್ಮೆ" ಬೈಗುಳ ಮಾತ್ರ ತಪ್ಪಿದಲ್ಲ ! ಏನೋ ಪಾಪ ಅದು ದಪ್ಪ ಚರ್ಮ ಇರುವುದರಿಂದಲೇ ಸ್ವಾರ್ಥ ಮನುಷ್ಯರ ಬೈಗುಳಕ್ಕೆ ಕ್ಯಾರೆ ಎನ್ನದೆ ಕೆಸರನ್ನೇ ಸ್ವಿಮ್ಮಿಂಗ್ ಪೂಲ್ ಮಾಡಿಕೊಂಡು ಆರಾಮಾಗಿ ಬಿದ್ದುಕೊಂಡಿರುತ್ತದೆ. ಇಷ್ಟೇ ಅಲ್ಲ ನಮ್ಮ ದೈಹಿಕ ರೂಪ, ಗಾತ್ರಗಳನ್ನು ಬಣ್ಣಿಸಲು ಸಹ ಪ್ರಾಣಿ ಪಕ್ಷಿಗಳನ್ನು ಹೋಲಿಸಿ ನಮ್ಮ ನಾಲಿಗೆಯನ್ನು ಪಾವನಗೊಳಿಸಿ ಕೊಳ್ಳುತ್ತೇವೆ ! ಕಪ್ಪಗೆ ಡುಮ್ಮಗಿನ ಗಾತ್ರದವರಿಗೆ "ಒಳ್ಳೆ ಘೇಂಡಾ ಮೃಗ ಇದ್ದ ಹಾಗೆ ಇದ್ದಾನೆ" ಎಂದು ಬರೀ ಝೂ ನಲ್ಲೆ ನೋಡಿದ ಘೇಂಡಾ ಮೃಗದ ರೂಪವನ್ನು ತಳಕು ಹಾಕಿ ಅಪಹಾಸ್ಯ ಮಾಡಿದರೆ, ಅತೀ ದಪ್ಪದವರಿಗೆ ಅನೆ ಪಟ್ಟ ಕಟ್ಟಿಟ್ಟ ಬುತ್ತಿ. ಸಣಕಲ ಕಡ್ಡಿಗಳಿಗೆ ಬರೀ ಕಡ್ಡಿ ಎನ್ನದೆ "ಕೊಕ್ಕರೆ ಕಡ್ಡಿ" ಎನ್ನುವ ಸ್ಪೆಶೆಲ್ ವಿಶೇಷಣದೊಂದಿಗೆ ಆಡಿಕೊಂಡು ನಮ್ಮ ವಕ್ರ ನಾಲಿಗೆಗಳನ್ನು ಇನ್ನಷ್ಟು ವಕ್ರಗೊಳಿಸುತ್ತೇವೆ. ನನ್ನ ಗೆಳತಿಯ ಅತ್ತೆಯವರು ನೆರೆಮನೆಯವಳ ಕುರಿತು ಒಮ್ಮೆ "ಅಯ್ಯ! ಆಕಿ ಎಷ್ಟು ಬಡಕ ಅಂದ್ರ ಬರಗಾಲದಾಗಿನ ಹೆಣ ಆಗ್ಯಾಳ ನೋಡು ಥೇಟ್" ಎನ್ನುವ ಅಲ್ಟಿಮೇಟ್ ಹೋಲಿಕೆ ಕೊಟ್ಟು ಉಪಮಾಲಂಕಾರದ ಚಮತ್ಕಾರವನ್ನೇ ತೋರಿಸಿದ್ದರು! ಇನ್ನು ನಿಷ್ಕಲ್ಮಶ ಮುಗ್ಧ ಸ್ವಭಾವದವರಿಗೆ (ಈಗಿನ ಕಾಲದಲ್ಲಿ ಈ ತರದವರು ಅಪರೂಪವೇ ಆದರೂ) "ಅವ ಥೇಟ್ ಹಸುವಿನಂತೆ" ಎಂಬ ಹೊಗಳಿಕೆ ಸಿಕ್ಕಿದರೂ ಪಾಪ ಇಂಥವರನ್ನೇ ಹುಡುಕಿಕೊಂಡು ಟೋಪಿ, ಪಂಗನಾಮಗಳನ್ನು ಹಾಕುವವರೇ ಹೆಚ್ಚು! ತನ್ನ ಸೀಟಿನಲ್ಲೇ ಕುಳಿತು ದೂರದಿಂದಲೇ ಬಾಸ್ ಬರುವ ಸೂಚನೆಯನ್ನು ಹರಟೆಯಲ್ಲಿ ಮುಳುಗಿದ ಸಹೋದ್ಯೋಗಿಗಳಿಗೆ ನೀಡಿ ಮಹದುಪಕಾರ ಮಾಡುವ ಹದ್ದಿನಂಥ ಕಣ್ಣ ದೃಷ್ಟಿ ಇರುವವರಿಗೆ ಸಧ್ಯಅದರಂತೆ ಕತ್ತನ್ನು 180 ಡಿಗ್ರೀ ತಿರುಗಿಸಿ ನೋಡುವ (ಭಯ ಹುಟ್ಟಿಸುವ) ಪ್ರತಿಭೆ ಒಲಿದಿಲ್ಲ ಎನ್ನುವುದೇ ಸಮಾಧಾನ! ಇನ್ನು ಸಹೋದ್ಯೋಗಿಗಳ ನಡುವಿನ ಪೈಪೋಟಿಗಳ ಮಧ್ಯೆ ಹತ್ತಿರದ ಸ್ನೇಹಿತರು ಎನಿಸಿಕೊಂಡವರೇ ಕೆಲವರು, ಬಣ್ಣದ ಮಾತುಗಳನ್ನು ಆಡುತ್ತ ಊಸರವಳ್ಳಿಯ ಹಾಗೆ ಚಕ್ಕನೆ ಬಣ್ಣ ಬದಲಾಯಿಸಿ ನರಿ ಬುದ್ದಿಯ ಬಾಸಿಗೇ ಬಕೆಟ್ ಹಿಡಿದು ನಮ್ಮ ಪಾಲಿನ ಪ್ರಮೋಶನ್ ತಮ್ಮ ಬುಟ್ಟಿಗೆ ಹಾಕಿಕೊಳ್ಳುವ ಚಾಣಾಕ್ಷರು ! ಮತ್ತೆ ಕೆಲವರು ಪಾಪ ಕಂಪನಿಯ ಪಾಲಿಟಿಕ್ಸ್ ಬಗ್ಗೆ ಅರಿವೇ ಇಲ್ಲದೆ ವರ್ಷಗಳಿಂದ "ಕತ್ತೆ" ಗಳಂತೆ ಕಚೇರಿಯಲ್ಲಿ ಕತ್ತು ಬಗ್ಗಿಸಿ ದುಡಿಯುತ್ತಲೇ ಇರುವಾಗ ಎಳೆ ನಿಂಬೆಕಾಯಿಗಳಾಗಿ

ಬಂದ ಜೂನಿಯರ್ಗಳು ಆಗಲೇ ಚಿಗುರಿಕೊಂಡು ಕಂಪನಿ ಟ್ರಿಪ್ ಎಂದು ಅಮೇರಿಕಾ, ಲಂಡನ್ ಸುತ್ತುತ್ತಿರುತ್ತಾರೆ! ಇನ್ನು ಜನ ಜಂಗುಳಿಯ ನಡುವೆ ಗೂಳಿಯಂತೆ ಧೈರ್ಯದಿಂದ ನುಗ್ಗಿ ತಮ್ಮ ಕೆಲಸ ಸಾಧಿಸುವರು ಕೆಲವರಾದರೆ ಧ್ವನಿ ಎತ್ತಿ ಮಾತಾಡುವ ಸಮಯಕ್ಕೆ ಹೆದರಿ (ಮುದುರಿ) ಕೂರುವವರು ಮಾತ್ರ "ಗುಬ್ಬಚ್ಚಿಯಂತೆ ಪುಕ್ಕಲು" ಎನಿಸಿಕೊಳ್ಳುವುದು ತಪ್ಪದು!

ನಮ್ಮ ಸಂಬಂಧಿಕರೊಬ್ಬರ ಭೇಟಿಗೆ ಎಂದು ಹೋದಾಗ ಅವರ ವಯಸ್ಸಾದ ಮಗನ ಮದುವೆ ವಿಚಾರ ನಡೆಯುತ್ತಿತ್ತು ಇತ್ತೀಚಿಗೆ ಅವರ ಮಗ ಸತೀಶನನ್ನು ಕಪ್ಪು ಎಂದು ನಾಪಾಸು ಮಾಡಿದ್ದ ಹುಡುಗಿಗೆ "ಅವಳೇನು ಮಹಾ ಸುಂದರಿ, ಥೇಟ್ ಬಿಳಿ ಹಲ್ಲಿ ಇದ್ದ ಹಾಗೆ ಇದ್ದಾಳೆ ಬಿನ್ನಾಣಗಿತ್ತಿ" ಎಂದು ಹುಡುಗನ ಅಮ್ಮ ಕಪ್ಪೆಯಂತೆ ವಟಗುಟ್ಟುತ್ತ "ನೀನೆ ಹೇಳಮ್ಮ ನಮ್ಮ ಸತೀಶ ಏನು ಕಾಗೆ ತರಾ ಇರೋ ನಮ್ಮ ಯಜಮಾನರಷ್ಟು ಕಪ್ಪಗಿದ್ದಾನಾ !? ಎಂದು ಸುದ್ದಿ ಜೀವಿಗಳು ಮುಖಕ್ಕೆ ಮೈಕ್ ಹಿಡಿದು ಏಕಾಏಕಿ ವಕ್ರ ಪ್ರಶ್ನೆಗಳ ದಾಳಿ ಮಾಡಿದಂತೆ ನನ್ನನ್ನು ಸವಾಲಿಸಿದಾಗ ಕೊಂಚ ಗಲಿಬಿಲಿಯಾದರೂ ರಾಜಕಾರಣಿಗಳಂತೆ ಅಡ್ಡಗೋಡೆ ಮೇಲೆ ದೀಪ ಇಡುತ್ತ" ಅಯ್ಯೋ ಇಲ್ಲ ಮಾಮಿ, ಸ್ವಲ್ಪ ಕಪ್ಪಗಿದ್ದರೂ ಒಳ್ಳೆ ಕಳೆ ಇದೆ ಸತೀಶನಿಗೆ! ಥೇಟ್ ಶ್ರೀಲಂಕಾ ಬ್ಯಾಟ್ಸ್ಮನ್ ಜಯಸೂರ್ಯ ಇದ್ದಂಗೆ" ಎಂದಾಗ ಅವರ ಮುಖದಲ್ಲಿ 220 ವೋಲ್ಟ್ ನಗೆಯ ಬೆಳಕು ಝಗಮಗಿಸಿತು !

ಇನ್ನು (ತನ್ನ ನಾಪಸು ಫಲಿತಾಂಶದ) ಸುದ್ದಿ ತಿಳಿದಾಗಿನಿಂದ ಕುಂಬಳ ಕಾಯಿಯಂತೆ ಮಾರಿ ಊದಿಸಿ ಕೂತ ಸತೀಶನ ಮುಖ ಸಹ ನನ್ನ ಹೊಗಳಿಕೆಗೆ ತಾವರೆಯಂತೆ ಪ್ರಸನ್ನವಾಗಿ ಅವರ ಮನೆಯ ಹತ್ತಿರವಿರುವ ಚಾಟ್ ದರ್ಶಿನಿಯಿಂದ ಕಚೋರಿ ಜಿಲೆಬಿ ಸಮೋಸಗಳ ಭರ್ಜರಿ ಟ್ರೀಟ್ (ಮೆಂಟ್) ಕೊಟ್ಟು ಕಳಿಸಿದ್ದ !

ಮನೆಯೇ ಮೊದಲ ಪಾಠಶಾಲೆ ಎಂದಾಗ ಮಕ್ಕಳ ಗುಣ ಸ್ವಭಾವಗಳನ್ನು ಗಮನಿಸುತ್ತ ಒಳ್ಳೆಯ ಕಲಿಕೆ ನೀಡುವ ಜವಾಬ್ದಾರಿ ತಂದೆ ತಾಯಿಗಳ ಹೆಗಲ ಮೇಲೆ ಇರುತ್ತದಲ್ಲ. ಈ ನಿಟ್ಟಿನಲ್ಲಿ ಒಮ್ಮೊಮ್ಮೆ ಅವರ ತಾಳ್ಮೆಯ ರಬ್ಬರ್ ಬ್ಯಾಂಡ್ ಹರಿದು "ಚೋಟುದ್ದ ಮೆಣಸಿನ ಕಾಯಿ ತರಾ ಇದ್ದೀಯ, ನಮಗೇ ಎದುರುತ್ತರ" ಕೊಡ್ತೀಯಾ? ಇಷ್ಟು ಸುಲಭದ ಲೆಕ್ಕಾನೂ ಬರಲ್ವಾ "ತಲೆ ಬಟಾಟೆ ! ಶುದ್ಧ ಶುಂಠಿ" ಎನ್ನುವ ಬೈಗುಳಗಳೂ ಉದುರಿ ಮಕ್ಕಳಿಗೆ ತರಕಾರಿಗಳ ಪರಿಚಯ ಮಾಡಿಸಿ ಹೋಲಿಕೆಗಳ ಇನ್ನಿಂಗ್ಸ್ ಶುರು ಮಾಡುವ ಪೋಷಕರು ಸಹ ಇರುತ್ತಾರೆ. ಪುಟಾಣಿ ಮಕ್ಕಳು "ಆಹಾ! ಟೊಮ್ಯಾಟೋ ಕೆನ್ನೆ !, ಮುದ್ದು ಗಿಣಿ ಮರಿ, ಚಿನಕುರಳಿ ತರಾ ಚೂಟಿ" ಎಂದು ಗಲ್ಲ ಹಿಂಡಿಸಿಕೊಂಡು ಮುದ್ದು ಮಾಡಿಸಿಕೊಳ್ಳುವುದು ಮಾಮೂಲು. ನನ್ನ ಮಗರಾಯ ಸಣ್ಣವನಿದ್ದಾಗ ಏನಾದರೊಂದು ಬೇಡಿಕೆಯ "ಕೊಯ್ಯೋ" ರಾಗ ಎಳೆಯುತ್ತಲೇ ನನ್ನ ಹಿಂದೆ ಸುತ್ತುವಾಗ "ಇವನದು ಪಿಟೀಲು ಮುಗಿಯೋದೇ ಇಲ್ಲಾ" ಎಂದು ರೇಗಾಡುತ್ತಲೇ ಅವನನ್ನು ಸುಮ್ಮನಾಗಿಸುವ ಸಾಹಸಕ್ಕೆ ತೊಡಗುತ್ತಿದ್ದದ್ದು ನೆನಪಾಗುತ್ತದೆ.

ಎಷ್ಟೋ ಬಾರಿ ನಮ್ಮ ಅಂಗಾಂಗಗಳ ಆಕಾರ, ಅವುಗಳ ವಿಶೇಷ ಗುಣಗಳನ್ನು ಪರೀಕ್ಷಕ ದೃಷ್ಟಿಯಿಂದ ನೋಡಿ "ಕೊರೆದ ಬೆಂಡೆಯಂತಾ ನೇರ ಮೂಗು, ಗಿಣಿ ಮೂಗು, ಮೀನಿನಂತ ಕಣ್ಣು, ಬೆಕ್ಕಿನ ಕಣ್ಣು, ರೇಶಿಮೆ ಕೂದಲು, ಹಿತ್ತಾಳೆ ಕಿವಿ, ನಾಯಿ ಮೂಗು, ಗಟಾರದಂತ ಬಾಯಿ, ಕಾಗೆ ದನಿ, ಕಂಪ್ಯೂಟರ್ ತಲೆ, ಕಲ್ಲು

ಹೃದಯ, ಕೆಲವರದ್ದು ಬೆಣ್ಣೆ ಮನಸು, (ಜಿಮ್ ಮಾಡಿದ) ಬಾಳೆ ದಿಂಡಿನಂತ ಬಾಹುಗಳು, ಕಬ್ಬಿಣ ಬುಟ್ಟಿಯಂತ ಹೊಟ್ಟೆ ಎಂದೆಲ್ಲ ಪ್ರಾಣಿ-ಪಕ್ಷಿಯಿಂದ ಹಿಡಿದು ನಿರ್ಜೀವ ವಸ್ತುಗಳ ಜೊತೆಗೂ ಹೋಲಿಕೆಯ ಭಾಗ್ಯವನ್ನು ಕರುಣಿಸಲಾಗುತ್ತದೆ.

ಇನ್ನು ತರಗತಿಯಲ್ಲಿ ತುಂಟಾಟ ಮಾಡುವ 'ಬಾಲ'ಕರು "ಕಪಿ, ಕೋತಿ, ಮಂಗ್ಯಾ ,ವಟಗುಟ್ಟುವ ಕಪ್ಪೆಗಳು" ಎಂದೆಲ್ಲ ಮೇಷ್ಟ್ರುಗಳಿಂದ ಬಿರುದು ಬಾವಲಿಗಳನ್ನು ತಮ್ಮ (ಅಗೋಚರ) ಬಾಲಕ್ಕೆ ಸಿಗಿಸಿಕೊಂಡೆ ಓಡಾಡುತ್ತವೆ ! ಇದರ ನಡುವೆ ಕೋಗಿಲೆ ಹಾಗು ನವಿಲು ಪಕ್ಷಿಗಳು ಮಾತ್ರ ತಮ್ಮ ಕಲೆಗಳ ಮೂಲಕ ಮನುಷ್ಯರನ್ನು ಪ್ರಭಾವಿಸಿ "ಇಂಪಾಗಿ ಹಾಡುವವರನ್ನು" ಕೋಗಿಲೆ ಕಂಠ ! ಎಂದೋ, ಪ್ರತಿಭಾವಂತ ನೃತ್ಯ ಕಲಾವಿದೆಯನ್ನು "ನಾಟ್ಯ ಮಯೂರಿ" ಎಂದು ತಮ್ಮ ನಾಮಬಲದಿಂದ ಹೊಗಳಿಸಿಕೊಂಡು ತಮ್ಮ ಸ್ಟೇಟಸ್ ಏರಿಸಿಕೊಂಡಿವೆ ! ಇನ್ನು ಹೆಣ್ಣಿನ ಸೌಂದರ್ಯವನ್ನು ವರ್ಣಿಸುವ ನೆಪದಲ್ಲಿ ಕವಿವರ್ಯರೆಲ್ಲ ಗುಲಾಬಿ ಬಣ್ಣ, ಗುಲಾಬಿ ಕೆನ್ನೆ, ಗುಲಾಬಿ ತುಟಿ ಎಂದು ತನ್ನನ್ನೇ ಹೋಲಿಸಲು ಗುಲಾಬಿ ಅದೇನು ಲಾಬಿ ಮಾಡಿದೆಯೋ ನಾ ಕಾಣೆ !

ಸಾಮಾನ್ಯವಾಗಿ ಕಥೆ ಕಾದಂಬರಿಯಲ್ಲಿ ಚಂಚಲ ಸ್ವಭಾವದ ಹೆಣ್ಣು ಬಣ್ಣದ ಚಿಟ್ಟೆಯಾದರೆ, ಒಬ್ಬರ ನಂತರ ಮತ್ತೊಬ್ಬ ಹುಡುಗಿಯ ಹಿಂದೆ ಬೀಳುವ ಗಂಡು ಪ್ರಾಣಿ **"ದುಂಬಿ"** ಯಾಗಿ ಒಟ್ಟಿನಲ್ಲಿ ಕಥೆ ತುಂಬೆಲ್ಲ ದೊಂಬಿ ಎಬ್ಬಿಸುತ್ತಾನೆ ! ಇದರ ಮಧ್ಯೆ ರಾಣಿ ಜೇನು ಮತ್ತು ಟೀಮು ತಾವು ತಯಾರಿಸುವ ಸಿಹಿಯಾದ ಜೇನು ತುಪ್ಪಕಿಂತಲೂ ಮಾರಿ ಊದುವಂತೆ ಮಾಡುವ ಜೇನು ಕಡಿತಕ್ಕೆ ಹೆಚ್ಚು ಪ್ರಸಿದ್ಧಿಯಾಗಿವೆ ಅನ್ನಿ! ಮತ್ತೆ ಕೆಲವು ಮಹಿಳೆಯರು ಏನೇ ಆದರೂ ತಲೆ ಕೆಡಿಸಿಕೊಳ್ಳದ ಯಜಮಾನರನ್ನು "ಇವರಂತೂ ಥೇಟ್ ಫ್ರಿಡ್ಜ್" ಕಣ್ರೀ ! ಎನ್ನುವುದು ಮಡದಿಯ ಹೊಗಳಿಕೆಯೋ ಇಲ್ಲ ತೆಗಳಿಕೆಯೋ ಗೊತ್ತಾಗುವುದಿಲ್ಲ ಬಿಡಿ !

ಸಾಜಗುಣವೆಂದುಪೇಕ್ಷಿಪೆಯ ನಿನ್ನವಗುಣವ ?!

ಸಾಜವನು ಬಿಟ್ಟಲುಗದಿಹದು ಮೃಗಕೀಟ !!

ಸಾಜವಂ ಶಿಕ್ಷಿಸುತ ಲೋಕಸಂಸ್ಥಿತಿಗದನು!

ಯೋಜಿಪುದೆ ನರಮಹಿಮೆ-ಮಂಕುತಿಮ್ಮ !!

ಎನ್ನುವ ಕಗ್ಗದಂತೆ ತಮ್ಮ ಸಹಜವರ್ತನೆಗಳಿಂದಲೇ ಬಾಳುವ ಮೃಗ ಕೀಟಗಳು ಎಂದಿಗೂ ಬೇರೆ(ಅವ) ಗುಣಗಳನ್ನು ಬೆಳೆಸಿಕೊಂಡು ಬದುಕುವುದಿಲ್ಲ. ಆದರೆ ಮಾನುಷ್ಯ ಪ್ರಾಣಿ ಮಾತ್ರ ತನ್ನ ಮೂಲ ಮಾನವೀಯ ಗುಣ ನಡೆತಗಳನ್ನು ಮರೆತು ಮೃಗವನ್ನೂ ನಾಚಿಸುವಂತೆ ಕ್ರೂರಿಯಾಗಬಲ್ಲ ! ಹಾಗಾಗಿ ನಮ್ಮ ದೈಹಿಕ ರೂಪ, ವರ್ತನೆಗಳಿಗೆ ಒಂದೊಂದು ಪ್ರಾಣಿ ಪಕ್ಷಿಯ ಹೆಸರಿನೊಂದಿಗೆ ಹೋಲಿಸಿ ವ್ಯಂಗ್ಯವಾಡಿದರೆ ದುರ್ಗುಣಗಳೆಲ್ಲ ಹೋಲ್ಸೇಲ್ ಆಗಿ ಮೇಳೈಸಿರುವ, ಮೂಕ ಪ್ರಾಣಿಗಳನ್ನು ಸುಖಾ ಸುಮ್ಮನೆ ಹಿಂಸಿಸುವ ಮನುಷ್ಯರನ್ನು ಪ್ರಾಣಿ ಪಕ್ಷಿಗಳು ತಮ್ಮ ಭಾಷೆಯಲ್ಲಿ ಬೈಯ್ದಾಡಿ ಕೊಳ್ಳುವುದು ನಮಗೆ ಅರ್ಥವಾಗುವ ಹಾಗಿದ್ದರೆ ಲಜ್ಜೆಯಿಂದ (ಒಂದಿಷ್ಟಾದರೂ ಇದ್ದರೆ) ಮನುಷ್ಯರು ತಲೆ ತಗ್ಗಿಸ ಬೇಕಾಗುತ್ತಿತ್ತು ! ಏನಂತೀರಿ?

■

# ಮಕಮಲ್ ಶಾವಿಗೆ ಮತ್ತು ಊರುಸಾಬರಿ!

✍ಜಯಶ್ರೀ ದೇಶಪಾಂಡೆ

ಅಲ್ಲ, ನೆನಪು ಒದ್ದುಕೊಂಡು ಬರ್ತದೆ ಅಂತೆಲ್ಲ ಹೇಳಿದ್ದು, ಬರ್ದಿದ್ದು ಕಂಡಿದ್ದೆ ಓದಿದ್ದೆ, ಸಂಬಂಧ-ಸೂತ್ರವೇ ಇಲ್ಲದ ಹೊತ್ತು, ಯಾವುದೋ ಗೋಲಾರ್ಧದಲ್ಲಿನ ಹೆಚ್ಚು ಅರಿಯದ ಜಾಗ, ಮುಂದೆ ಕೂತಿದ್ದ ಆಹಾರದ ಬಗ್ಗೆ ಕೊಂಚ ಅನುಮಾನ..ಎಲ್ಲಾ ಕುಣಿದು ಇದು ಕಾಡಿದ್ದರ ಬಗ್ಗೆ ಹೇಳಬೇಕು ಅಂದರೆ...

"ಮಾ, ಈ ಹೇರ್ ಲೈನ್ ಸ್ಪೆಗೆಟಿ..ನೋಡು ನಮ್ಮ ಶಾವಿಂಗೀ ಥರನೆ ಇರ್ತಾವೆ" ಮಗಳು ಹೇಳಿದ್ಲು. ಸ್ಪಾನಿಶ್ ರೆಸ್ಟುರಾ ಅದು, ಊರು ವಿಯೆನ್ನಾ! ಗೋಡೆಗೋಡೆಗಳೊಳಗಿಂದ ರಿಕಿ ಮಾರ್ಟಿನ್ ಕಂಠದೊಳಗೆ ಪ್ರಪಂಚ ಇಡೀ ಹುಚ್ಚೆಬ್ಬಿಸಿದ್ದ 'ಊನ್ ದೋಸ್ ತ್ರೇಸ್ ಪಾಸಿತೋ ಪಾಲ್ದೇಲಾನ್ ತೇ ಮರೀಯಾ..' ಹಾಡಿಸುತ್ತ ಬಣ್ಣ ಬಣ್ಣದ ಮೇಕಪ್ ಮಾಡ್ಕೊಂಡಂಥಾ ಒಂದ್ರಾಶಿ ಸ್ಪೆಗೆಟಿಯನ್ನ ದೊಡ್ಡ ತಟ್ಟೆತುಂಬ ಗುಡ್ಡದೋಪಾದಿ ತುಂಬಿಸಿ ತಂದು ನನ್ನ ಮುಂದೆ ಇಟ್ಟಿತ್ತು.

ಅದು ಎಲ್ಲಿ ಕರ್ಕೊಂಡು ಹೋಗಬೇಕು ನನ್ನ?

ಮೂಲಬೇರುಗಳ ಕಾಲಬುಡಕ್ಕೆ!

Flashback ಅಂದಿರಾ? ಹೌದು ಅದೇ.

****

"ಎರಡು ಸೊಲಿಗಿ ಸಜ್ಜಿಗೀ ಪಿಟ್ಟೆ ತಯಾರ ಮಾಡಿಟ್ಟಾತು ಮಾಯೀ, ನೇವೇದ್ಯಾಕ್ಕಿಡೂ ಶಾಂವಿಗೀ ಯಾವಾಗ ಮಾಡೂಣಂತೀರಿ ಹೇಳ್ರಿ.."

ಮೂರು ಸೊಲಿಗಿ ಅಳತೆಯ ಹಿತ್ತಾಳೆ ತಪ್ಪೇಲಿ ಗಂಗಕ್ಕನ ಬಗಲೊಳಗೆ ಕೂತು ನಮ್ಮನೆ ಕಡೆ ಪ್ರಯಾಣ ಹೊರಟಿತ್ತು. ಜೊತಿಜೊತೀಗೇ ಅವರ ಕಂಚು ತೀಡಿದ ಧ್ವನಿಯ ಉದ್ಘೋಷ...ತಪ್ಪೇಲಿಯೊಳಗೆ ಬೆಳದಿಂಗಳಂಥಾ ಸಜ್ಜಿಗೀ ಪಿಟ್ಟೆ. ಅಂತಿಂಥಾ ಗೋದಿ ಅಲ್ಲ, ಪಕ್ಕಾ ತೊನಶಾಳ ಹೊಲದ ಗೋದಿ, ಡೋಣಿ ನದಿ ನೀರು ಕುಡಿದ ಗೋದಿ... ಸಜ್ಜಿಗೀ ಪಿಟ್ಟೆ ಅರ್ಥಾತ್ ಗೋಧಿಗೆ ನೀರು ಹಚ್ಚಿ ತೊಳೆದು ಒಣಗಿಸಿ, ಬೀಸುವ ಕಲ್ಲಿನೊಳಗೆ ರವಾ ಬೀಸಿ ಒಡೆದು ವಸ್ತ್ರಗಾಳ (ದೊಡ್ಡ ಪ್ರಮಾಣದ ಪಾತ್ರೆಗೆ ತೆಳುವಾದ ಸೀರೆ ಅಥವಾ ಧೋತರ ಸುತ್ತಿಕಟ್ಟಿ ಅದರೊಳಗೆ ಬೀಸಿದ ಪುಡಿ ಹಾಕಿ ಕೈಯಿಂದ ಗಿರಗಿರನೇ ತೀಡುತ್ತ ರವೆ ಮತ್ತು ಅತ್ಯಂತ ನುಣ್ಣಗಿನ ಹಿಟ್ಟನ್ನು ಬೇರ್ಪಡಿಸೋದು) ಇದು ಸುಲಭ ಅಲ್ಲ, ಬಹಳ ಪರಿಶ್ರಮ, ಕಾಳಜೀಪೂರ್ವಕ ತಯಾರು ಮಾಡಬೇಕಾದ ಕಚ್ಚಾ ಸಾಮಗ್ರಿ. ಈಗಿನ ಥರ ಅಂಗಡಿಗೆ ಹೋಗಿ ಒಂದಿಷ್ಟು ಬಿಳೀ ಬ್ಲೀಚ್ ಸ್ನಾನ ಮಾಡ್ಕೊಂಡ ರವಾ, ಅದಕಿಂತಾ ಹೆಚ್ಚು ಬ್ಲೀಚ್ ಸುರ್ಕೊಂಡ ಮೈದಾ ತಂದು ಕಲಿಸಿ ಯಂತ್ರದೊಳಗೆ ಪಿಸಿಪಿಸಿ ಅಂತ ಒತ್ತಿ ಇನ್ಸ್ಟಂಟ್ ಒಣಗಿಸಿ ಕುದಿಸಿ ತಿಂದು ಹಾಕುವ ಶಾವಿಗೆ ಅಲ್ಲ ಅವು..

ಹಾಲಿನೊಳಗೆ ಕಲಿಸಿಕೊಂಡ ಸಜ್ಜಿಗೀ ಪಿಟ್ಟೆ ಗಂಗಕ್ಕ, ಸೋನಕ್ಕರ ಎಕ್ಸ್ ಪೀರಿಯನ್ಸ್ಡ್ ಕೈಯೊಳಗೆ, ತುಪ್ಪದೊಳಗೆ ಹೊರಳಾಡಿಕೊಳ್ತ ಕಲ್ ಬತ್ತಾದ ಮೇಲೆ ದಬದಬಾ ಮೈ ಗುದ್ದಿಸಿಕೊಂಡು ಮೆತ್ತಗಾಗಿ-ಮೊದಲಿನ ಉಳ್ಳಿ ಹೆಬ್ಬಟ್ಟಿನಷ್ಟು,-ಯಾಕೋ ಅದು ಚಣಿಗೀ ಹಾವು ಸುತ್ತಿಟ್ಟಂಗ ಕಾಣಸ್ತಿತ್ತು ನನಗೆ, ಒಮ್ಮೆ ಆ ಮಾತು ಆಡಿ ಬೈಸಿಕೊಂಡಿದ್ದೆ!

ಅದರಿಂದ ಕೆಳಗೆ ನಡುಬಟ್ಟಿನಷ್ಟು, ಅದರಕಿಂತಾ ಕೆಳಗೆ ಕಿರುಬಟ್ಟು ಮತ್ತು ಕಡೇದು ಊದುಬತ್ತಿಯಷ್ಟು ದಪ್ಪದ ಉಳ್ಳಿ. ಬಿಚ್ಚಿಟ್ರೆ ಒಂದೊಂದೂ ಹತ್ತು ಫೂಟಿಗಿಂತ ಕಮ್ಮಿ ಇಲ್ಲದ ಹಸಿ ಹಿಟ್ಟಿನ ಚಕ್ರಗಳು.. ಎಷ್ಟು ಇಂಥಾವು? ಕನಿಷ್ಟಪಕ್ಷ ನೂರು!

ಹಂಡೇ ಗಾತ್ರದ ತಾಬಾಣ, ಪರಾತ, ಸ್ಟೀಲಿನ ಬುಟ್ಟಿ ತುಂಬಿಕೊಂಡು, ಮೈ ಮೇಲೆ ತೆಳ್ಳನ್ನ ಆರುಗಜದ ವಾಯಿಲ್ ಸೀರೆಯ ಒಗೆದು ಹಿಂಡಿಸಿಕೊಂಡ ಒದ್ದೆಯನ್ನು ಹೊದ್ದುಕೊಂಡು ಹಿತ್ತಲ ಪಡಸಾಲೆ ಅರ್ಧಾ ಜಾಗ ಹಿಡ್ಕೊಂಡು ಕೂತರೆ ಒಂದಿಡೀ ದಿನದ ಕಾರ್ಖಾನೆ ಎದ್ದ ಲೆಕ್ಕ!

ಇನ್ನು ಶಾಂವಿಗೆ ಟೀಮಿನಲ್ಲಿ ಹಿಟ್ಟಿಗೆ ಕೈ ಹಚ್ಚುವ ಹಲವರು, ಪದ್ಮಾವತಿ ಅಥವಾ ಪದ್ದಿ, ಹಿಂದಿನ ಓಣಿಯ ಕಮಲಾಬಾಯಿ... ದೊಡ್ಡ ಬಂಗ್ಲೆಯ ಅರುಂಧತಿ, ಉಷಾಕಾಕೂ– ಇವರ ಬಳಿ ಲಕ್ಷಾವಧಿ ಮುಂಬೈ ಸುದ್ದಿಗಳಿರ್ತಿದ್ವು ಎಂದು ನೆನಪು, ತವರು ಮನೆ ಅಂದರೆ ಗೊತ್ತಲ್ಲ? ಸುಲಭಾವೈನೀ, ಮನೋರಮಾ ಮಾಮಿ, ಪಡಗಾನೂರ ಸೀತಾಕಕ್ಕಿ, ಶಾಂತಕ್ಕ...ಎಲ್ಲರ ಜೋಡಿ ಆಟಕ್ಕುಂಟು ಲೆಕ್ಕಕ್ಕಿಲ್ಲದ ನಾನು! ಇಡೀ ಟೀಮಿಗೆ ಮುಖಂಡರಾಗಿ ಶಾಂವಿಗೆ ಯಜ್ಞದ ಅಧ್ವೈರ್ಯುರುಗಳಾಗಿ ಗಂಗಕ್ಕ, ಸೋನಕ್ಕ..

ಗಂಗಕ್ಕ ತಪ್ಪೇಲಿ ಹಿಡಿದು ಬಂದಾಗ ಹಿಂದೇನೇ ಸೋನಕ್ಕ, "ಮಾಯೀ, ಮೂರು ಸೊಲಿಗಿ ನಂದೂ ತಯಾರಾಗೇದ, ನೀವು ಸಹೀ ಹಾಕಿದ ದಿನಾ ಟೀಂ ಹಜರ್ ಶಾಂವಿಗಿಗೆ"

ಮಾಯಿ ನಗ್ತಾರ. ಇವರೆಲ್ಲಾ ಇದ್ದದ್ದಕ್ಕೇ ಐದಾರು ಸೊಲಿಗಿ ಶಾಂವಿಗೆ ಆಡಾಡ್ತ ಆಗಿ ಹೋಗ್ತದ.

ನೇವಿದ್ಯಾ ಶಾವಿಗಿ ಅಂದ್ರ ಇನ್ನೊಂದು ಪುರಾಣಪುಣ್ಯೇನೇ.. ಹಸ್ತ ಮಡೀ ಇರಬೇಕು ಅಥವಾ ಏಕಾದಶಿ ಬರಬೇಕು, 'ಶಾವಿಗೀ ಕಣಕಾ ಕಲಸ್ಲಿಕ್ಕೆ ನಸುಕಿನೊಳಗ ಎದ್ದು ಧಾಬಳೀ ಉಟ್ಗೊಂಡು ಕೊಡಾ ತುಂಬತೀನಿ ತಡ್ರಿ..' ಅಂತ ಗಂಗಕ್ಕನ ಘೋಷಣಾ ಆಗಬೇಕು. 'ಹಸಿ ಹಾಲು ಎತ್ತಿಡೋ ಬಾಬ್ಯಾ' ಎಂದು ಆಕಳ ಹಿಂಡಿ ಕೊಡುವ ಬಾಬಣ್ಣನಿಗೆ ತಾಕೀತು ಮಾಡಬೇಕು. "ಕಡಿಗಿ ಮುಟ್ಟಿನವರು ನಮ್ಮನ್ಯಾಗ ಬಂದು ಮಲಗ್ರಿ" ಎಂದು ಹದಿನಾಲ್ಕರಿಂದ ನಲವತ್ತೈದರ ವರೆಗಿನ ಜಡೆ, ತುರುಬು, ಹೇರ್ ಕಟ್ಟಿನ 'ಮಂಥ್ಲಿ ಕೋರ್ಸ್' ಕೂಡುವ ಕೆಟೆಗರಿಯ ಹೆಣ್ಣು ತಂಡಕ್ಕೆ ಖಡಕ್ ಆಹ್ವಾನ ಕೊಟ್ಟರೆ ನೇವೇದ್ಯಾ ಶಾಂವಿಗೀ ಮಾಡುವ ಟೈಮ್ ಟೇಬಲ್ ತಯಾರಾಯ್ತು ಅಂತ ಲೆಕ್ಕ. ಹಾಂ, ತಿಂಗಳ ಮುಟ್ಟಿನ ದೋಷ ಅಂತಲ್ಲ, ಆ ಸಮಯದಲ್ಲಿ ಸಿಗ್ತಾ ಇದ್ದ ಟ್ವೆಂಟಿಫೋರ್ ಸೆವೆನ್ ಇಂಟು ಥ್ರೀ ಸಂಪೂರ್ಣ ರಜಾ, ಕೂತಲ್ಲಿ ಊಟ ಉಪಚಾರ, ರೇಡಿಯೋ, ಕಾದಂಬರಿ!

ಸುಖದ ಪರಿಭಾಷೆಗಳು ವಿವಿಧ ಬಗೆ..

ವರ್ಷಕ್ಕೆ ಛಪ್ಪನ್ನೈವತ್ತಾರು ಹಬ್ಬ, ಆ ನಿಮಿತ್ತ ಮಾಡಿಕೊಂಡು ವರ್ಷಕ್ಕೆ ಎರಡು ಸರ್ತೆಯಾದರೂ ಕೃಷ್ಣಾಜಿನದ ಪೆಟ್ಟಿಗೆಯಲ್ಲಿ ಬೆಚ್ಚಗೆ ಕೆಂಪು ಹಳದೀ ರೇಷ್ಮೆ ವಸ್ತ್ರದೊಳಗೆ ಸುತ್ತಿಕೊಂಡು ಮಲಗಿದ್ದ ಧೊಡ್ದೇವರುಗಳು ಎದ್ದು ಶಂಖ, ಚಕ್ರ ಗದಾ, ಪದ್ಮಸಹಿತ ಪತಾಕೆ, ಕೀರ್ತಿ, ಕಿರೀಟ, ಕಿನ್ನಾರ ಎಬ್ಬಿಸಿಕೊಂಡು ಬಂದು ಸೇವೆಗೊಳ್ಳುತ್ತಾರೆ. ಆ ಎಲ್ಲಾ ಹೊತ್ತಿಗೆ ಬೇಕು ಈ ಶಾವಿಗೆ! ಆಶ್ರಿತ ಆಚಾರ್ರು, ಮನೆ

ಪುರೋಹಿತರು "ಮಾಯೀ ನಿಮ್ಮನಿ ಶಾಂವಿಗಿ ಮಖಮಲ್ ಇದ್ದಂಗಿರ್ತಾವ.. ಸಾಕನ್ನೂದೇ ಇಲ್ಲ ದೇವ್ರು, 'ಅನ್ನೋತ ಶೋಡಷೋಪಚಾರ ಪೂಜೆ ಮುಗಿಸಿ ಊಟಕ್ಕೆ ಕೂತು ಎಲೆ ಮ್ಯಾಲೆ ಬಡಿಸಿದ ಶಾವಿಗೆ ಪಾಯಸಕ್ಕೆ ಅವರೆಲ್ಲರ ಪರವಾಗಿ ಸಂಪೂರ್ಣ ನ್ಯಾಯ ದಯಪಾಲಿಸಿಕೊಂಡಿದ್ರು.

"ಇಂದ್ರಕ್ಕಾ ನಿಮ್ಮ ಕೈ ಹತ್ತೇದಲಾ ಶಾಂವಿಗೀಗೇ? ಮತ್ತಿನ್ನೇನು...ಕೂದಲೆಳೆಯಷ್ಟು ಸಣ್ಣವ ತೊಗೋರಿ. "ಅಂದು ದೊನ್ನೆ ತುಂಬಿ ತುಂಬಿ ಹಾಕಿಸಿಕೊಂಡು ಸುರ್ರಂತ ಒಳಗ ಕಳಿಸಿ..ತೃಪ್ತಿಯಿಂದ ತೀಡಿ ತೀಡಿ ಉಂಡರೆ ಅಂದಿನ ಹೆಣ್ಮಕ್ಕಳಿಗೆ ಶ್ರೀಕೃಷ್ಣನೇ ದ್ರೌಪದಿಯ ಅಕ್ಷಯಪಾತ್ರೆಯೊಳಗಿಂದ ಅನ್ನದಗುಳು ಸ್ವೀಕಾರ ಮಾಡಿದಷ್ಟು ಹಿಗ್ಗು..

ಅಡಿಗೆ ಮಾಡಿ ಎಂದೂ ದಣಿದವರಲ್ಲ ಇಂದ್ರಕ್ಕ. "ಕೈ ಕಾಲು ಬೀಳೂತನಕಾ ನಿಮ್ಮನಿ ಅಡಿಗಿ ಬಿಡಂಗಿಲ್ಲ ಮಾಯೀ' ಅಂತಂದು ಅದನ್ನು ಖರೇ ಮಾಡಿ ತೋರಿಸಿದ ಜೀವ ಇಂದ್ರಕ್ಕ. ಆಚಾರ್ರ ಹೊಗಳಿಕೆಗೆ ಮನಸ್ಸು ಸ್ವಲ್ಪನರೇ ಉಬ್ಬಿರಲೇ ಬೇಕು..ಸಹಜ ಅಲ್ಲಾ?

"ಅಲ್ಲಿದ್ದಾಳ ನೋಡ್ರಿ, ಗೋಮಾತಾ ಅಕೀ ಹಾಲಿನ ಮಹಿಮಾ, ಕೈ ಬಿಚ್ಚಿ ಅಡಿಗೀ ಪದಾರ್ಥ ತಂದಿಡ್ತಾರಲ್ಲ ಈ ಮಾತಾ.." ಅದು ಅವರ ಮುಗ್ಧಮನಸಿನ ಒಂದು ಪದರ ಅಷ್ಟೇ.

ಏಕಾದಶಿಯ ಉಪ'ವಾಸ'ದ ಅಮೃತ ಗಳಿಗೆಗಳಲ್ಲಿ ಮುಂಜಾನೆ ಎಂಟರಿಂದ ಮೊದಲುಗೊಂಡು ಸಂಜೆಯತನಕಾ ನಡೆದ ಕೈಂಕರ್ಯದಲ್ಲಿ ಮನೆಯ ಸಮಸ್ತರಿಗೂ ಉಣಿಸುವ ಪಾಯಸದ ಶಾವಿಗೆ ತಯಾರಾಗ್ತಿದ್ದುವು. (ಶಾವಿಗೆ ಉಪ್ಪಿಟ್ಟು ಗಿಪ್ಪಿಟ್ಟು ಸ್ವಲ್ಪ ಕಡಿಮೆಯೇ)

ಸಾಲು ಸಾಲು ನಿಂತ ಶಾವಿಗಿ ಕೋಲಿನ ಅಡ್ಡಗಳದ ಮೇಲೆ ಮಕಮಲ್ ಪಡದೆ ಹಾಸಿದಂಥ ಶಾವಿಗೆ ಆರೆಂಟು ತಾಸಿನೊಳಗೆ ಒಣಗಿ ನಿಗಿನಿಗಿ ಅಂತ ನಿಗುರಿ ನಿಲ್ತಿತ್ತು. ಇದು ನಮ್ಮನೆ ಒಂದರದೇ ಕತೆ ಅಲ್ಲ, ಯಾರ ಮನೆಯೊಳಗೆ ಶಾವಿಗೆ ಮಾಡಿದರೂ ಇಷ್ಟೇ ಟೀಮು ಹೋಗಿ ಕೈ ಹಚ್ಚುವ ಅಘೋಷಿತ ಸಹಕಾರದ ಕಥನವಿದು..ಹೇಳಲು ಮರೆತೆ, ಶಾವಿಗೆ ಏರೇರಿ ಇಳಿಯುವಾಗ ತಪ್ಪದೇ ನಡೀತಿದ್ದದ್ದು ಊರುಸಾಬರಿಯ ಲಘು ಹರಟೆ..ಎಲ್ಲರ ಮನೆಯ ದೋಸೆಯ ಚರ್ಚೆ... ಹದಿಹರೆಯದವರ ಪ್ರೇಮ ಪ್ರಕರಣಗಳಿಗೆ ಪ್ರೈಮ್ ಟೈಮ್ ಚರ್ಚೆಯ ಭಾಗ್ಯ! ಅತ್ತೆ-ಸೊಸೆಯೆಂಬ ನಿತ್ಯನಿರಂತರ ರಗಳೆಗಳ ಚರ್ವಿತ ಚರ್ವಣವೂ ಅಷ್ಟು ಸೊಗಸಾಗಬಲ್ಲದೆಂದು ತಿಳಿದಿದ್ದೇ ಆಗ! ಮತ್ತೆ ಜೀವದ ಜೋಡಿಗಳಿಗೆ ದೇವರು ಹಚ್ಚಿ ಕಳಿಸಿದ ನೋವು, ನಲಿವಿನ ಸುದ್ದಿ. ಋಷಿಪಂಚಮಿ ಪೀರಿಯಡ್ ನಲ್ಲಿನ ಕೆಲವು ಮಾನಿನಿಯರು ನೆನೆಯುತ್ತ ನಗಿಸುವ ಅವರ ಪತಿರಾಯನ ರಸಿಕತೆಯ ಪ್ರಸಂಗಗಳು... ಕೆಲವರು ಹಾಡ್ತಿದ್ದರು, ಅದು ಕೈಶಾವಿಗೆ ರುಚಿ ಹೆಚ್ಚು ಮಾಡ್ತದಾ? ಇರಬಹುದೇನೋ...ಕಕಮಕ ನೋಡುವ ನನಗೆ ಅದೆಲ್ಲ ತಿಳಿಯದಿದ್ದದ್ದೇ ಹೆಚ್ಚು.

ನಡುವೆಯೆ ನಾಟ್ಯಸಂಗೀತದ ಲಯ ಎಬ್ಬಿಸುವ ಮನೋರಮಾ ಮಾಮೀ "ನ ಚ ಸುಂದರೀ ಕರು ಕೋಪಾ ಆಅಳ ಮಜವರಿ ಕರೀ ಅನುಕಂಫಾ" ಅಂತ ದನಿಯ ಪೆಟ್ಟಿಗೆ ಬಿಚ್ಚಿದರೆ ಮಾಯಿಯ ಮುಖವೂ ಒಮ್ಮೊಮ್ಮೆ ಯಾವುದೋ ನೆನಪಿನಿಂದ ಕೆಂಪಡರಿದ್ದು ಕಂಡೆ.

ಸಂಜೆಯ ಐದು ಹೊಡೀತು ಅಂದರೆ ಪತಿ ಮತ್ತು ಮಾವ ಇಬ್ಬರೂ ಕೋರ್ಟ್ ಮುಗಿಸಿಕೊಂಡು ಬಂದಿಳಿವರು.

ಶಾಂವಿಗೆ ಟೀಮಿನಲ್ಲಿ ಕೂತು ನೆಟ್ಟಗೆ ಉಳ್ಳಿತೀಡಲು ಬಾರದೆ ವೃಥಾ ಕಾಲಹರಣ ಮಾಡ್ತಿದ್ದ ನನ್ನ ಎಬ್ಬಿಸಿ "ಹೋಗವಾ, ಅಂವ ಬಂದ ನೋಡು.. ಚಹಾ ಪಹಾ ಏನರೆ ಬೇಕೇನು ನೋಡು" ಅನ್ನುವರು.

ನಾ ಎದ್ದು ಮಹಡಿಯ ಮೆಟ್ಟಿಲ ಬಳಿ ಹೊರಟರೆ ಹಿಂದಿನಿಂದ ಅವರ ಕುಲುಕುಲು ನಗಿ ಕಿವಿಗೆ ಬೀಳ್ತಿತ್ತು!

’ಜಾನೇ ಕಂಹಾ ಗಯೇ ವೋ ದಿನ್? ಕೋಯಿ ಲೌಟಾದೊ ಮೆರೇಬೀತೆ ಹುಯೆ ದಿನ್ ಹಾಡಿಬಿಡಲೇ?’

"ಸ್ಫೆಗೆಟಿ ಮುಗಿಸು ಮಾ. ತಣ್ಣಗಾಗ್ತದೆ" ಮಗಳ ದನಿ.

ಕೈಲಿದ್ದ ಫೋರ್ಕು ಮುಷ್ಕರ ಹೂಡಿತ್ತು. ಯಾಕೋ?!

■



## ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು. ಅವುಗಳಲ್ಲಿ ಇದೂ ಒಂದು – ನಿಮಗಾಗಿ.



ಹಾಗೇ ಇರಲಿ ಕಣಯ್ಯಾ ! ನಮ್ಮ ಆಫೀಸರು - ಏನು ಕೇಳಿದರೂ ನಿನಗೇನು ಕೋಡು ಎಂದೇ ಮಾತನಾಡಿಸುತ್ತಾರೆ.

# ಕಡೀ ಸೇಂಗಾ

ಶೀನೂ

ಒಬ್ಬ ವ್ಯಕ್ತಿಯ ಜೀವನದಲ್ಲಿ ಕೆಲ ಕೆಲವು ದಿನಗಳು ಬಲು ಮಹತ್ವದ ದಿನಗಳೆಂದು ಪರಿಗಣಿಸಲ್ಪಡುತ್ತವೆ. ಸೇವಾ ನಿವೃತ್ತಿಯ ದಿನ ಅಂತಹ ದಿನಗಳಲ್ಲೊಂದು ಮೂವತ್ತೈದು ವರುಷಗಳ ಅಖಂಡ ಸೇವೆಯ ನಂತರ ಅಂದು ನಾನು ನಿವೃತ್ತನಾಗಲಿದ್ದೆ. ಬೆಳಗಿನಿಂದ ಆಫೀಸಿನಲ್ಲಿ ಎಲ್ಲರೂ ಬಂದು ಕೈಕುಲುಕಿ ಬೀಳ್ಕೊಡುವ ಮಾತನಾಡುತ್ತಿದ್ದರು. ಇಡಿಯ ದಿನ ಆಫೀಸಿನ ವಾತಾವರಣದಲ್ಲಿ ಇನ್ನಿಲ್ಲದ ಸ್ನೇಹ, ಗೌರವ ಭಾವಗಳಲ್ಲದೇ ನಾಳೆಯಿಂದ ಅಗಲಬೇಕಲ್ಲವೇ? ಎಂಬ ನೋವು ಮಾರ್ದವತೆಗಳ ಹೊಳೆಯೇ ಹರಿಯುತ್ತಿತ್ತು.

ಸಂಜೆಯ ಬೀಳ್ಕೊಡುವ ಸಮಾರಂಭದಲ್ಲಂತೂ ಎಲ್ಲರ ಅಂತಃಕರಣಕ್ಕೆ ಮಹಾಪೂರವೇ ಬಂದಂತಾಗಿತ್ತು. ವೇದಿಕೆಯ ಮೇಲೆ ಬೆಟ್ಟದಷ್ಟೂ ಹಾರ ತುರಾಯಿಗಳ ಮಧ್ಯ ನಾನು ಮೂಕ ಪ್ರೇಕ್ಷಕನಂತೆ ಕುಳಿತಿದ್ದೆ. ಮೂವತ್ತೈದು ವರುಷಗಳ ಸೇವೆಯಲ್ಲಿ ಸ್ಮರಣೆಗೆ ಕೊರತೆಯೇ? ಮನದಾಳದಲ್ಲಿ ಹಳೆಯ ನೆನಪುಗಳ ಸಂತೆಯೇ ಸೇರಿತ್ತು. ಹೊರಗೆ ಭಾಷಣಗಳ, ಅಭಿನಂದನೆಗಳ, ಹಾರೈಕೆಗಳ ಪೈಪೋಟಿಯೇ ನಡೆದಿತ್ತು.

"ಶ್ರೀಯುತ ಶೀಪ್ರ ಅವರು ವರಿಷ್ಠ ದರ್ಜೆಯ ಅಧಿಕಾರಿಗಳೇ ಆಗಿದ್ದರೂ ತಮ್ಮ ಕೈಕೆಳಗಿನ ಏಲ್ಲ ಕಿರಿಯರನ್ನೂ ಅತ್ಮೀಯ ಭಾವದಿಂದಲೇ ನೋಡುತ್ತಿದ್ದರು...."

ಜೂನಿಯರ್ ಇಂಜಿನಿಯರ್ ಮಲ್ಲಪ್ಪಗೌಡ ಹೇಳುತ್ತಿದ್ದ. ಒಳ್ಳೆಯ ಹುಡುಗ ಕೆಲಸದಲ್ಲಿ ಅಷ್ಟಕ್ಕಷ್ಟೆ. ಆದರೆ ಪಾಪದ ಹುಡುಗ ನಾನೇ ಅವನನ್ನು ಸರ್ವಿಸಿನಲ್ಲಿ ಖಾಯಂ ಮಾಡಿಸಿದ್ದೆ.

"....ಶ್ರೀಯುತ ಶೀನೂ ಅವರ ಹೃದಯ ವೈಶಾಲ್ಯ, ದಯ, ಕರುಣೆ ಇತ್ಯಾದಿ ಮಾನವೀಯ ಗುಣಗಳ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ........ಪರ ಮಾತ್ಮ ಅವರಿಗೆ ಆಯುರಾರೋಗ್ಯವನ್ನೂ ಶಾಂತ, ಸ್ವಸ್ಥ ನಿವೃತ್ತ ಜೀವನವನ್ನೂ ಕರುಣಿಸಲಿ........" ಹೆಡ್ ವರದರಾಜ ಅಯ್ಯಂಗಾರಿ ಮಾತನಾಡುತ್ತಿದ್ದ.

ಅಯ್ಯಂಗಾರಿ ಒಳ್ಳೆಯ ಖದೀಮ, ಎರಡು ಸಲ ಸಿ.ಬಿ.ಆಯ್, ಬಲೆಯಲ್ಲಿ ಸಿಕ್ಕಿ ಬೀಳುತ್ತಿದ್ದ. ಪಾಪ ಮಕ್ಕಳೊಂದಿಗ, ನಾನೇ ಬಿಡಿಸಿದ್ದೆ.

".....ಶ್ರೀಮಾನ್ ಶೀನ್ ಅವರು ಅತ್ಯಂತ ದಕ್ಷ ಹಾಗೂ ನಿಷ್ಠ ಅಧಿಕಾರಿಗಳಾಗಿದ್ದರು. ಅವರು ಶೋಷಕ ವರ್ಗಕ್ಕೆ ಸೇರಿದವರೇ ಆಗಿದ್ದರೂ ಶೋಷಿ ತರ ಮೇಲೆ ಅವರಿಗೆ ಎಲ್ಲಿಲ್ಲದ ಪ್ರೀತಿಯಿತ್ತು. ಅವರ ಮಮತೆಗೆ ಪಾತ್ರರಾಗದ ಕಿರಿಯರೇ ಇಲ್ಲವೆಂದು ಹೇಳಬೇಕು...." ಕಾರ್ಮಿಕರ ಯೂನಿಯನ್ ಸೆಕ್ರೆಟರಿ ನಾಮದೇವ ಹೇಳುತ್ತಿದ್ದ. ವಾಸ್ತವದಲ್ಲಿ ಇವನೇ ನನ್ನನ್ನು ಶೋಷಿಸುತ್ತಿದ್ದ. ಆದರೂ ಎಷ್ಟೋ ಕಾರ್ಮಿಕ ಧುರೀಣರಿಗಿಂತ ಇವ ಮೇಲು.

"....ಶ್ರೀ ಶ್ರೀ ಸೀನೂ ಅವರ ಆಡಳಿತ ವೈಖರಿ ಎಲ್ಲರೂ ಮೆಚ್ಚತಕ್ಕದ್ದೇ. ಇವರು ಸ್ವಂತಕ್ಕೆ ಸಿಸ್ತಿನ ಸಿಪಾಯಿಯಾಗಿದ್ದರು. ಹಾಗಾಗಿ ಸ್ವಲ್ಪ ಕೂಡ ಅಶಿಸ್ತಿನ್ನು ಅದಕ್ಷತೆಯನ್ನು ಇವರು ಸಹಿಸುತ್ತಿರಲಿಲ್ಲ. ಡಿಪಾರ್ಟಮೆಂಟಿನ ಎಲ್ಲ ಅಧಿಕಾರಿಗಳಿಗೆ ಇವರು

ಹಿರಿಯಣ್ಣನಂತೆಯೇ ಸಲಹೆ ಸೂಚನೆಗಳನ್ನು ಕೊಡುತ್ತಿದ್ದರು. ಇವರ ಮಾರ್ಗದರ್ಶನದಲ್ಲಿ ಎಷ್ಟೋ ಕಿರಿಯರು ಕೆಲಸದ ಡಿಪಾರ್ಟಮೆಂಟಿನ ಶಿಸ್ತು ಪೇಚುಗಳನ್ನು ಕಲಿತುಕೊಂಡು ಇಂದು ಶ್ರೇಷ್ಠ ಅಧಿಕಾರಿಗಳಾಗಿದ್ದಾರೆ. ಶ್ರೀಯುತರ ಮಾರ್ಗದರ್ಶನದಲ್ಲಿ ನಮಗೆ ಇನ್ನೂ ಇನ್ನೂ ಸಿಕ್ಕಿದ್ದರೆ ಸಂತೋಷವಾಗುತ್ತಿತ್ತು....". ಆಫೀಸರ, ಅಸೋಸಿಯೇಶನ್ನಿನ ರಾಮಮೂರ್ತಿ, ಆಫೀಸಿನ ಮೇಜು, ಕುರ್ಚಿ, ಗೋಡೆ ಕಂಭಗಳು ಕೂಡ ಇವನ ಕೃಷ್ಣಲೀಲೆಯ ಕತೆಗಳನ್ನು ಸಾರುತ್ತಿವೆ.

"....ಜಾತಸ್ಯ ಮರಣಂ ಧ್ರುವಂ ಎಂಬಂತೆ ನೋಕರಸ್ಯ ನಿವೃತ್ತಿಂ ಧ್ರುವಂ ಎಂದು ಹೇಳಬೇಕಲ್ಲವೆ........" ಮ್ಯಾನೇಜರ ಸೋಮಯಾಜಿಯ ಹಾಸ್ಯ. ಇವನು ಬ್ರಾಹ್ಮಣ ನಾದದ್ದಕ್ಕೆ ಮತ್ತೆ ಮತ್ತೆ ಅಭದ್ರ ಸಂಸ್ಕೃತ ಮಾತನಾಡುತ್ತಿರುತ್ತಾನೆ.

"....ಇವರು ಆಫೀಸಿನ ಮಹಿಳಾ ಸಿಬ್ಬಂದಿಗಳಿಗೆಲ್ಲ ಹಿರಿಯರಂತಿದ್ದರು. ಮಹಿಳೆಯರೆಂದರೆ ಇವರಿಗೆ ಗೌರವ...." ಸ್ಟೇನೋ ಶೀಲಾ ಹೇಳುತ್ತಿದ್ದಳು. ಪಾಪ ಈ ಹುಡುಗಿ ಹದಿನೈದು ವರುಷಗಳ ಹಿಂದೆ ಕೆಲಸಕ್ಕೆ ಸೇರಿದಾಗ, ತುಂಬು ಹರೆಯದಲ್ಲಿ ಎಷ್ಟೊಂದು ಪ್ರಮಾಣಬದ್ಧವಾಗಿ shapely ಇದ್ದವಳು ಈಗ ಅಧ್ವಾನವಾಗಿ ಮೈ ಬಿಟ್ಟು ಶಿಕ್ಷೇಷಿತಳಾಗಿದ್ದಾಳೆ.

ಅಂತೂ ಅಭಿನಂದನೆಗಳ ಸುರಿಮಳೆ ಸರಿದು ಕೊನೆಯದಾಗಿ ನಾಲ್ಕು ಮಾತು ಹೇಳಲು ನಾನು ನಿಂತೆ. ಇಡಿಯ ಸಭಾಂಗಣವೇ ಸೂಜಿ ಬಿದ್ದರೂ ಸದ್ದಾಗುವಷ್ಟು ಶಾಂತವಾಗಿತ್ತು. ನನ್ನ ಗಂಟಲು ಕಟ್ಟಿತ್ತು. ದನಿ ಹೊರಡದಾಗಿತ್ತು. "ನನ್ನ ಪ್ರಿಯಮಿತ್ರರೇ" ಎಂದು ಪ್ರಾರಂಭಿಸಿ, ಮೂವತ್ತೈದು ವರುಷಗಳ ಹಿಂದಿನ ದಿನಗಳನ್ನು ನೆನಪಿಸಿದೆ. ಆಗ ಬೆಂಗಳೂರಿನಲ್ಲಿ ಜಟಕಾ ಓಡಾಡುತ್ತಿತ್ತು. ಎಂಟಾಣಿಗೆಲ್ಲ ಕಿಲೋ ಅಕ್ಕಿ ಬರುತ್ತಿತ್ತು. ಮೆಜೆಸ್ಟಿಕ್‌ನಲ್ಲಿ ಮೂರೆ ಚಿತ್ರಮಂದಿರಗಳು.... ನಿಮ್ಮಲ್ಲಿ ಹೆಚ್ಚಿನವರು ಇನ್ನೂ ಹುಟ್ಟಿರಲಿಕ್ಕಿಲ್ಲವೆಂದು ಹೇಳಿದೆ, ಎನಗಿಂತ ಡಿಪಾರ್ಟಮೆಂಟನು ಆಳಿದ ಮಹನೀಯರನ್ನು ನೆನೆದೆ. ಶ್ರದ್ಧೆ ಭಕ್ತಿ ವಿಶ್ವಾಸಗಳ ಮಹತ್ವವನ್ನು ಬಿಂಬಿಸಿದೆ. ಕೊನೆಯದಾಗಿ ನನ್ನಿಂದ ಏನಾದರೂ ತಪ್ಪುಗಳಾಗಿದ್ದಲ್ಲಿ, ಯಾರನ್ನಾದರೂ ಕಠೋರವಾಗಿ ನಡೆಯಿಸಿಕೊಂಡಿದ್ದಲ್ಲಿ..... ಮನನೋಯಿಸಿದ್ದಲ್ಲಿ ಕ್ಷಮಿಸಬೇಕೆಂದು ಕೇಳಿಕೊಂಡೆ....

ನಾನು ಕೈಜೋಡಿಸಿ ಕ್ಷಮೆ ಕೇಳುತ್ತಿದ್ದಂತೆಯೇ ಎಲ್ಲರ ಕಣ್ಣುಗಳೂ ಹನಿಗೂಡಿದ್ದವು. ಒಂದಿಬ್ಬರು ಮಹಿಳಾ ಮಣಿಗಳಂತೂ ಕರವಸ್ತ್ರದಿಂದ ಕಣ್ಣೂರಸಿಕೊಳ್ಳುತ್ತಿದ್ದರು.

ಅಂತೂ ಸಮಾರಂಭ ಕೊನೆಗೊಂಡಿತ್ತು. ಇನ್ನೊಮ್ಮೆ ಮತ್ತೊಮ್ಮೆ ಎಲ್ಲರ ಕೈಕುಲುಕಿ, ಕಿರಿಯರ ಬೆನ್ನು ಸವರಿ, ನಿವೃತ್ತಿಯ ನಂತರ ನನ್ನನ್ನು ಮರೆತುಬಿಡ ಬಾರದೆಂದೂ ಆಗೀಗ ಮನೆಯ ಕಡೆಗೆ ಬರುತ್ತಿರಬೇಕೆಂದೂ ಕಳಕಳಿಯಿಂದ ಕೇಳಿ ಕೊಂಡೆ. ಮತ್ತೊಮ್ಮೆ ಎಲ್ಲರೂ ಕಣ್ಣೊರೆಸಿಕೊಳ್ಳುತ್ತಿದ್ದಾಗ, ಆಫೀಸಿನ ನನ್ನ ಕೋಣೆಗೆ ಬಂದೆ. ಒಂದೆರಡು ಫಾಯಿಲುಗಳನ್ನು ಆಚೀಚೆ ಸರಿಸುತ್ತಿದ್ದಂತೆಯೇ ಒಮ್ಮೆಲೇ ವಿದ್ಯುತ್ ಪ್ರವಾಹ ನಿಂತು ದೀಪಗಳೆಲ್ಲ ನಂದಿ ಗಾಢಾಂಧಕಾರವೇ ಆವರಿಸಿತು.

ಸರಿ ಇನ್ನೇನು ಮನೆಗೆ ಹೊರಡುವಾ ಎಂದು ಹೊರಗೆ ಬಂದೆ. ಅಲ್ಲೂ ಕತ್ತಲೆಯೆ. ನನ್ನ ಸಹೋದ್ಯೋಗಿಗಳೆಲ್ಲ ಬಸ್ಸು ಹಿಡಿಯುವ ಆತುರದಲ್ಲಿದ್ದರು. ಮೆಟ್ಟಲಿನ ಮೇಲೆಲ್ಲ ನೂಕುನುಗ್ಗಲು, ಒಬ್ಬರ ಮುಖ ಒಬ್ಬರಿಗೆ ಕಾಣದು. ಮಾತು ನಗೆಗಳ ಅಬ್ಬರ, ಅಟ್ಟಹಾಸ ಮಾತ್ರಾ ಕಿವಿಗಳಿಗೆ ಅಪ್ಪಳಿಸುತ್ತಿತ್ತು.

"ಅಂತೂ ಹೋಯಿತಲ್ಲಪ್ಪ, ಪೀಡೆ, ಮುದಿಕೋತಿಯ farewell ಗೇಂತ ಇಪ್ಪತ್ತೈದು ರೂಪಾಯಿ ದಂಡ ಬೇರೆ" ಸ್ಟೇನೋ ಶೀಲಾಳ ದನಿ.

"ಅಯ್ಯೋ ಹಾಗ್ಯಾಕ್ರೀ ಹೇಳ್ತೀರಾ, ಪಾಪ, ಪೆದ್ದನೇ ಇರಲಿ, ದಡ್ಡನೇ ಇರಲಿ, ಹುಚ್ಚನೇ ಇರಲಿ, ಮನುಷ್ಯ ಒಳ್ಳೆಯವನಿದ್ದ ಪಾಪ" ಜ್ಯೂನಿಯರ್ ಇಂಜಿನಿಯರ್ ಮಲ್ಲಪ್ಪಗೌಡನ ದನಿ.

ಕತ್ತಲಲ್ಲಿ ನಾನು ಭರಭರನೇ ಈಚೆಗೆ ಬಂದೆ. ನನ್ನ ಕಣ್ಣು ತುಂಬಿಬರುತ್ತಿದ್ದವು.

■

## ಒಂದು ನಾಯಿ ಪ್ರಸಂಗ

ಒಬ್ಬ ಕಳ್ಳ ಆ ಮಹಲಿನ ಸುತ್ತಲಿನ ಗೋಡೆಯನ್ನ ಮೆಲ್ಲಗೆ ಹತ್ತಿದ. ಒಳಗಿನ ಕಾಂಪೌಂಡಿನಲ್ಲಿ ಒಂದು ನಾಯಿ ನಿಂತಿತ್ತು. ಭಾರಿ ಅಲ್ಸೇಷನ್ ನಾಯಿ ಅದು. ಅದು ಗೋಡೆ ಮೇಲೆ ನಿಂತಿದ್ದ ಕಳ್ಳನನ್ನು ನೋಡಿದರೂ ಬೊಗಳದೇ ಸುಮ್ಮನೆ ನಿಂತಿತ್ತು. ಕಳ್ಳ ಧೈರ್ಯ ಮಾಡಿ ಕಾಂಪೌಂಡ್ ಒಳಗೆ ಇಳಿದ. ನಾಯಿ ಸುಮ್ಮನಿತ್ತು. ನಿಧಾನವಾಗಿ ಕಳ್ಳ ಮನೆಯ ಬಾಗಿಲಿನ ವರೆಗೂ ನಡೆದ. ನಾಯಿ ತುಟಿಪಿಟಕ್ಕೆನ್ನಲಿಲ್ಲ. ಕಳ್ಳನಿಗೆ ಆಶ್ಚರ್ಯವೇ ಆಶ್ಚರ್ಯ. "ಇದೆಂಥ ನಾಯಿ. ನನ್ನ ಕಂಡರೆ ಎಷ್ಟು ಅಭಿಮಾನ ಇದಕ್ಕೆ. ಆದರೂ ಬಾಗಿಲು ಒಡೆಯುಕ್ಕೆ ಮುಂಚೆ ಇದನ್ನು ವಶಮಾಡಿಕೊಳ್ಳೋದು ವಾಸಿ" ಅಂದುಕೊಂಡು ಕಳ್ಳ ಜೇಬಿನಿಂದ ಎರಡು ಬಿಸ್ಕೀಟು ತೆಗೆದು ನಾಯಿ ಮುಂದೆ ಎಸೆದ. ಒಮ್ಮೆಲೇ, ನಾಯಿ, " ಬೌ, ಬೌ " ಅಂತ ಸೂರು ಕಿತ್ತುಹೋಗುವ ಹಾಗೆ ಬೊಗಳಲು ಶುರು ಮಾಡಿತು.

ಕಳ್ಳ ನಾಯಿಯನ್ನ ಕುರಿತು, "ಅಲ್ಲಾ ಶ್ವಾನರಾಜಾ, ಇಷ್ಟು ಹೊತ್ತು ನಾನು ಬಂದದ್ದನ್ನು ನೋಡಿದರೂ ಸುಮ್ಮನಿದ್ದೆ. ಈಗ ಬಿಸ್ಕೀಟು ಹಾಕಿದ ತಕ್ಷಣ ಯಾಕೆ ಹಾಗೆ ಬೊಗಳಲು ಪ್ರಾರಂಭಿಸಿದೆ?" ಅಂತ ಕೇಳಿದ.

ನಾಯಿ, "ನಿನ್ನ ಪಾಡಿಗೆ ನೀನು ನಿನ್ನ ಕೆಲಸ ಮಾಡಿಕೊಂಡಿದ್ದೆ. ನನಗ್ಯಾಕೆ ಇತರರ ಉಸಾಬರಿ ಅಂತ ಸುಮ್ಮನಿದ್ದೆ. ನೀನು ಬಿಟ್ಟಿ ಬಿಸ್ಕೀಟು ಕೊಟ್ಟ ತಕ್ಷಣ, ಅರೆ ಇವನ್ಯಾಕೆ ನನಗೆ ಬಿಸ್ಕೀಟ್‌ನ ಬಿಟ್ಟಿ ಕೊಡ್ತಿದಾನೆ? ಏನೋ ತಪ್ಪು ಕೆಲಸ ಮಾಡೋಕ್ಕೆ ಹವಣಿಸ್ತಿರಬೇಕು, ಅದಕ್ಕೇ ಲಂಚ ಕೊಡ್ತಿದಾನೆ, ಅಂತ ಅಂದ್ಕೊಂಡು ಬೊಗಳಿದೆ" ಅಂತ ಉತ್ತರಿಸಿತು ಕಿಲಾಡಿ ನಾಯಿ.

# ನ್ಯೂಯಾರ್ಕ್ ಕಿಂದರಿಜೋಗಿ

✍ಆನಂದ

'ನ್ಯೂಯಾರ್ಕಿಗೆ ಒಬ್ಬ ಕಿಂದರಿಜೋಗೀನ ನೇಮಿಸಿದ್ದಾರಂತೆ ರೀ' ಎಂದಳು ಮಡದಿ ಪೇಪರ್ ಮಡಿಸಿಡುತ್ತಾ.

'ಕಿಂದರಜೋಗಿ! ಅದೂ ನ್ಯೂಯಾರ್ಕಿಗೆ!!' ನನ್ನ ಪ್ರತಿಕ್ರಿಯೆ.

'ಹೌದೂರಿ. ಅಲ್ಲಿ ಇಲಿಗಳ ಕಾಟವೇ ಕಾಟವಂತೆ. ಸಣ್ಣಿಲಿ ದೊಡ್ಡಿಲಿ ಮೂಗಿಲಿ ಹೀಗೆ ಕುವೆಂಪು ಅವರ ಪದ್ಯದಲ್ಲಿ ಬರುವ ಎಲ್ಲ ಇಲಿಗಳೂ ಸಾವಿರಾರು ಸಂಖ್ಯೆಯಲ್ಲಿ ಜನಗಳಿಗೆ ಕಾಟ ಕೊಡತಿದೆಯಂತೆ. ಅದಕ್ಕೆ ಕಿಂದರಜೋಗಿ ನೇಮಕ.'

'ಒಬ್ಬ ಕಿಂದರಿಜೋಗಿ ಸಾಕೆ, ಪದ್ಯದಲ್ಲಿ ಬಂದ ಹಾಗೆ?'

'ಇಲಿ ಹಿಡಿಯೋ ಸಿಬ್ಬಂದಿ ಈಗಾಗಲೇ ಇದಾರೆ ಆದರೆ ಅವರಿಗೆ ಒಬ್ಬ ಡೈನಾಮಿಕ್ ಲೀಡರ್ ಇರಲಿಲ್ಲ. ಹಾಗಾಗಿ ಕಿಲ್ಲರ್ ಇನ್‌ಸ್ಟಿಂಕ್ಟ್ ಅಂದರೆ ಹೊಡಿಬಡಿ ಕೊಲ್ಲು ಗುಣ ಇರೊ ನಾಯಕನಿಗಾಗಿ ಜಾಹೀರಾತು ಕೊಟ್ಟಿದ್ದರು..'

'ಹೋ! ಸಂದರ್ಶನ ಎಲ್ಲಾ ನಡೆದಿರಬೇಕು ಹಾಗಿದ್ದರೆ..'

'ಅದೆಲ್ಲ ಗೊತ್ತಿಲ್ಲ. ಆದರೆ ನೇಮಕ ಅಂತೂ ಆಗಿದೆ. ಸಂಬಳ ಸುಮಾರು 150,000 ಡಾಲರ್ ವರ್ಷಕ್ಕೆ.'

'ನಮ್ಮವರು ಯಾರಾದರೂ ಸೆಲೆಕ್ಟ್ ಆದರೇನು?'

'ರಿಸರ್ವೇಷನ್ ಇತ್ತೂಂತ ಕಾಣುತ್ತೆ. ಅದಕ್ಕೆ ಲೋಕಲ್ ಕ್ಯಾಂಡಿಡೇಟ್ ಕಥ್ಲೀನ್ ಕೊರಾಡಿ ಎಂಬುವರಿಗೆ ಕೆಲಸ ದಕ್ಕಿದೆ. ಅವರೇ ಈಗ ವಿಶ್ವದ ನಂಬರ್ ಒನ್ ಸಿಟಿಯ ಇಲಿಗಳ ನಾಶದ ಸೈನ್ಯದ ಕಮಾಂಡರ್.'

'ಬಜೆಟ್ ಎಷ್ಟಿರಬಹುದೊ ಈ ಮೂಷಿಕ ಯುದ್ದಕ್ಕೆ?'

'ಈಗಾಗಲೇ ಲಕ್ಷಾಂತರ ಡಾಲರ್ ಖರ್ಚಾಗಿದೆಯಂತೆ ಆದರೆ ಇಲಿಗಳ ಸಂಖ್ಯೆ ಮಾತ್ರ ಕಡಿಮೆ ಆಗಿಲ್ಲ.'

'ನಮ್ಮ ಬಿಬಿಎಂಪಿ ಸೊಳ್ಳೆನಾಶದ ಪ್ರಯತ್ನದಂತೆ ಅನ್ನೂ ಹಾಗಿದ್ದರೆ.'

'ಛೇ! ಅಷ್ಟೆಲ್ಲ ಭ್ರಷ್ಟಾಚಾರ ಇರೊ ಮಟ್ಟಿಗೆ ಕಾಣೆ ಅಲ್ಲೆಲ್ಲ'.

'ನಕಲಿ ಬಿಲ್‌ಗಳು ಸೃಷ್ಟಿ ಆಗಿರೊಲ್ಲ ಅಂತೀಯಾ...'

'ನಮ್ಮ ವಿಧಾನ ಸೌಧಕ್ಕೂ ಒಬ್ಬ ಇಲಿ ಹಿಡಿಯೋ ಸೀನಿಯರ್ ಅಧಿಕಾರೀನ ನೇಮಿಸಿದರೆ ಹೇಗೆ?'

'ಎಷ್ಟು ಕಾಲಿನ ಇಲಿ?'

'ಇಲಿ ಅಲ್ಲ ನಾಲ್ಕು ಕಾಲಿನ ಹೆಗ್ಗಣಗಳನ್ನ..'

'ಇಂಪಾಸಿಬಲ್. ಪ್ರಾಮಾಣಿಕ ಅಧಿಕಾರಿ ಸಿಕ್ಕರೂ ಅವನನ್ನ ಕೆಲಸ ಮಾಡೋದಿಕ್ಕೆ ಬಿಡೊಲ್ಲ.'

'ಸೊ, ಹಾಗಿದ್ದರೆ ನಮ್ಮ ಕಿಂದರಜೋಗಿ ಪದ್ಯದಲ್ಲೇ ಉಳೀತಾನೆ. ಓದಿ ಸಮಾಧಾನ ಪಡಬೇಕು ಅಷ್ಟೆ.'

■

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂನಆ

- ✓ ಹೂವನ್ನು ಉಳಿಸಿಕೊಳ್ಳಲು ಮುಳ್ಳಿಗೂ ನೀರೆರೆಯುತ್ತೇವೆ.
- ✓ ನೀವು ಗಳಿಸಿದ್ದೆಲ್ಲ ಖಾಲಿಯಾಗಬಹುದು. ಆದರೆ ಕೊನೆಯ ತನಕ ಉಳಿಯುವುದು ನೀವು ಉಳಿತಾಯ ಮಾಡಿದ್ದು.
- ✓ ದೊಡ್ಡವರಾದ ಬಳಿಕ ಏನಾಗಬೇಕು ಎಂಬುದು ಯಾವತ್ತೂ ಗೊತ್ತಾಗುವುದೇ ಇಲ್ಲ. ಅಸಲಿಗೆ ನೀವು ಯಾವಾಗ ದೊಡ್ಡವರಾಗಿದ್ದೀರಿ ಎಂಬುದೂ ಗೊತ್ತಾಗುವುದಿಲ್ಲ.
- ✓ ಯು ಆರ್ ಸ್ಟ್ರಾಂಗ್ ವೆನ್ ಯು ನೊ ಯುವರ್ ವೀಕ್‌ನೆಸೆಸ್; ಯು ಆರ್ ಬ್ಯೂಟಿಫುಲ್ ವೆನ್ ಯು ಅಪ್ರಿಷೆಯೇಟ್ ಯುವರ್ ಫ್ಲಾಸ್; ಯು ಆರ್ ವೈಸ್ ವೆನ್ ಯು ಲರ್ನ್ ಫ್ರಂ ಯುವರ್ ಮಿಸ್ಟೇಕ್ಸ್.
- ✓ ಬಡವನು ರಾಜಕಾರಣಿ ಆಗಬಹುದು ಆದರೆ ಅವನು ಮತ್ತೆ ಬಡವನಾಗಲಾರ.
- ✓ ಮೌನ ಸಾಗರ. ಮಾತು ನದಿ. ಸಾಗರ ನಿಮ್ಮನ್ನು ಎದುರು ನೋಡುತ್ತಿದ್ದಾಗ ನದಿಯ ಬಳಿಗೆ ನಡೆಯದಿರಿ. ಸಾಗರವನ್ನು ಆಲಿಸಿ.
- ✓ ಹಚ್ಚುವುದಾದರೆ ದೀಪವನ್ನೇ ಹಚ್ಚಿ. ಬೆಂಕಿಯನ್ನಲ್ಲ. ಆರಿಸುವದಾದರೆ ನೋವನ್ನು ಆರಿಸಿ. ನಗುವನ್ನಲ್ಲ.
- ✓ ಪಾಸ್ಟ್: ನೊ ಮ್ಯಾಟರ್ ಹೌ ಮಚ್ ಯು ರಿವಿಸಿಟ್ ಇಟ್ ದೇರ್ ಈಸ್ ನಥಿಂಗ್ ನ್ಯು ಟು ಸೀ.
- ✓ ನಿಮ್ಮ ಬಾಳನ್ನು ಬರೆಯುವವರು ನೀವೇ. ಆದುದುರಿಂದ ಸಾಹಿತ್ಯವನ್ನು ಬದಲಾಯಿಸಲು ಹೆದರದಿರಿ.
- ✓ ಎಲ್ಲರಿಗೂ ಜೇನುತುಪ್ಪ ಇಷ್ಟ ಆದರೆ ಯಾರೂ ಜೇನು ಹುಳ ಸಾಕಲು ಇಷ್ಟಪಡುವುದಿಲ್ಲ.
- ✓ ಗ್ಲಾಸ್ ಆರ್ಧ ತುಂಬಿದೆಯೋ ಅಥವಾ ಆರ್ಧ ಖಾಲಿಯೋ ಎಂಬುದರ ಬಗ್ಗೆ ಚಿಂತೆ ಬೇಡ. ಒಂದು ಗ್ಲಾಸ್ ಆದರೂ ಇದೆ ಅದರಲ್ಲಿ ಏನೋ ಒಂದಿಷ್ಟು ತುಂಬಿದೆ ಎಂಬುದಕ್ಕೆ ಖುಷಿ ಪಡಿ.
- ✓ ಮೇಕಿಂಗ್ ಎವೆರಿಬಡಿ ಹ್ಯಾಪಿ ಈಸ್ ನಾಟ್ ಇನ್ ಯುವರ್ ಹ್ಯಾಂಡ್ಸ್ ಬಟ್ ಬೀಯಿಂಗ್ ಹ್ಯಾಪಿ ವಿತ್ ಎವೆರಿಒನ್ ಈಸ್ ಡೆಫನೆಟ್ಲಿ ಇನ್ ಯುವರ್ ಹ್ಯಾಂಡ್ಸ್.
- ✓ ಒಂದು ಗಂಡಾಂತರವನ್ನು ವ್ಯರ್ಥ ಮಾಡಲು ಬಿಡಬೇಡಿ.
- ✓ ತಮ್ಮ ಮಕ್ಕಳು ತಮ್ಮ ಗಂಡಂದಿರಗಿಂತ ಯೋಗ್ಯರಾಗಲು ಹೆಂಡತಿಯರು ಬಯಸುತ್ತಾರೆ.
- ✓ ಇಫ್ ಯು ಫೆಲ್ ಡೌನ್ ಯೆಸ್ಡೆರ್‌ಡೆ ಸ್ಟಾಂಡ್ ಅಪ್ ಟುಡೆ.

■

# ಹಾಫ್–ಹೆಲ್ಮೆಟ್ ಲಕ್ಕಣ್ಣ

✍ ವಿನಾಯಕ ಕಾಮತ್

ಮೊನ್ನೆ ಬೆಂಗಳೂರು ಸಂಚಾರಿ ಪೋಲಿಸರು, ಡಿಸ್ಕೌಂಟ್ ಸೇಲ್ ಹಮ್ಮಿಕೊಂಡಿದ್ದರಲ್ಲ; ಐ ಮೀನ್, ಸಂಚಾರಿ ನಿಯಮ ಉಲ್ಲಂಘಿಸಿ ಹಾಕಿಸಿಕೊಂಡ ದಂಡಗಳಿಗೆ 50% ರಿಯಾಯತಿ ಘೋಷಸಿದ್ದರಲ್ಲ; ಈ ಸುದ್ದಿ ತಿಳಿದ ಘಳಿಗೆಯಿಂದ, ನಮ್ಮ ಸಹ–ನಿರುದ್ಯೋಗಿ ಲಕ್ಕಣ್ಣ ಸ್ವಲ್ಪ ರೆಸ್ಟ್–ಲೆಸ್ ಆಗಿದ್ದ. ಅಥವಾ ಅಚ್ಚ ಕನ್ನಡದಲ್ಲಿ ಹೇಳುವುದಾದರೆ, ಅಂ.ಸು. ಬೆಕ್ಕಿನಂತಾಡತೊಡಗಿದ್ದ! ಇರಲಾರದೆ ಇರುವೆ ಬಿಟ್ಟುಕೊಳ್ಳುವುದನ್ನೇ ತನ್ನ ಜನ್ಮ–ಸಿದ್ಧ ಹಕ್ಕಾಗಿಸಿಕೊಂಡಿದ್ದ ಲಕ್ಕಣ್ಣ, ಏನೋ ಎಡವಟ್ಟು ಮಾಡಿಕೊಂಡಿರಬೇಕೆಂದು, ನಾನೂ ಸುಮ್ಮನಿದ್ದೆ. ಉಳಿದ ಸಮಯದಲ್ಲಿ ಸಾಮಾನ್ಯವಾಗಿರುತ್ತಿದ್ದ ಲಕ್ಕಣ್ಣ, ಈ ಡಿಸ್ಕೌಂಟ್ ಸೇಲ್ ವಿಷಯ ಬಂದಾಗಲೆಲ್ಲ ಗಲ್ಲಿ–ಬಿಲ್ಲಿಯಾಗುತ್ತಿರುವುದು ನನ್ನ ಆಶ್ಚರ್ಯಕ್ಕೆ ಕಾರಣವಾಗಿತ್ತು. ಸ್ವಂತ ಗಾಡಿಯನ್ನು ಸಾಕುವ ಸಾಹಸಕ್ಕೆ ಕೈ ಹಾಕದೆ, ಬಿಟ್ಟಿಯಾಗಿಯೇ ಬಿಡುಬೀಸು ತಿರಿಗುತ್ತಿದ್ದ ಲಕ್ಕಣ್ಣನಿಗೂ, ಈ ಡಿಸ್ಕೌಂಟ್ ಸೇಲ್ಗೂ ಎತ್ತಣಿಂದೆತ್ತ ಸಂಬಂಧವಯ್ಯ! ಎಂದು ನಾನು ವಿಷಯವನ್ನೂ ಮರೆತಿದ್ದೆ.

ಮರುದಿನ, ಈ ಡಿಸ್ಕೌಂಟ್ ಸೇಲ್ ಬಹಳ ಯಶಸ್ವಿಯಾಗಿ ಸಾಗುತ್ತಿದ್ದ ಬಗ್ಗೆ ಪತ್ರಿಕಾ ವರದಿಯಾಗಿತ್ತು. ಎರಡೇ ದಿನಗಳಲ್ಲಿ, ಲಕ್ಷಾನುಗಟ್ಟಲೆ ಪ್ರಕರಣಗಳ ವಿಲೇವಾರಿಯಾಗಿ, ಕೋಟ್ಯಾನುಗಟ್ಟಲೆ ದಂಡ ಸಂಗ್ರಹವಾಗಿತ್ತು. ರಿಯಾಯತಿ ದರದಲ್ಲಿ ಪಾಪ ತೊಳೆದು ಕೊಳ್ಳುವ ಅವಕಾಶ ಸಿಕ್ಕಾಗ, ಬೆಂಗಳೂರಿಗರು ಸುಮ್ಮನೆ ಬಿಟ್ಟಾರೆಯೇ? ಹಳೆಯ ಪಾಪಗಳನ್ನು ಚಚ್ಚಿ ಬಿಸಾಕಿ, ಹೊಸ ಪಾಪಕ್ಕೆ ಅಣಿಯಾಗುತ್ತಿದ್ದರು! ದಂಡ–ಪಾವತಿ ಕೇಂದ್ರಗಳಲ್ಲಿ, ಪಾಪದವರ ಸಾಲಿನ ಉದ್ದ, ಪ್ರಸಾದ–ಭೋಜನದ ಸಾಲುಗಳ ಉದ್ದವನ್ನು ಮೀರಿಸಿತ್ತು.'ಸಾಲು ಮಾಡಿಯಾದ್ರೂ ಊಟ ತಿನ್ನು' ಎಂದು ನಾನೂ ಒಂದೆರಡು ಬಾರಿ ಇಂತಹ ಸಾಲುಗಳಿಗೆ ನಿಂತು, ಬೇಸ್ತು ಬಿದ್ದಿದ್ದೆ. ಪೇಟಿಎಂನಂತಹ ಅನ್ವಯಗಳೆಲ್ಲ, ಈ ದಂಡ ತುಂಬುವವರ ಸಂಭ್ರಮಕ್ಕೆ ಹೆದರಿ, ಉದ್ದಂಡ ಮಲಗಿದ್ದವು. ಎಲ್ಲರೂ, 'ಸಿಗ್ನಲ್ ಹಾರಿದ ಪಾಪ, ದಂಡ ತುಂಬಿ ಪರಿಹಾರ' ಮಾಡಿಕೊಳ್ಳುತ್ತಿದ್ದರು. ಎಲ್ಲರೂ ನನ್ನಂತೆಯೇ ಸಂಚಾರಿ ನಿಯಮಗಳನ್ನು ಪಾಲಿಸಿ, ಶಿರಸ್ತ್ರಾಣ ಧರಿಸಿಯೇ, ದ್ವಿಚಕ್ರದ ಮೇಲೆ ಯುದ್ಧಕ್ಕೆ ಹೊರಡುತ್ತಾರೆಯೇ? (ಬೆಂಗಳೂರಿನ ರಸ್ತೆಗಳಲ್ಲಿ ವಾಹನ ಓಡಿಸುವುದು, ಯಾವ ಯುದ್ಧಕ್ಕೆ ಕಡಿಮೆ? ನೀವೇ ಹೇಳಿ!)

ಹೀಗಿರುವಾಗ, ನನ್ನ ಗಾಡಿಯ ಮೇಲೆ ಅಪ್ಪಿ–ತಪ್ಪಿ ಎಲ್ಲಾದರೂ ದಂಡ ಬಿದ್ದಿದೆಯೇ, ಎಂದು ನೋಡುವ ಹುಕಿ ಬಂದಿತು. ಬಿದ್ದಿದ್ದರೆ ಅದು ಕರ್ನಾಟಕದ ಎಂಟನೇ ಅದ್ಭುತವಾಗುತ್ತದೆ ಎಂಬ ವಿಶ್ವಾಸದಲ್ಲಿಯೇ, ನನ್ನ ದ್ವಿಚಕ್ರಿಯ ನೋಂದಣಿ ಸಂಖ್ಯೆ ಒತ್ತಿ ಮೊಬೈಲ್ ನಲ್ಲಿ ಪರಿಶೀಲಿಸಿದೆ. ಅಂದು ಕೊಂಡಂತೆಯೇ, ಯಾವುದೇ ದಂಡ ದಾಖಲಾಗಿರಲಿಲ್ಲ. ಯಾವಾಗಲೂ ಸಂಚಾರಿ ನಿಯಮಗಳನ್ನು ಪಾಲಿಸುವ ನನ್ನ ಮೇಲೆ, ನನಗೇ ಹೆಮ್ಮೆಯಾಯಿತು. ಇನ್ನೇನು, ಆ ಮೊಬೈಲ್ ಅನ್ವಯದಿಂದ ಹಿಂದೆ ಬರಬೇಕು, ಅಷ್ಟರಲ್ಲಿ ನಾನು ದಾಖಲಿಸಿದ ಸಂಖ್ಯೆ ತಪ್ಪಾಗಿರುವುದು ಗಮನಕ್ಕೆ ಬಂತು. 'ಆಹಾ! ನಾನು ತಪ್ಪಾಗಿ ಒತ್ತಿದ ಸಂಖ್ಯೆಗೇ ದಂಡವಿಲ್ಲ, ಇನ್ನು ನನ್ನ ಸರಿಯಾದ ಸಂಖ್ಯೆಗೆ ದಂಡವಿರಲು ಹೇಗೆ ಸಾಧ್ಯ' ಎಂದು ಮತ್ತೊಮ್ಮೆ ಪರಿಶೀಲಿಸದೆ.

ನೋಡುವುದೇನು?ಐನೂರರ ಮೂರು ಚಲನ್ ಗಳು. ಬರೋಬ್ಬರಿಸಾವಿರದೈನೂರು ಕಪ್ಪಕಾಣಿಕೆ ಬಾಕಿ! 50% ಕಡಿತದ ದರದಲ್ಲಿ ಏಳುನೂರೈವತ್ತು! ನನ್ನ ಸೊಕ್ಕಿನ ಬಲೂನು, ಫೈನ್ ಎಂಬ ಪಿನ್ ಗೆ 'ಢಮ್'ಗುಟ್ಟಿತ್ತು. ನನಗೆ ತಿಳಿದಂತೆ, ನಾನೆಲ್ಲಿಯೂ ನಿಯಮ ಉಲ್ಲಂಘನೆ ಮಾಡಿರಲಿಲ್ಲ. ಆದರೂ ದಂಡ ಬಿದ್ದದ್ದು ಹೇಗೆಂದು ನೆನೆಸಿ, ತಲೆ ಚಾದಂಗಡಿಯ ಒಲೆಯಾಯಿತು. ಮತ್ತೊಮ್ಮೆ, ಮೊಬೈಲ್ ತೆಗೆದು ಅನ್ವಯದೊಳಗೆ ಹೊಕ್ಕು, ಹೆಚ್ಚಿನಮಾಹಿತಿಗಾಗಿ ಜಾಲಾಡಿದೆ. ಅಲ್ಲಿ, ನಿಯಮ ಉಲ್ಲಂಘಿಸಿದ ಕಾರಣ, ಸ್ಥಳ ಮತ್ತುಸಮಯ ಗೊತ್ತಾಯಿತು. ವಾಹನ ಚಾಲಕ ಹಾಗೂ ಅವನ ಹಿಂದೆ ಕುಳಿತ ಬಾಲಕ ಇಬ್ಬರೂ ಶಿರಸ್ತ್ರಾಣೇದಾರರಾಗದೇ ಇರುವ ಪಾಪಕ್ಕೆ ದಂಡ ವಿಧಿಸಿದ್ದರು. ಅಲ್ಲಿ ದಾಖಲಾಗಿದ್ದ, ತಿಂಗಳ ಹಿಂದಿನ ದಿನಾಂಕದಲ್ಲಿ ಮತ್ತು ಸಮಯದಲ್ಲಿ, ಅಲ್ಲಿ ನಮೂದಿಸಿದ್ದ ಸ್ಥಳಕ್ಕೆ, ನಾನು ಹೋದ ಸಾಧ್ಯತೆಯೇ ಇರಲಿಲ್ಲ. ಆದರೂ ದಂಡಿಸಿದ್ದರು. ಸಾಮಾನ್ಯವಾಗಿ, ಹೀಗೆ ದಂಡ ಹಾಕುವಾಗ, ಅದರ ಜೊತೆ ನಿಯಮ ಉಲ್ಲಂಘನೆ ಸಂದರ್ಭದ ಫೋಟೋಗಳಿರುತ್ತವೆ. ನನ್ನ ಪುಣ್ಯಕ್ಕೆ, ಆ ಚಿತ್ರಭಾಗ್ಯವೂ ಇರಲಿಲ್ಲ. ಬಿದ್ದ ದಂಡಕ್ಕೆ ಕಾರಣ ತಿಳಿಯದೇ, ನನ್ನ ತಲೆ ಕೊತ-ಕೊತ ಕುದಿಯತೊಡಗಿತು.

ಸಾಕಷ್ಟು ತಲೆಕೆಡಿಸಿಕೊಂಡ ಮೇಲೆ, ತಿಂಗಳ ಹಿಂದೆ, ಲಕ್ಕಣ್ಣ ನನ್ನ ದ್ವಿಚಕ್ರಿಯನ್ನು ಎರವಲು ಪಡೆದದ್ದು ನೆನಪಿಗೆ ಬಂತು. ಎಷ್ಟು ಕೇಳಿದರೂ, ಏನೆಂದೂ ತಿಳಿಸದೆ, ಅರ್ಜಂಟ್ ಕೆಲಸವೆಂದು ಗಾಡಿ ತೆಗೆದುಕೊಂಡು ಹೋಗಿದ್ದ ಲಕ್ಕಣ್ಣ. ದಂಡ ಬಿದ್ದಿದ್ದ ಸಮಯಕ್ಕೆ ಹೊಂದಿಕೆಯಾಗಬಹುದಾದ ಸಮಯವೇ. ಒಂದೊಂದೇ ಚುಕ್ಕಿಗಳು ಕೂಡಿ, ಮನಸ್ಸಿನಲ್ಲಿ ಚಿತ್ರ ಮೂಡತೊಡಗಿತು. ದಂಡದ ವಿಷಯ ಬಂದಾಗ, ಲಕ್ಕಣ್ಣ ಗಲ್ಲಿ-ಬಿಲ್ಲಿಯಾಗುತ್ತಿದ್ದ ಅತಂತ್ರ ಬಿಂದುವೂ, ಚಿತ್ರದೊಳಗೆ ಬಂದಿತು. ಈ ಎಲ್ಲ ಫಜೀತಿಗೆ, ನಮ್ಮ ಲಕ್ಕಮಹಾನುಭಾವರೇ ಕಾರಣವೆಂಬುದು ಸ್ಪಷ್ಟವಾಯಿತು.

ಮಾಡಿದ ತಪ್ಪನ್ನು ಒಮ್ಮೆಗೇ ಒಪ್ಪಿಕೊಂಡರೆ, ಅದು ಲಕ್ಕನ ಕುಲಕ್ಕೇ ಅವಮಾನ. ಲಕ್ಕಣ್ಣ, ದಂಡ ದಾಖಲಾದ ದಿನ ತಾನು ಗಾಡಿಯನ್ನೇ ಮುಟ್ಟಿಲ್ಲವೆಂದು, ಗಾಡಿಯ ಮೇಲೆಯೇ ಆಣೆ ಮಾಡಿದ (ನೆಗೆದು ಬಿದ್ದರೆ, ನನ್ನ ಗಾಡಿ ತಾನೇ!). ಲಕ್ಕಣ್ಣನದ್ದೇ ತಪ್ಪೆಂದು ಸಾಧಿಸಲು, ನನ್ನಲ್ಲಿ ಸಾಕ್ಷಿ-ಚಿತ್ರಗಳೂ ಇರಲಿಲ್ಲ. ಗಣಿತದ ಎಂತೆಂತಹ ದೊಡ್ಡ-ದೊಡ್ಡ ಪ್ರಮೇಯಗಳನ್ನೇ ಸಾಧಿಸಿದ್ದ ನಾನು, ಲಕ್ಕಣ್ಣನ ತಪ್ಪು ಸಾಧಿಸಲಾರದೇ, ತೆಪ್ಪಗಾದೆ.

ಹೇಗಾದರೂ, ಮಾಡದ ತಪ್ಪಿಗೆ ಶಿಕ್ಷೆ ತಪ್ಪಿಸಿಕೊಳ್ಳುವ ಹವಣಿಕೆಯಲ್ಲಿದ್ದ ನನಗೆ, ಭೂಗೋಳ್ ಮ್ಯಾಪ್ ನ ಟೈಮ್ ಲೈನ್ ಸಹಾಯಕ್ಕೆ ಬಂದಿತು. ಈ ಟೈಮ್ ಲೈನ್ ನಲ್ಲಿ, ನಮ್ಮ ಮೊಬೈಲ್ ತಲುಪಿರುವ ಸ್ಥಳಗಳ ದಾಖಲೆ ಇರುತ್ತದೆ. ಲಕ್ಕಣ್ಣನ ಟೈಮ್ ಲೈನ್‌ನ್ನು ಸೀದಾ ಕೇಳಿದರೆ, ಅವನು ಅದನ್ನು ತೋರಿಸುವುದು ಖಂಡಿತಕ್ಕೂ ಅಸಾಧ್ಯ. ಹೀಗಾಗಿ, ನಾನು ಬೇರೆ ದಾರಿಯಲ್ಲಿ ಬಂದೆ. ಲಕ್ಕಣ್ಣನಿಗೆ ನನ್ನ ಟೈಮ್ ಲೈನ್ ತೋರಿಸಿ, ಆ ದಿನದಂದು ನಾನು ಆ ಸ್ಥಳದಲ್ಲಿ ಇಲ್ಲದಿರುವುದನ್ನು ಹೇಳಿದೆ. ಅವನು ಸುಲಭಕ್ಕೆ ಒಪ್ಪವವನೇ? ನೀನು ಜಿಪಿಎಸ್ ಬಂದ್ ಇಟ್ಟು ಅಲ್ಲಿ ಹೋಗಿರಬಹುದು, ಅಥವಾ ಟೈಮ್ ಲೈನ್‌ನ ಇತಿಹಾಸವನ್ನು ಅಳಿಸಿರಬಹುದು ಎಂದೆಲ್ಲ ಪಾಯಿಂಟ್ ಹಾಕಿದ. ಟೈಮ್ ಲೈನ್ ಬಗ್ಗೆ ಲಕ್ಕಣ್ಣನ ಬಾಯಿಂದ ಕೆಲ ಪಾಯಿಂಟ್ಗಳು ಬರಲಿ ಎಂದೇ ಸಾರ್ವಜನಿಕ ಟಿವಿಯ ರಂಗಣ್ಣನಂತೆ ಕಾದಿದ್ದ ನಾನು, ಅವನ ಭೂಗೋಳ್ ಮ್ಯಾಪ್ ನ ಇತಿಹಾಸ ಕೆದಕಿದೆ. ಬ್ಯಾಟರಿ ಉಳಿಸುವ ಉದ್ದೇಶದಿಂದ, ಯಾವಾಗಲೂ ತನ್ನ ಜಿಪಿಎಸ್ ಬಂದ್ ಇಟ್ಟಿರುತ್ತಾನೆ ಲಕ್ಕಣ್ಣ. ಆ

ಧೈರ್ಯವೇ ಮೊದಲ ಕಾರಣವಾಗಿ, ಹಾಗೆಯೇ ನನ್ನ ಒತ್ತಾಯ ಎರಡನೇ ಕಾರಣವಾಗಿ, ಅಂತೂ ತನ್ನ  ಜಿಪಿಎಸ್ ಇತಿಹಾಸ ಕೆದಕಲು ಲಕ್ಕಣ್ಣ ತಯಾರಾದ. ಕದ್ದು ಮುಚ್ಚಿ ಅಂತೂ ಇಂತೂ ತನ್ನ ಟೈಮ್ ಲೈನ್ ತೆಗೆದನವ. ನೆಟ್ವರ್ಕ್‌ಗೆ ಕಾಯುತ್ತಿದ್ದ ಮೊಬೈಲ್ ನಂತಿದ್ದ ನಾನು, ಗಪ್ಪನೆ ಅವನ ಕೈಯಿಂದ ಅವನ ಮೊಬೈಲ್ ಎಗರಿಸಿದೆ. ಕಳ್ಳ, ಬೈಕ್ ಹ್ಯಾನ್ಡೆಡ್ ಆಗಿ ಸಿಕ್ಕಿಹಾಕಿಕೊಂಡಿದ್ದ. ದಂಡಿಸಿದ ದೇಶ–ಕಾಲಕ್ಕೆ ಸರಿಯಾಗಿ, ಲಕ್ಕಣ್ಣನ ಟೈಮ್ ಲೈನ್ ಹೊಂದಿಕೆಯಾಗಿತ್ತು.  ಅಲ್ಲಿಗೆ ಆ ದಿನ ನನ್ನ ಬೈಕ್ ನಲ್ಲಿ ಹೋಗಿದ್ದುಲಕ್ಕಣ್ಣನೆಂಬುದು ಜಗಳಾತೀತವಾಗಿ ಸಾಬೀತಾಗಿತ್ತು. ಅಂತೂ, 750/– ಹೊಂದಿಸುವ ಕಷ್ಟ ತಪ್ಪಿದ್ದಕ್ಕೆ ನಿರಮ್ಮಳನಾದೆ.

ಹೀಗೆಲ್ಲಾ ತನ್ನ ಸುತ್ತಲೂ ಇರುವವರನ್ನು ಸುಲಭವಾಗಿ ನಿರಮ್ಮಳಿಸಲು ಬಿಡಲು ಅವನು ಲಕ್ಕಣ್ಣ! ನಿರ್ಜಲೀಕರಿಸದೇ ಸಾಧರಣಕ್ಕೆ ಯಾರನ್ನೂ ಬಿಟ್ಟವನಲ್ಲ. ಅವನು ಮತ್ತು ನನ್ನ ಗಾಡಿ, ಒಂದೇ ಸಂದರ್ಭದಲ್ಲಿ, ಒಂದೇ ಜಾಗದಲ್ಲಿ ಇರಬಹುದಾದ ಕಾಕತಾಳೀಯತೆಯ ಬಗ್ಗೆ  ಪ್ರಶ್ನೆ ಎತ್ತಿದ. ತಾನೇ, ನನ್ನ ಗಾಡಿಯ ಮೇಲೆ ಕುಳಿತು, ಹೆಲ್ಮೆಟ್ ಇಲ್ಲದೇ ಚಲಾಯಿಸಿದ್ದಕ್ಕೆ ಇದು ಸೂಕ್ತ ಸಾಕ್ಷಿಯಲ್ಲ ಎಂಬ ರೀಸನೆಬಲ್ ಡೌಟ್ ಅನ್ನು ಮುಂದಿಟ್ಟ.ಸಿ.ಎಸ್.ಪಿ.ಯವರನ್ನೇ ತನ್ನ ದ್ರೋಣಾಚಾರ್ಯರನ್ನಾಗಿ ಸ್ವೀಕರಿಸಿ, ಕರ್ನಾಟಕ ರಾಜ್ಯ 'ಮುಕ್ತ ಮುಕ್ತ' ವಿಶ್ವವಿದ್ಯಾಲಯದಿಂದ, ಕಾನೂನು ಪದವಿ ಪಡೆದಿದ್ದ ಲಕ್ಕಣ್ಣನ ಪಾಯಿಂಟ್ ಗೆ ನಾನು ಸೋಲಲೇಬೇಕಾಯಿತು. ಸರಿಯಾದ ಸಾಕ್ಷಿಗಳಿಲ್ಲದೇ, ಲಕ್ಕಣ್ಣನ ತಪ್ಪೊಪ್ಪಿಗೆ ಪಡೆಯುವುದು ಸಾಧ್ಯವಿಲ್ಲವೆಂದು ನನಗೆ  ಖಾತ್ರಿಯಾಯಿತು.

ಪರೋಪಕಾರಕ್ಕಾಗಿಯೇ ನನ್ನ ಗಾಡಿಯ ಶರೀರವೆಂದು ನಂಬಿದ್ದ  ತತ್ವವೇ ನನಗೆ ಮುಳುವಾಗಿತ್ತು. ಮಾಡದ ತಪ್ಪಿಗೆ ಶಿಕ್ಷೆ ತಪ್ಪಿಸಿಕೊಳ್ಳಲು, ನಾನೇ ಸಾಕ್ಷ್ಯ ಸಂಗ್ರಹಕ್ಕೆ ಮುಂದಾಗಬೇಕಾಯಿತು. ಮೊದಲ ಪ್ರಯತ್ನವಾಗಿ, ಸಂಚಾರ ನಿಯಂತ್ರಣ ಪೋಲಿಸರಿಗೆ ಈ–ಮೈಲ್ ಗಳನ್ನು ಬರೆದೆ. ಎರಡು–ಮೂರು ದಿನಗಳು ಕಳೆದರೂ ಉತ್ತರ ಬರಲಿಲ್ಲ. ಡಿಸ್ಕೌಂಟ್ ಸೇಲ್, ಮುಗಿಯುವುದಕ್ಕೆ ಕೆಲವೇ ದಿನಗಳು ಬಾಕಿ ಉಳಿದಿದ್ದವು. ಲಕ್ಕಣ್ಣ ಮಾತ್ರ ಎಂದಿನಂತೆ, ಇದ್ಯಾವುದೂ ತನಗೆ ಸಂಬಂಧಪಟ್ಟಿದ್ದೇ ಅಲ್ಲ ಎಂದು ತಿರುಗಿಕೊಂಡಿದ್ದ. ಮುಂದಿನ ಪ್ರಯತ್ನವಾಗಿ, ನಾನು ಸಂಚಾರ ನಿಯಂತ್ರಣ ಪೋಲೀಸ್ ಠಾಣೆಗೇ ಭೇಟಿ ನೀಡುವ ನಿರ್ಧಾರಕ್ಕೆ ಬಂದೆ. ಜೀವನದಲ್ಲಿ ಪೋಲೀಸ್ ಠಾಣೆಯ ಮೆಟ್ಟಿಲನ್ನೇ ಹತ್ತಿರದಿದ್ದ ನನಗೆ, ಲಕ್ಕಣ್ಣನ ಪಂಚಮಿ ವಿಭಕ್ತಿಯಿಂದ ಆ ಭಾಗ್ಯವೂ ದೊರೆಯಿತು. ಅಲ್ಲಿಯೂ ನನ್ನ ಸಮಸ್ಯೆಗೆ ಪರಿಹಾರ ಸಿಗಲಿಲ್ಲ. ಅವರು ಇನ್ನಾವುದೋ ಮುಖ್ಯ ನಿಯಂತ್ರಣ ಕಛೇರಿಗೆ ಹೋಗುವಂತೆ ಸಲಹೆ ಕೊಟ್ಟರು. ಅಲ್ಲಿಗೆ ಹೋಗಿ ಬರಲು, ನನ್ನ ಒಂದು ದಿನದ ಸಾಂದರ್ಭಿಕ ರಜೆಯನ್ನು ಬಲಿ ಹಾಕಬೇಕಾಗಿತ್ತು. ಇದೇ ಯೋಚನೆಯಲ್ಲಿ, ರಜಾ ಅರ್ಜಿ ಬರೆಯುತ್ತಿರಬೇಕಾದರೆ, ದೇವರಿಗೆ ನನ್ನ ಸಾಂದರ್ಭಿಕ ರಜೆಯ ಮೇಲೆ ಪ್ರೀತಿಯುಂಟಾಯಿತೆಂದು ತೋರುತ್ತದೆ. (ಮುಂದೆ, ಇದೇ ಲಕ್ಕಣ್ಣ ನನ್ನ ಕಾಲು ಮುರಿವಾಗ, ಈ ರಜೆಗಳು ನನಗೆ ಬೇಕಾಗುತ್ತವೆಂದು ಆ ಭಗವಂತನಿಗೆ ತಿಳಿದಿತ್ತಲ್ಲ!) ರಜಾ ಅರ್ಜಿ ಕೊಡುವ ಮೊದಲು, 'ಕರ್ನಾಟಕ ಒಂದೇ' ಜಾಲತಾಣದಲ್ಲಿ ಈಜಾಡಲು ನನ್ನ ಹಿರಿಯ ಸಹೋದ್ಯೋಗಿಗಳೊಬ್ಬರು ನನ್ನನ್ನು ಸಲಹಿದರು. ಯಾವ ಮಾಹಿತಿಗಾಗಿ ಎಲ್ಲಿ ತಡಕಾಬೇಂದು ಬಲ್ಲ, ಸಕಲಕಲಾವಲ್ಲಭರವರು. ಅವರು ಕೊಟ್ಟ ಸಲಹೆ, ನನ್ನ ರಜೆಯೊಂದನ್ನು ಉಳಿಸಿತು. ಕರ್ನಾಟಕ ಒಂದೇ ಜಾಲತಾಣದಲ್ಲಿ, ನಾನು ಹುಡುಕುತ್ತಿದ್ದ

ಸಾಕ್ಷಿ–ಚಿತ್ರಗಳಿದ್ದವು. ಲಕ್ಕಣ್ಣನನ್ನು ಬಚಾವು ಮಾಡಲು, ಇನ್ನು ಸ್ವತಃ ಅವನ ಮಾನಸ ಗುರುಗಳಾದ ಸಿ.ಎಸ್.ಪಿ.ಯವರಿಗೂ ಸಾಧ್ಯವಿರಲಿಲ್ಲ.

ಈ ಚಿತ್ರಗಳು, ಲಕ್ಕಣ್ಣನ ತಲೆಯ ಮೇಲೆ ಬಾಂಬ್ ನಂತೆ ಎರಗಿದ್ದವು. ಕೇವಲ ಸಂಚಾರಿ ನಿಯಮ ಉಲ್ಲಂಘನೆ ಮಾತ್ರವಲ್ಲ, ಲಕ್ಕಣ್ಣ ಮುಚ್ಚಿಟ್ಟಿದ್ದ ಇನ್ನೊಂದು ಗುಟ್ಟನ್ನೂ ಈ ಚಿತ್ರಗಳು ರಟ್ಟು ಮಾಡಿದ್ದವು. ಆ ಚಿತ್ರಗಳಲ್ಲಿ, ಲಕ್ಕಣ್ಣನ ಹಿಂದಿನ ಸೀಟಿನಲ್ಲಿದ್ದದ್ದು, ಒಂದು ಹುಡುಗಿ. ತುರ್ತು ಕೆಲಸವೆಂದು, ಕಾರಣವನ್ನೂ ಹೇಳದೇ ಲಕ್ಕಣ್ಣ ಗಾಡಿ ತೆಗೆದುಕೊಂಡು ಹೋಗಿದ್ದು, ಹುಡುಗಿಯ ಜೊತೆ ಸುತ್ತಾಡಲು! ತನ್ನ ಈ ಗುಟ್ಟು ಬಯಲಾಗುವ ಭಯದಲ್ಲಿ, ಡಿಸ್ಕೌಂಟ್ ಸೇಲ್ ವಿಷಯ ಬಂದಾಗಲೆಲ್ಲ ಲಕ್ಕಣ್ಣ ಬೆಚ್ಚುತ್ತಿದ್ದ. ಸುಮ್ಮನೆ ದಂಡ ಕಟ್ಟಿದ್ದರೆ, ಈ ಗುಟ್ಟನ್ನಾದರೂ ಲಕ್ಕಣ್ಣ ಬಚಾಯಿಸಿಕೊಳ್ಳಬಹುದಾಗಿತ್ತು. ಆದರೆ, ಈಗ ಲಕ್ಕಣ್ಣನ ಗುಟ್ಟು, ಪೂರಾ ವಿಭಾಗದೆದುರು ಬಟಾಬಯಲಾಗಿತ್ತು. ವಿಷಯವಿಭಾಗದಲ್ಲಿ ಗೊತ್ತಾದರೆ, ಟ್ರೀಟ್ ಕೊಡಬೇಕಾಗುತ್ತದೆಂಬ ಕಾರಣಕ್ಕೆ, ಲಕ್ಕಣ್ಣ ತನಗೆ ಮದುವೆ ನಿಕ್ಕಿಯಾಗಿದ್ದ ವಿಷಯವನ್ನೇ ಮುಚ್ಚಿಟ್ಟಿದ್ದ! ಯಾರಿಗೂ ತಿಳಿಸದೇ, ಗುಟ್ಟಾಗಿ ಆ ಹುಡುಗಿಯ ಜೊತೆ, ಬೆಂಗಳೂರು ಸುತ್ತಿದ್ದನವ. ಈ ಸಂಚಾರಿ ನಿಯಂತ್ರಣದ ದಂಡ, ಲಕ್ಕಣ್ಣನ ಎಲ್ಲ ಗುಟ್ಟನ್ನು ಹೊರಗೆಳೆದಿತ್ತು!

ಮೊದಲೇ ಹೇಳಿದಂತೆ, ಮೂರು ಚಲನ್‌ಗಳು ನನ್ನ ಗಾಡಿಯ ಮೇಲಿದ್ದವು. ಎಲ್ಲ ಮಾಹಿತಿಯನ್ನು ಚಿತ್ರ ಸಮೇತವಾಗಿ ಲಕ್ಕಣ್ಣನಿಗೆ 'ಏನಪ್ಪಾ ಮತ್ತೆ' ಯಲ್ಲಿ ಕಳಿಸಿದೆ. ಹಾಗೆಯೇ ದಂಡ ತುಂಬುವ ಕೊಂಡಿಯನ್ನೂ ಸಹ. "ನಾ ಎಲ್ಲಾ ತುಂಬ್ತೇನ್ ಬಿಡ್ರೀ" ಎಂದು ಲಕ್ಕಣ್ಣ ನಿರ್ಗಮಿಸಿದ. ಲಕ್ಕಣ್ಣ ಇಷ್ಟು ಸುಲಭದಲ್ಲಿ ಒಪ್ಪಿದ ಖುಷಿಗೆ, ನಾನೇ ವಿಭಾಗದ ಎಲ್ಲರಿಗೂ ಚಾ ಕುಡಿಸಿದ್ದೂ ಆಯಿತು.

ಮರುದಿನ ವಿಭಾಗಕ್ಕೆ ಬಂದ ಲಕ್ಕಣ್ಣ, ಬೆಳ್ಳಂಬೆಳಗ್ಗೆ ತನ್ನ ಜವಾರಿ ಭಾಷೆಯಲ್ಲಿ ಯಾರದ್ದೋ ಕುಲವನ್ನೇ ಜಾಲಾಡುತ್ತಿದ್ದ. ಲಕ್ಕಣ್ಣನ ಬಾಯಿಗೆ ಸಿಕ್ಕವರು, ಆ ಮೂರು ಚಲನ್ ಬೀಳಲು ಕಾರಣರಾದ ಮಹನೀಯರು. ನಾನು ಕಳಿಸಿದ್ದ ವಿವರಗಳನ್ನು ಪರಿಶೀಲಿಸಿ, ಅದರಲ್ಲಿ ಎಲ್ಲಾದರೂ ಸಣ್ಣಅನುಮಾನದ ನೊಣ ಸತ್ತ ವಾಸನೆ ಹುಡುಕುತ್ತಿದ್ದ ಲಕ್ಕಣ್ಣನಿಗೆ, ಆ ಚಲನ್ ಗಳಲ್ಲಿ ದೊಡ್ಡ ಹಂದಿಯೇ ಸತ್ತು ಬಿದ್ದಿದ್ದು ಗೊತ್ತಾಗಿತ್ತು. ಹಾಗೆಯೇ, ಅದಕ್ಕೆ ಕಾರಣೀ'ಭೂತ'ರಾದವರ ಬಗ್ಗೆಯೂ ಗೊತ್ತಾಗಿತ್ತು. ಆದದ್ದಿಷ್ಟೇ. ಲಕ್ಕಣ್ಣ, ತನ್ನ ಹುಡುಗಿಯ ಜೊತೆ ಜುಮ್ಮಾಗಿ ಹೋಗುತ್ತಿದ್ದಾಗ, ಯಾವುದೋ ಅತೃಪ್ತ ಆತ್ಮ ಒಂದು (ಅದು ಹುಡುಗಿ ಸಿಗದ ಅಥವಾ ಹುಡುಗಿ ಕೈಕೊಟ್ಟ ಪ್ರಾಣಿ ಇರಬಹುದೆಂಬ ಊಹೆ ಇದೆ) ಹಿಂದಿನಿಂದ, ಲಕ್ಕಮ್ಮ ಸಮೇತವಾಗಿ ಲಕ್ಕಣ್ಣನ ಫೋಟೋ ಕ್ಲಿಕ್ಕಿಸಿತ್ತು. ಅದನ್ನು 'ಪಬ್ಲಿಕ್ ಐ ಕಂಪ್ಲೆಂಟ್' ಆಗಿ ಸಂಚಾರ ಪೋಲೀಸರು ನೀಡಿದ್ದ ಜಾಲತಾಣದಲ್ಲಿ ಅದು ದಾಖಲಿಸಿತ್ತು. ಅತೃಪ್ತ ಆತ್ಮ, ಜಾಲತಾಣಕ್ಕೇರಿಸಿದ ಚಿತ್ರದಲ್ಲಿ, ಲಕ್ಕಣ್ಣನ ಜೊತೆಯಾಗಲಿದ್ದ ಚಿ. ಸೌ. ಕಂ.ಕಾಂ.ಕೀಂ... .ಕಃ ಲಕ್ಕಮ್ಮ, ಬೈಕಿನ ಹಿಂಬದಿ ಸವಾರಳಾಗಿ ಹೆಲ್ಮೆಟ್ ಇಲ್ಲದೇ ಕುಳಿತಿದ್ದಳು. ಈ ಚಿತ್ರದ ನೈಜತೆಯನ್ನು ಪರಿಶೀಲಿಸಲು, ಪೋಲಿಸರು 'ಸಾರ್ವಜನಿಕರ ಕಣ್ಣಿನ ದೂರು' ದಾಖಲಾದ ಸ್ಥಳದ, ಹಿಂದಿನ ಹಾಗೂ ಮುಂದಿನ ಸಿಗ್ನಲ್ ಗಳಲ್ಲಿದ್ದ ಕ್ಯಾಮರಾಗಳಿಂದ ಇದೇ ಗಾಡಿಯ ಚಿತ್ರಗಳನ್ನು ನೋಡಿದ್ದರು. ಅಲ್ಲೂ, ಲಕ್ಕಮ್ಮನ ಹೆಲ್ಮೆಟ್ ರಹಿತ ಸವಾರಿ ಖಾತ್ರಿಯಾಗಿತ್ತು. ಈ ತಪ್ಪಿಗಾಗಿ, ಪಬ್ಲಿಕ್ ಐ ಕಂಪ್ಲೈಟ್ ಆಧಾರದ ಮೇಲೆ, ಚಲನ್ ಹರಿದಿರುವುದು ನ್ಯಾಯವಾಗಿಯೇ ಇತ್ತು.

ಇಷ್ಟೇ ಆಗಿದ್ದರೆ, ಲಕ್ಕಣ್ಣ ಸುಮ್ಮನಿದ್ದರೂ ಇರುತ್ತಿದ್ದನೇನೋ. ಆದರೆ, ಅದೇನು ಸಂಚಾರಿ ಪೋಲಿಸರ ತಪ್ಪೋ, ಅಥವಾ ಇಂತಹ ವಿಷಯಗಳನ್ನು ನಿರ್ವಹಿಸುತ್ತಿದ್ದ ತಂತ್ರಾಂಶದ ತಪ್ಪೋ ಗೊತ್ತಿಲ್ಲ. ಒಂದರ ಜೊತೆಗೆ, ಇನ್ನೆರಡು ಚಲನ್ ಗಳು ಉಚಿತವಾಗಿ ಹರಿಯಲ್ಪಟ್ಟಿದ್ದವು. ಈ ಎರಡು ಚಲನ್ ಗಳಿಗೆ ಕೊಟ್ಟ ಸಾಕ್ಷಿ, ಹಿಂದೆ ಹೇಳಿದ ಸಿಗ್ನಲ್ ಗಳಲ್ಲಿ ತೆಗೆಯಲ್ಪಟ್ಟ ಚಿತ್ರಗಳು. ದಂಡಕ್ಕೆ ಕಾರಣ, ಹೆಲ್ಮೆಟ್ ಧರಿಸದ ಲಕ್ಕಣ್ಣನ ಸವಾರಿ. ವಾಸ್ತವದಲ್ಲಿ, ಲಕ್ಕಣ್ಣ ಹೆಲ್ಮೆಟ್ ಧರಿಸಿಯೇ ಕುಳಿತಿದ್ದದ್ದು ಎಲ್ಲ ಮೂರು ಚಿತ್ರಗಳಲ್ಲಿ ಸ್ಪಷ್ಟವಾಗಿ ದಾಖಲಾಗಿತ್ತು. ಆದಾಗಿಯೂ, ಮಾಡದ ತಪ್ಪಿಗೆ ಒಮ್ಮೆ ಬಿಟ್ಟು ಎರಡು ಬಾರಿ ದಂಡಿಸಲಾಗಿತ್ತು. ಮಾಡದ ತಪ್ಪಿಗೆ ದಂಡಿಸಿದ್ದಕ್ಕೆ ಹಾಗೂ ಯಾರೋ 'ಅಕ್ಷಜ್ಞ'ಗಳು ತನ್ನಂತಹ ತನ್ನ ಮೇಲೆ ದೂರಿತ್ತದ್ದಕ್ಕೆ, ಲಕ್ಕಣ್ಣ ಅಕ್ಷರಶಃ ಕೆಂಡಾಮಂಡಲನಾಗಿದ್ದ.

ಎಲ್ಲ ಸರಿಯಾಗಿದ್ದರೂ, ದಂಡ ತಪ್ಪಿಸಿಕೊಳ್ಳಲು ಏನಾದರೂ ದಾರಿ ಹುಡುಕುವ ಲಕ್ಕಣ್ಣ, ಇನ್ನು ಇಷ್ಟೆಲ್ಲಾ ಯಡವಟ್ಟುಗಳಿರುವಾಗ ದಂಡ ತುಂಬುವವನೇ? ಲಕ್ಕಣ್ಣ ಹಾಕಿದ ಹೆಲ್ಮೆಟ್, ಅವನ ತಲೆಯನ್ನು ಸಂಪೂರ್ಣವಾಗಿ ಆವರಿಸಿಲ್ಲದಿರುವುದರಿಂದ ದಂಡ ಹಾಕಿರಬಹುದೆಂದು ನಾನು ವಾದಿಸಿದೆ. ಹಾಫ್-ಲಕ್ಕಣ್ಣ, ಐ ಮೀನ್ ಹಾಫ್-ಹೆಲ್ಮೆಟ್ ಲಕ್ಕಣ್ಣ, ಅದನ್ನೊಪ್ಪಲು ತಯಾರಿರಲಿಲ್ಲ. ಸಾಲದ್ದಕ್ಕೆ,ಒಂದೇ ತಪ್ಪಿಗೆಹತ್ತೇ ನಿಮಿಷದ ಅಂತರದಲ್ಲಿ ಎರಡು ಬಾರಿ ದಂಡ ಬಿದ್ದಿತ್ತು. ಹೀಗಾಗಿ, ಇದು ಪೋಲಿಸರ ಕಡೆಯಿಂದಾದ ತಪ್ಪು, ಯಾವ ದಂಡವನ್ನೂ ತೆರಬೇಕಾಗಿಲ್ಲ ಎಂದು ಪಟ್ಟು ಹಿಡಿದು ಕುಳಿತ.

ಲಕ್ಕಣ್ಣ ದಂಡ ತುಂಬುತ್ತಾನೆಂದು ಕುಳಿತರೆ, ಡಿಸ್ಕೌಂಟ್ ಆಫರ್ ಮುಗಿದು, 750ರ ಬದಲು 1500 ತೆರಬೇಕಾದ ಪ್ರಸಂಗ ನನಗೊದಗುವುದು ಖಾತ್ರಿಯಾಗಿತ್ತು. ಹೀಗಾಗಿ ಲಕ್ಕಣ್ಣನಿಗೆ ಗಾಡಿ ಕೊಟ್ಟ ಪಾಪವನ್ನು ದಂಡ ತುಂಬಿ ನಾನೇ ಪರಿಹಾರ ಮಾಡಿಕೊಂಡೆ. ■

**ಅಪರಂಜಿ 2023 ವಿಶೇಷಾಂಕ**

– ನಮ್ಮ ಲೇಖಕರಿಗೆ ಮನವಿ

ಅಕ್ಟೋಬರ್ 2023 ಅಪರಂಜಿ ವಿಶೇಷಾಂಕ್ಕಾಗಿ ತಿಳಿಹಾಸ್ಯ/ಪ್ರಬಂಧ ಪ್ರಾಕಾರಗಳ ಲೇಖನಗಳನ್ನು ಕಳಿಸಿ. ನುಡಿ 01 ತತ್ರಾಂಶದಲ್ಲಿ ಟೈಪ್ ಮಾಡಿ ಮೈಲ್‌ಗೆ ಅಟ್ಯಾಚ್ ಮಾಡಿ ಕಳಿಸಿದ ಲೇಖನಗಳನ್ನು ಮಾತ್ರ ಪರಿಗಣಿಸಲಾಗುವುದು. ದಯಮಾಡಿ ಗಮನಿಸಿ – ಹಸ್ತಪ್ರತಿಗಳನ್ನು ಸ್ವೀಕರಿಸುವುದನ್ನು ನಿಲ್ಲಿಸಲಾಗಿದೆ. ನಿಮ್ಮ ಲೇಖನಗಳು ನಮಗೆ ಅಪರಂಜಿಯಲ್ಲಿರುವ ಮಿಂಚಂಚೆಗೆ ಆಗಸ್ಟ್ 30ರೊಳಗೆ ತಲುಪಬೇಕು.

# ನಮ್ಮ ರಾಮಿ ಮದ್ವೆ

ಇ.ಆರ್. ರಾಮಚಂದ್ರನ್

ನಮ್ಮ ಸೋದರ ಮಾವನ ಮಗ ರಾಮಿಯ ಮದುವೆ ಚಂದ್ರಲೋಕದಲ್ಲಿ (ಮೂನ್) ಆಯ್ತು. ರಾಮಿ ಸ್ವಲ್ಪ ಓಲ್ಡ್ ಫ್ಯಾಷನ್ಡ್. ಅವ್ನಿಗೆ ಯಾವುದೋ ಕಾಲದಲ್ಲಿ ಮಾಡ್ತಿದ್ದ ಹಾಗೆ ಮುಂಜಿ, ಮದುವೆ ಎಲ್ಲಾ ಬೇಕಿತ್ತು. ನಮ್ಮ ಹಳೇ ಪುರಾಣದಲ್ಲಿ ಓದ್ತಿದ್ವಿ. ಮದುವೆ ಅಂದ್ರೆ ಚಪ್ಪರ, ವರಪೂಜೆ, ನಾಗೋಲಿ, ಧಾರೆ, ಆರತಿ ಅಕ್ಷತೆ, ಊಟ, ಎಟ್ಸೆಟೆರ..

ಹುಡುಗಿ ಮಂಗಳ ( ಮಾರ್ಸ್) ಗ್ರಹದವಳಂತೆ. ರಾಮಿ ಯಾವುದೋ ಸೆಮಿನಾರ್ಗೆ ಮೂನ್ಗೆ ಹೋಗಿದ್ದಾಗ, ಹುಡುಗಿ ಮಾರ್ಸ್ನಿಂದ ಅಲ್ಲಿಗೆ ಬಂದಿದ್ಳಂತೆ. ಇಬ್ಬರಿಗೂ ಲವ್– ಎಟ್ –ಫಸ್ಟ್– ಸೈಟ್ ಆಯ್ತು ಅಂದ ರಾಮಿ. ಅಲ್ಲಿ ಅವರಿಬ್ಬರು ಕೂತ್ಕೊಂಡು ಸುತ್ತುತಾ ಇರೋ ಭೂಮಿ ನೋಡ್ತಾ ಮದುವೆ ಮಾಡ್ಕೋಳೋಣಾಂತ ಡಿಸೈಡ್ ಮಾಡಿದ್ವಿ ಅಂದ.

ಮದುವೆ ಮೂನ್ ನಲ್ಲೇ ಅಂತ  ಡಿಸೈಡ್ ಮಾಡಿದ್ಮೇಲೆ ಟೈಮ್ ಬಹಳ ಕಡಿಮೆ ಇತ್ತು.

**

ನಾವಿಲ್ಲಿಂದ ನೂರು ಜನ ಮದುವೆ ಪಾರ್ಟಿ ಹೊರಟ್ವಿ.

ನಮ್ಮ ಸ್ಪೇಸ್ ಷಿಪ್ನಲ್ಲಿ ಮದುವೆ ಪಾರ್ಟಿ ಮನೆಯವರು, ಸೈಡ್ ಕಾರ್ ಅಲ್ಲಿ ಅಡುಗೆಯವರು, ಹಿಂದುಗಡೆ ವಾಲಗದವರು ಕೂತಿದ್ದರು. ಜೊತೆಗೆ ಡೆಕೊರೇಟರ್ಸ್, ಮದುವೆ ಮಾಡ್ಸೋ ಪುರೋಹಿತರು ಎಲ್ಲಾ ಸೇರಿ 100 ಜನ. ಹಿಂದೆ ಯಾವಾಗ್ಲೋ ಕೋವಿಡ್–19 ಅನ್ನುವ ವೈರಸ್ ಬಂದಾಗ ಮದುವೆಗೆ ನೂರೇ ಜನ ಅಂತ ಲಿಮಿಟ್ ಮಾಡಿದ್ರಂತೆ.

ರಾಕೆಟ್ ಫೈರ್ ಆದ್ಮೇಲೆ  ನಮ್ಮ ಸ್ಪೇಸ್ ಷಿಪ್ ಹೊರಡ್ತು. ಮೂನ್ಗೆ ಜರ್ನಿ ಟೈಮ್ 6 ಘಂಟೆ ಆಗುತ್ತೆ. ಎಲ್ಲಾರ್ರೂ ಸೀಟಲ್ಲಿ ಬೆಲ್ಟ್ನಲ್ಲಿ ಟೈಟಾಗಿ ಕಟ್ಟಿದ್ರು. ವಾಲಗ, ತಮಟೆ ಎಲ್ಲಾ

**2**

ಪಾತ್ರೆಗಳು ಮತ್ತು  ಗ್ರೊಸರೀಸ್‌ನ ಲೋಡ್  ಮಾಡಿ ಚೆನ್ನಾಗಿ ಕಟ್ಟಿಟ್ಟಿದ್ರು. ಆರ್ಬಿಟ್ನಲ್ಲಿದ್ದಾಗ ಕೈ ಕಾಲು ಬಿಡಿಸಿ ಸ್ವಲ್ಪ ಹಾರಾಡಿ ಮತ್ತೆ ಸೀಟಿಗೆ ಬಂದು ಕೂತ್ವಿ.

ಅಲ್ಲಿ ರಾಕೆಟ್ ರೆಟ್ರೋಲಿ ಫೈರ್ ಮಾಡಿದ ಮೇಲೆ ನಿಧಾನವಾಗಿ ಮೂನ್ ನಲ್ಲಿ ಇಳಿಯಿತು. ರಾಮಿ ಕಳಿಸಿದ ಡೀಟೇಲ್ಸ್ ಪ್ರಕಾರ ಹೆಣ್ಣಿನ ಕಡೆಯವರು ನಮ್ಮನ್ನ ರಿಸೀವ್ ಮಾಡಿದ್ರು. ಶಾಸ್ತ್ರದ ಪ್ರಕಾರ ಹುಡ್ಗಿ ಬಂದಿರ್ಲಿಲ್ಲ!

ವರಪೂಜೆಗೆ ಇನ್ಫ್ಲೇಟೆಡ್ ಬಲೂನ್ ತಂದಿದ್ರು. ರಾಮಿ ಅವರು ಕೊಟ್ಟ ಗ್ಯಾಬರ್ಡೀನ್ ಸೂಟ್ ಮೇಲೆ ನೈಲಾನ್ ಆಲ್ – ಕ್ಲೈಮೇಟ್ ಓವರ್ ಕೋಟ್ ಹಾಕಿದ್ದ.  ಇದು ವಧುವಿನ ತಂದೆಯ ಗಿಫ್ಟು.  ಅವರು ಅದರಲ್ಲಿ ಬಿಸಿನೆಸ್ ಮಾಡಿ ಎಲ್ಲಾ ಗ್ರಹಗಳಿಗೂ ಕಳಿಸ್ತಾರಂತೆ.  ದೊಡ್ಡ ಕುಳ. ಭೂಮಿಗೆ ಯಾರಾದ್ರೂ ಏಜೆಂಟು

ಸಿಕ್ತಾರಾ ಅಂತ ಹುಡುಕ್ತಿದಾರೆ.

ಮೂನ್ ನಲ್ಲಿ ಹವಾ ನಿಯಂತ್ರಣ ಚೆನ್ನಾಗಿ ಮಾಡಿಕೊಂಡಿದ್ದಾರೆ. ಮನುಷ್ಯರು ಬಹಳ ಜನ ಎಲ್ಲಾ ಗ್ರಹದಲ್ಲಿ ಸೆಟಲ್ ಆಗಿದ್ದಾರೆ, ಆದ್ರೆ ಚಂದ್ರಲೋಕಕ್ಕೆ ಜಾಸ್ತಿ ಜನ ಹೋಗಿದಾರೆ. ಅಲ್ಲಿ ಬಹಳ ಕಾಲೋನಿಗಳು ಬಂದಿದೆ. ರಾಘವೇಂದ್ರ ಕಾಲೋನಿ, ನರಸಿಂಹರಾಜ ಕಾಲೋನಿ ಹೀಗೆ ಬಹಳ ಬಂದಿದೆ. ಅಲ್ಲಿ ಒಂದು ಗಾಂಧಿ ಕಾಲೋನಿನೂ ಇದೆ. ರಾಮಿ ಮದುವೆ ಹೊಚ್ಚ ಹೊಸಾ ಮೋದಿ ಕಾಲೋನಿಲಿ ನಡೆಯಿತು.

ಮದುವೆಗೆ ಮುಂಚೆ ಬೆಳಿಗ್ಗೆಯಿಂದಲೇ ಸ್ವಲ್ಪ ಗಲಾಟೆ ಶುರುವಾಯತು.

ರಾಮಿ ಚಪ್ಪಲಿ ಹಾಕ್ಕೊಂಡು ಛತ್ರಿ ಹಿಡಿದು ಕಾಶಿಯಾತ್ರೆಗೆ ಹೊರಟ.

'ಇದೇನು? ಮದುವೆಗೆ ಮುಂಚೆ ಈ ತರಹ ಡ್ರೆಸ್ ಮಾಡ್ಕೊಂಡು ಹೊರಟೀದಾರೆ?' ಅಂದ್ರು ಮಂಗಳದ ಪುರೋಹಿತರು.

'ಇದು ನಮ್ಮ ಕಡೆ ಕಾಶೀ ಯಾತ್ರೆ ಅಂತ ಕರೀತೀವಿ. ಹುಡುಗ ಓದೋದಕ್ಕೆ ಕಾಶಿಗೆ ಹೋಗುವಾಗ, ಹುಡುಗಿಯ ಅಪ್ಪ ಅವನ್ನ ತಡೆದು ನಿಲ್ಸಿ ನನ್ನ ಮಗಳನ್ನ ನಿನಗೆ ಕೊಡ್ತೀನಿ ಅಂತ ಹೇಳಿ ವಾಪಸ್ಸು ಕರ್ಕೊಂಡು ಬರ್ತಾನೆ'. ನಮ್ಮ ಶಂಕರ ಮಠದ ಪುರೋಹಿತರು ವಿವರಿಸಿದರು.

**3**

'ಕಾಶಿ ಅಂದ್ರೆ ವಾರಣಾಸಿನಾ? ಅದನ್ನ ಬಹಳ ಚೆನ್ನಾಗಿ ಮಾಡೀದಾರಂತಲ್ಲಾ? ಬೇಕಾದ್ರೆ ನಮ್ ಟೆಕ್ನಾಲಜಿಲಿ ಹುಡುಗ ವಾರಣಾಸೀನ ಮುಟ್ಟಿ ಬರೋ ಹಾಗೆ ಮಾಡ್ಬಹುದು. ನಾವೂ ವಾರಣಾಸಿ ಇವತ್ತು ಹೇಗಿದೆ ನೋಡ್ಬಹುದು. ಐದು ನಿಮಿಷ ಆಗುತ್ತೆ ಅಷ್ಟೆ' ಅಂದ್ರು ಹುಡುಗಿ ಸೋದರ ಮಾವ.

'ಈಗ ಬೇಡ. ಮುಹೂರ್ತಕ್ಕೆ ಹೊತ್ತಾಯ್ತು. ಮಾಂಗಲ್ಯ ಧಾರಣೆ ಮಾಡಿಬಿಡೋಣ'.

ಆಗ ಚಂದ್ರ ಗ್ರಹದ ಪುರೋಹಿತರು ಗುಡುಗಿದರು.

'ಇಲ್ಲಿ ಮದುವೆ ಆಗೋದ್ರಿಂದ ಮಹೂರ್ತ ನಾವು ಫಿಕ್ಸ್ ಮಾಡೀದೀವಿ. ನಿಮ್ಮ ಭೂಮೀದು ಇಲ್ಲಿ ಅಪ್ಲೈ ಆಗಲ್ಲ'.

ಪ್ರತಿ ಸಿಚುಏಷನ್ನೂ ಐಪಿಎಲ್ ಮ್ಯಾಚ್ ತರಾ ಒಂದು ಥರ್ಡ ಅಂಪೈರ್ ಇದ್ದೇ ಇರ್ತಾರೆ. ಇಲ್ದಿದ್ದರೂ ಅಲ್ಲಲ್ಲೇ ಹುಟ್ಕೊಂಡು ಬಿಡ್ತಾರೆ. ಮದುವೇಲೂ ಒಬ್ಬರು ಬಾಯಿ ಹಾಕಿದರು.

'ನಾವು ಶಂಕರ ಮಠದ ಸ್ವಾಮಿಗಳ, ಉತ್ತರಾಧಿಮಠದ ರಾಯರ ಅನುಗ್ರಹದಿಂದ ಅಲ್ಲಿನ ಪುರೋಹಿತರನ್ನ ಕರ್ಕೊಂಡು ಬಂದೀದೀವಿ. ಅವರು ಹೇಳಿದ್ದೇ ಫೈನಲ್. ಅವರು ಡಿಸಿಷನ್ ಕೊಡ್ಲಿ'. ಯಾರಿಗೂ ಗೊತ್ತಿಲ್ಲದ ಥರ್ಡ ಅಂಪೈರ್ ಉವಾಚ. ಇನ್ನು ಯಾರೂ ಏನೂ ಅನ್ನೋಹಾಗೆ ಇಲ್ಲ.

ನಮ್ಮ ಪುರೋಹಿತರಿಬ್ಬರೂ ಅವರಲ್ಲೇ ಗುಸುಗುಸು ಮಾತಾಡಿಕೊಂಡು,

'ನಮ್ಮ ಮದುವೆ ಪದ್ಧತಿ ದ್ವಾಪರ ಯುಗದಿಂದ ನಡೆದು ಕೊಂಡು ಬರ್ತಾ ಇದೆ. ವಸಿಷ್ಠ ಮುನಿಗಳು ಅಮರಾವತಿಯಲ್ಲಿ ಇಂದ್ರನ ಮದುವೆಗೆ ಈ ಪದ್ಧತಿ

ಖುದ್ದಾಗಿ ತಯಾರಿಸಿದರು. ಅದರ ಪ್ರಕಾರ ನಾವು ಇಬ್ಬರ ಜಾತಕ ನೋಡಿ ಮಹೂರ್ತ ಫಿಕ್ಸ್ ಮಾಡೀದಿವಿ. ನಿಮ್ಮ ಟೈಮಿಂಗ್ ಪ್ರಕಾರ ಮಾಡಿದ್ರೆ ರಾಹುಕಾಲ ಆಗುತ್ತೆ. ಈಗೀಗ ಅದನ್ನು ರಾಹುಲ್ ಕಾಲ ಅಂತಾನೂ ಕರೀತಾರೆ. ಆ ಟೈಮ್ ಮಂಗಳ ಗ್ರಹದಿಂದ ಬಂದ ಹುಡುಗಿಗೆ ಮುಂದೆ ಮಂಗಳಕರ ಅಲ್ಲ. ಎರಡು ಕಡೆ ತಂದೆ ತಾಯಿಗೂ ಡೇಂಜರ್ ಇರುತ್ತೆ. ನಿಮ್ಮ ಚಂದ್ರಗ್ರಹಕ್ಕೂ ಒಳ್ಳೆದಲ್ಲ. ಸೂರ್ಯನಿಂದ ಡಸ್ಟ್ ಸ್ಟಾರ್ಮ್ ಜಾಸ್ತಿ ಬರುತ್ತೆ. ಆದ್ದರಿಂದ ನಾವು ಲೆಕ್ಕ ಹಾಕಿ ಫಿಕ್ಸ್ ಮಾಡಿರುವ ಘಳಿಗೇಲಿ ಮಾಡೋಣ. ನಿಮಗೂ ಇದು ಹೇಗೆ ಕಂಡು ಹಿಡಿಯೋದು ಅಂತ ಆಮೇಲೆ ಹೇಳ್ಕೊಡ್ತಿವಿ' ಅಂತ ಪುಸಲಾಯಿಸಿ ಒಪ್ಪಿಸಿದ್ರು.

**4**

ವಾಲಗ ಊದೋವ್ರನ್ನ ತಮಟೆ ಬಾರಿಸೋವ್ರನ ಡಬಲ್ ಸೌಂಡ್ ಡಬಲ್ ಫಾಸ್ಟ್ ಬಾರ‍್ಸಕ್ಹೇಳಿ ಪರೋಹಿತರು ರಾಮಿಕೈಲಿ ಮಾಂಗಲ್ಯ ಕಟ್ಸೇಬಿಟ್ಟರು. ಪುರೋಹಿತರು ಹಾಕಿದ ಅಕ್ಷತೆ ಕಾಳುಗಳು ಗಾಳಿಯಲ್ಲೇ ತೇಲುತ್ತಾ ನಿಂತಿತ್ತು. ಒಂದಿಷ್ಟು ಹುಡುಗರು ಅದನ್ನು ಬಾಯಿ ಅಗಲಿಸಿಕೊಂಡು ತಿನ್ನಲು ಹೋಗಿ ಕೆಳಗೆ ಬಿದ್ದರು!

ಊಟದ ಟೈಮ್ನಲ್ಲೂ ಹುಡುಗಿ ಕಡೇವ್ರು ನಾವು ನೆಲದಲ್ಲಿ ಕೂತ್ಕೊಂಡು ಊಟ ಮಾಡಲ್ಲಾಂತ ಶುರು ಮಾಡಿದ್ರು. ನಾವು ಅನ್ನಪೂರ್ಣ ಕೇಟರರ್ಸ್ ಮತ್ತು ಗುರುರಾಜ ಕೇಟರರ್ಸ್ನ ಕರ್ಕೊಂಡು ಹೋಗಿದ್ದು ಒಳ್ಳೆದಾಯ್ತು.

'ಮಂಗಳ ಗ್ರಹದಲ್ಲಿ ಕೆಳಗೆ ಕೂತ್ಕೊಂಡು ನಾವು ಊಟ ಮಾಡಲ್ಲ. ನಾವು ಟ್ರಾವೆಲ್ ಮಾಡ್ತಾನೇ ಹಾರ್ತಾನೇ ಕೈಲಿ ಸಾಂಡ್ವಿಚ್ ತಿಂದುಬಿಡ್ತಿವಿ. ನಾವು ಊಟ ಮಾಡೋಷ್ಟರಲ್ಲಿ ಸಾವಿರಾರು ಮೈಲಿ ಕ್ರಾಸ್ ಮಾಡಿರ್ತಿವಿ.' ಮತ್ತೆ ಹುಡುಗಿ ಸೋದರ ಮಾವ.

'ಮದುವೆಯ ಮೊದಲನೇ ಊಟ ಶುದ್ಧ ಮಹೂರ್ತದ ಊಟ ಎಂದು ತ್ರೇತಾಯುಗದಲ್ಲಿ ಹೇಳಿದೆ. ಆಗ ತಾನೆ ಮದುವೆ ಆದ ದೌಪದಿ ತನ್ನ ಗಂಡಂದಿರನ್ನು ಮತ್ತು ಅತ್ತೆ ಕುಂತಿಯನ್ನೂ ಕೂಡಿಸಿ ಬಾಳೆ ಎಲೇಲಿ ಪರಮಾನ್ನ ಬಡಿಸಿದಳು ಎಂದು ಮಹಾಭಾರತದಲ್ಲಿ ಉಲ್ಲೇಖ ಇದೆ. ಬೇಕಾದರೆ ನಾನು ನಿಮಗೆ ಅದರ ಕಾಪಿಯನ್ನು ಕಳಿಸಿಕೊಡ್ತೀನಿ.' ಅನ್ನಪೂರ್ಣ ಕೇಟರರ್ಸ್ನ ವ್ಯಾಸರಾವ್ ಹೇಳಿದ್ರು.

'ಹಾಗಿದ್ರೆ ಸರಿ. ನಾನು ತರಿಸ್ತೀನಿ. ಅದರಲ್ಲಿ ಊಟ ಬಡಿಸಿಬಿಡುವ.'

'ಹಾಗಾಗಲ್ಲ. ಅದನ್ನು ಬಡಿಸುವ ವಿಧಾನವಿದೆ. ನಾವು ಬಾಳೆ ಎಲೆ ತಂದೀದಿವಿ. ಎಲೆ ಎಡಗಡೆ ಮೇಲೆ ಉಪ್ಪಿನಿಂದ ಶುರುಮಾಡಿ ಉಪ್ಪಿನಕಾಯಿ, ಕೋಸಂಬರಿ ಹೀಗೆ ಬಡಿಸಿಕೊಂಡು ಕೆಳಗೆ ಬಲಗಡೆ ಪಾಯಸ ಬಡಿಸ್ಬೇಕೂಂತ ಅಂತ ಪಾಕಶಾಸ್ತ್ರದಲ್ಲಿ ನಳ ಮಹಾರಾಜ ಹೇಳಿದಾರೆ. ನಿಮಗೆ ಒರಿಜಿನಲ್ ಶಾಸ್ತ್ರಾನೇ ನಾನು ಆಮೇಲೆ ಕಳಿಸ್ತೀನಿ' ಅಂದ್ರು ಗುರುರಾಜ ಕೇಟರರ್ಸ್ನ ಭುಜಂಗ ಹೆಗ್ಡೆ.

ಹೀಗೆ ನಮ್ಮ ಕಡೆ ಸ್ಪೆಷಲಿಸ್ಟ್ಸ ಕೊಟ್ಟ ಸಲಹೆ ಮತ್ತು ಉತ್ತೇಜನದಿಂದ ಭೋಜನ ಕೂಟ ಚೆನ್ನಾಗಿ ಆಯ್ತು.

ಸಂಜೆ ಆರತಿ ಅಕ್ಷತೆಗೆ ನಮ್ಮ ಹುಡುಗ ಪ್ಯಾಂಟು ಷರ್ಟು ಧರಿಸಿದ್ದ. ಅವನಿಗೆ ಕೋಟು, ಸೂಟು ಅಂದ್ರೆ ಮೈಎಲ್ಲಾ ಪರಿಚ್ಕೋಳ್ಳೊ ಹಾಗೆ ಆಗುತ್ತೆ ಅಂತ ಅಂದಿದ್ದ. ಮಂಗಳದಲ್ಲಿ.

**5**

ಹುಡುಗಿಯರಿಗೆ ಸ್ಕರ್ಟ್ ಬ್ಲೌಸ್ ಅಭ್ಯಾಸ. ಅದು ಅಲ್ಲಿನ ಪದ್ಧತಿಯಂತೆ. ರಾಮಿ ಅವನ ಹೆಂಡತಿ ಸೀರೆ ಉಡಬೇಕೆಂದು ಆಸೆ. ಅವಳಿಗೂ ಬಹಳ ಆಸೆ. ನಾವೆಲ್ಲರೂ ಅವಳ ಅಪ್ಪ ಅಮ್ಮನನ್ನು ಅದಕ್ಕೆ ಒಪ್ಪಿಸಿದೆವು. ಅವಳ ರೂಮಿಗೆಹೋಗಿ ನಾವು ಕರೆದುಕೊಂಡು ಹೋಗಿದ್ದ ನಲ್ಲಿಸಿಲ್ಕ್ಸ್ ನ ಕುಪ್ಪುಸ್ವಾಮಿ ಐಯರ್ ಮತ್ತು ಭೀಮ ಜ್ಯುಯೆಲರ್ಸ್‌ನ ರಮೇಶ್ ಭಟ್ಟರ್ ಹೋಗಿ, ಅವರ ಹೆಂಡತಿಯರ ಸಹಾಯದಿಂದ, ಹುಡುಗಿಗೆ ಧರ್ಮಾವರಂನ ಭೂಮಿಯ ಹಸಿರು ಬಣ್ಣದ ಕಾಮನಬಿಲ್ಲು ಸೆರಗಿನ ಸೀರೆ ಮತ್ತು ಮ್ಯಾಚಿಂಗ್ ರವಿಕೆ, ತೋಳಬಂದಿ, ನೆಕ್ಲೆಸ್ ಹಾಕಿಸಿ ಮಾರ್ಸ್ನ ಹುಡುಗೀನ ಹೊರಗಡೆ ಕರೆದುಕೊಂಡು ಬಂದಾಗ ಚಂದ್ರನಿಗೇ ಒಂದು ಹೊಸ ಕಳೆ ಬಂದ ಹಾಗಿತ್ತು. ಅದನ್ನು ಭೂಮಿಯ ಮೇಲೆ ಜನರು ಸೂಪರ್ ಮೂನ್ ಎಂದು ನೋಡಿ ಅಚ್ಚರಿ ಪಟ್ಟಿರುತ್ತಾರೆ.

ಡಿನ್ನರ್ ಹೆಣ್ಣಿನ ಕಡೆಯವರು ಏರ್ಪಾಡು ಮಾಡಿದ್ದರು. ಎರಡೂ ಕಡೆ ಕೇಟರರಗಳೂ ಸೇರಿ ಅಡುಗೆ ಮಾಡಿದರು. ಅಡುಗೆ ಮನೆಯಿಂದ ನಾವು ಕೂತಿದ್ದ ಕಡೆ ಹತ್ತು ಗಜ ಹಾರಿಬಂದು ನಮಗೆ ಬಡಿಸುತ್ತಿದ್ದರು. ಹುಡುಗರು ಚಿಪ್ಸ್, ಹಪ್ಪಳದ ಪೀಸ್ಗಳು ಮೇಲಕ್ಕೆ ಎಸೆದು ಅದನ್ನು ತಿನ್ನಲು ಬಾಯಿ ತೆಗೆದುಕೊಂಡೇ ಪಕ್ಕದವರ ಮೇಲೆ ಬಿದ್ದು ಬೈಸಿಕೊಂಡರು! ಮೂನ್ ನ ಆರ್ಕೆಷ್ಟ್ರಾ ದವರು ಮೈಕೆಲ್ ಜಾನ್ಸ್ನ ಮೂನ್ ಷೈನ್, ಚಂದಾಮಾಮ ದೂರ್ಕಿ, ಚಂದವೋ ಚಂದಾ ಆ ಹಾಡೆಲ್ಲಾ ಹಾಡಿದ್ರು. ಅಲ್ಲಿ ಕೂತು, ಅವರ ಡ್ರಿಂಕ್ಸ್ ಹಾಕಿ ಬಣ್ಣ ಬಣ್ಣದ ಸಮುದ್ರ, ಹಿಮಾಲಯ ಪರ್ವತ ಮತ್ತು ಸುತ್ತಿತ್ತಿರುವ ಭೂಮಿ ನೋಡಿದ್ರೇನೆ ನಮಗೆಲ್ಲಾ ಹೋಮ್ ಸಿಕ್ ಆಗಿ ಆಳು ಬರುವಹಾಗೆ ಆಯಿತು. ಕೆಲವರು ಅತ್ತರು.

ಹನಿಮೂನ್ಗೆ ಎಲ್ಲಿ ಹೋಗ್ತಾರೆ ಅಂತ ಯಾರೋ ಕೇಳಿದ್ರು. ಭೂಮಿಲಿ ಕಪಲ್ ಹನಿಮೂನ್‌ಗೆ ಹೋಗ್ತಿವಿ ಅಂತ ಹೇಳಿ ಕಾಶ್ಮೀರ್. ಮೈಸೂರ್, ಮಡಿಕೇರಿ, ಊಟಿಗೆ ಹೋಗ್ತಾರೆ ಅಂದ್ರು. ಈಗ ನಮ್ ಹುಡುಗಿ ನಿಮ್ಮ ಭೂಮಿಗೆ ಹನಿಮೂನ್ಗೆ ಹೋಗ್ತಾಳೇ ಅಂದ್ರ ಯಾರೋ. ಅದಕ್ಕೆ ಚಪ್ಪಾಳೆ ತಟ್ಟ ಬೇಕೂಂತ ಅನ್ನಿಸ್ತು. ಎಲ್ಲಾರೂ ಚಪ್ಪಾಳೆ ತಟ್ಟಿದ್ವಿ.

ಕೊನೆಗೆ ಎಲ್ಲಿದ್ರೂ ಒಂದೇ. ಹುಡುಗಿ ತಂದೆ ತಾಯಿ ಅವಳ್ನ ಬೀಳ್ಕೊಡುವಾಗ ಬಹಳ ಅತ್ರು.

ಬೇರೆ ಗ್ರಹಗಳಲ್ಲಿರುವರ ಜೊತೆ ಸಂಬಂಧ ಮಾಡಿ ರಾಮಿ ಮತ್ತು ಅವನ ಹೆಂಡತಿ ಮತ್ತು ನಮ್ಮ ಮದುವೆ ಪಾರ್ಟಿಯರನ್ನು ಕರೆದುಕೊಂಡು ವಾಪಸ್ಸು ಬಂದಿದ್ದಾಯಿತು.

ಇಲ್ಲಿ ಬಂದು ಚಂದ್ರನ್ನ ನೋಡಿದ್ರೆ ನಮ್ಮ ಸಂಬಂಧ ಈಗ ಅಲ್ಲಿದೆ ಅನ್ನುವ ಭಾವನೆ ಬರುತ್ತೆ. ಅಲ್ಲೇ ಅಲ್ವೆ ನಮ್ಮ ಮತ್ತು ಮಂಗಳ ಗ್ರಹದವರ ಜೊತೆ ಮದ್ವೆ ಸಂಬಂಧ ಆಗಿದ್ದು. ಚಂದ್ರ,

**6**

ಮಂಗಳ ಗ್ರಹ ನೋಡಿದಾಗೆಲ್ಲಾ ಒಂದೊಂದು ಸಲ ಹುಡಿಗಿಯ ಕಣ್ಣಲ್ಲಿ ಒಂದೆರೆಡು ಹನಿ ಬರುತ್ತೆ. ಎಷ್ಟಾದರೂ ತವರು ಮನೆ ಅಲ್ವೆ? ■

# ವಾಸನೆಯೆಂಬೋ ಯಾತನೆ

**ಲತಾ ಹೆಗಡೆ**

ಅಂತೂ ಇಂತೂ ಅಧಿಕ ಶ್ರಾವಣ ಮುಗಿದು ನಿಜ ಶ್ರಾವಣದ ಸಂಭ್ರಮ ಬಂದಾಗಿತ್ತು. ಲಕ್ಷ್ಮಮ್ಮನಿಗೆ ಹೊಸ ಸೀರೆ ಉಡಿಸಿ, ಸರ್ವಾಲಂಕೃತೆಯಾಗಿಸಿ, ಹೂರಾಶಿಯಲ್ಲಿ ಮುಳುಗಿಸಿ ಕೃತಾರ್ಥರಾಗುವ ಮಾನಿನಿಯರೆಲ್ಲಾ ಪರಸ್ಪರ ಉಡಿ ತುಂಬಿಸಿಕೊಂಡು ಓಡಾಡುವ ಹೊತ್ತು. ಕಪಾಟಿನ ಮೂಲೆಯ ಮೂಟೆಯಲ್ಲಿ ಬಚ್ಚಿಟ್ಟುಕೊಂಡೋ, ಹ್ಯಾಂಗರ್ಗೆ ಜೋತುಬಿದ್ದೋ ಕೂಪಮಂಡೂಕದಂತಿದ್ದ ರೇಷ್ಮೆ ಸೀರೆಗಳಿಗೆಲ್ಲಾ ಪರ್ವಕಾಲವೇ ಸೈ. ಈ ಮಾಸದಲ್ಲಿ ನಾಗರಪಂಚಮಿ; ಮಂಗಳಗೌರಮ್ಮ, ಮಹಾಲಕ್ಷ್ಮಮ್ಮಂದಿರ ನಾಲ್ಕಾಲ್ಕು ವಾರ; ಕೃಷ್ಣಾಷ್ಟಮಿ, ರಾಖೀಹಬ್ಬ ಮುಂತಾದ ಹಬ್ಬಗಳೊಟ್ಟಿಗೆ ದೇವಕಾರ್ಯ ಮಾಡಿ ಧನ್ಯತೆಯನ್ನನುಭವಿಸುವವರ ಮನೆಗಳಿಗೂ ವಿಶೇಷ ಆಹ್ವಾನ ಇದ್ದೇ ಇರುತ್ತದೆ. ಲೆಕ್ಕ ಹಾಕಿದರೆ ಕನಿಷ್ಟ ಹದಿನೈದು ರೇಷ್ಮೆಅಥವಾ ಅಂತಹ ಸೀರೆಗಳು ಬೇಕೇ ಬೇಕಲ್ಲವೇ? ಸೀರೆ ಅಂದರೆ ಅರಿಶಿನ ಕುಂಕುಮಕ್ಕೆ, ಹಬ್ಬ ಹರಿದಿನಕ್ಕೆ ಉಡುವಂತಹದ್ದು. ಅಷ್ಟ್ಯಾಕೆ ಬೇಕು ಅಂತಿದ್ದೀರಾ ಈ ಮಂಗಳವಾರ ಉಟ್ಟಿದ್ದು ಮುಂದಿನ ಮಂಗಳವಾರಕ್ಕೆ ರಿಪೀಟ್ಮಾಡೋಕಾಗುತ್ಯೇ ಅದೂ ಈ ಕಾಲದಲ್ಲಿ! ಚಾನ್ಸೇ ಇಲ್ಲ. ಸರೀ, ನಾನೂ ಏನ್ಕಡಿಮೆಯಿಲ್ಲ ಅಂತ ಓಬೀರಾಯನ ಕಾಲದ ಎಂಟಿಕ್ ಸೀರೆ ಉಟ್ಟಿ ಮೆರೆದಿದ್ದೆ (ಹಾಗಂದ್ಕೊಂಡಿದ್ದೆ) ಆದರೆ ಆದದ್ದೇ ಬೇರೆ, ಅಂದಿನ ಆ ದಯನೀಯ ಸ್ಥಿತಿ ಆಗಾಗ ಅಂದ್ರೆ ಸಿಲ್ಕ್ಸೀರೆ ಉಡುವ ಸಂದರ್ಭ ಬಂದಾಗಲೆಲ್ಲಾ ಜ್ಞಾಪಕಕ್ಕೆ ಬಂದು ಕೊರಳ ಸೆರೆಯುಬ್ಬುತ್ತೆ ಕಣ್ರೀ ಅಂಥಾದ್ದು ಏನಾಯ್ತಪ್ಪ, ಯಾಕೋ ಇವಳದ್ದು ಅತೀಯಾಯ್ತು ಅಂದ್ಕೋತಿದೀರಾ? ತಾಳಿ, ವಿವರ ತಿಳಿದ್ಮೇಲೆ ನೀವೂನೂ ಹಲ್ಲಿಯಂತೆ ಲೊಚಗುಡ್ತಾ ಕನಿಕರಿಸ್ತೀರಾ ಅಂತ ಗ್ಯಾರಂಟಿ ಕೊಡಬಲ್ಲೆ ಇದು ಓದುಗ ಸ್ನೇಹಿತರಾದ ನಿಮ್ಮೆಲ್ರಿಗೂ ನನ್ನಿಂದ ಸಿಕ್ತಿರೋ ಆರನೇ ಗ್ಯಾರಂಟಿ ಭಾಗ್ಯ!

ಎರಡನೇ ಶುಕ್ರವಾರ ವರಮಹಾಲಕ್ಷ್ಮಮ್ಮನ ಹಬ್ಬ, ಅದರ ಖದರು ಎಲ್ರಿಗೂ ಗೊತ್ತಿದ್ದದ್ದೇ. ಕರೋನಮ್ಮನ್ನ ವಿರುದ್ಧ ಲಸಿಕಮ್ಮನ್ನ ಛೂ ಬಿಟ್ಟು ಎರಡ್ಮೂರು ವರ್ಷದ ಹಣಾಹಣಿಯಲ್ಲಿ ಮಕಾಡೆ ಮಲಗ್ಸಿ ಮಲಗಿದ್ದ ವರಮಹಾಲಕ್ಷ್ಮಮ್ಮನ್ನ ಎಬ್ಬಿಸಿ ವಿಜೃಂಭಣೆಯಿಂದಲೇ ಹಬ್ಬ ಆಚರಿಸಲಾಗಿತ್ತು, ಹೊಸತನವಿರಲಿ ಅಂತ ಮೂರು ದಶಕದಷ್ಟು ಹಳೇ ಸೀರೇನ ಮೂಟೆಯೆಂಬ ಘೋಷದಿಂದ ಹೊರತೆಗ್ದು ಆಸ್ಥೆಯಿಂದ ಉಡ್ಬೇಕಾದ್ರೆ ವಿಶಿಷ್ಟ ವಾಸನೆ ರಾಚಿತ್ತು ಅದೇ ಕಣ್ರೀ ನಮ್ಮ ಕಡೆ 'ಜಿರಳೆ ಕುರಣೆ ವಾಸನೆ' ಅಂತಾರೆ. ನಿಮಗೂ ಇದರ ಅನುಭವ ಇದ್ದೇ ಇರುತ್ತೆ. ಉಟ್ಟು ಗಾಳೀಲಿ ಅಡ್ಡಾಡಿದ್ರೆ ಸರೀ ಹೋಗ್ಬಹುದು ಅಂದ್ಕೊಂಡು ನನ್ನ ಇಷ್ಟದ ಕೆಂಪಂಚಿನ ಹಸಿರು ಸೀರೆ ಉಟ್ಟಿದ್ದಾಗಿತ್ತು. ವಾಸನೆ ಬೇಗ ಹೋಗಿಸ್ಬೇಕಂತ ಸೆಂಟನ್ನೂ ಧಾರಾಳವಾಗಿ ಪೂಸಿಕೊಂಡೆ. ವಾಸನೆ ಹೋಗೇಬಿಟ್ತು ಅಂಬೋ ಭ್ರಮೇಲಿ ಗಿಲೀಟು ಹೇರ್ಕೊಂಡೆ. ಅಯ್ಯೋ! ಸಿರಿಲಕ್ಷ್ಮಮ್ಮನ ಹಬ್ಬಕ್ಕೆ ಗಿಲೀಟು ಒಡವೆಯೇ ಮೂಗು ಮುರೀಬೇಡಿ. ಈ ತುಟ್ಟಿ ಕಾಲದಲ್ಲಿ ಚಿನ್ನದ್ದು ಮಾಡಿಸಿಕೊಳ್ಳೋಕೆ ಆಗುತ್ಯೇ? ಮಾಡಿಸಿಕೊಂಡ್ರೂ ಹಾಕ್ಕೊಂಡು ಆರಾಮಾಗಿ ತಿರ್ಗೋದು ತಿರುಕನ ಕನಸೇ ಸರಿ. ಅಂದ್ಹಾಗೇ ನಾವೆಲ್ಲರೂ ಒಂದೇ ದೋಣಿ ಕಳ್ಳರು ಕಣ್ರೀ, ಯಾಕಂತೀರಾ? "ಯಾವಾಗ್ಮಾಡಿಸ್ಕೊಂಡ್ರಿ, ಎಷ್ಟು ಗ್ರಾಂ, ಎಷ್ಟಾಯ್ತು, ಎಲ್ಲಿ ತೊಗೊಂಡ್ರೀ" ಪಟಪಟನೆ ತೂರಿಬರೋ ಪ್ರಶ್ನಾವಳಿಗೆ ಸತ್ಯದ ತಲೆಮೇಲೆ ಹೊಡೆದಂತೇ ಸಟಸಟನೆ ಸುಳ್ಳಿನ ಸರಮಾಲೆ ಪೋಣಿಸೋದರಲ್ಲಿ ಗೆಳತಿಯರಾದ ನಾವೆಲ್ರೂ ನಿಸ್ಸೀಮರೇ. ಹಾಗೇನೇ ನಕಲಿ ಅಂತ ಗೊತ್ತಿದ್ರೂ ನಂಬಿದ ಹಾಗೆ ನಟಿಸೋಕೂ ಸೈ.

ಸುಮಾರು ಅರ್ಧ ಶತಕದಷ್ಟು ಮಹಿಳೆಯರು ನಮ್ಮ ಮನೇಲಿ ಉಡಿ ತುಂಬಿಸ್ಕೊಂಡು ಹೋಗೋದು ವಾಡಿಕೆ. ನಾನೊಂದು ಕಾಲು ಶತಕದಷ್ಟು ಮನೆಗೆ

ಅರಿಶಿನ ಕುಂಕುಮಕ್ಕೆ ಹೋಗೋದು ಇರುತ್ತದೆ. ಲೇಟೇಸ್ಟ್ರೆಂಡ್ಸೀರೆಗಳು ಎಲ್ಲರ ಹತ್ತಿರವೂ ಇದ್ದೇ ಇರುತ್ತದೆ ಮತ್ತವರು ಅದನ್ನು ಉಟ್ಟೇ ಉಡುತ್ತಾರೆ, ಆದರೆ ನಾ ಮಾತ್ರ ವಿಭಿನ್ನವಾಗಿ ಮಿಂಚಬೇಕಲ್ಲವೇ? ಎಂದೇ ನನ್ನ ಸೀಮಂತದ ಸೀರೇನ ಉಟ್ಟಿದ್ದು.

“ಅದೇನೇ ಅದು ಒಂಥರಾ ಕೊಳಕು ವಾಸನೆ?” ಭುಜದ ಮೇಲಿದ್ದ ಮಲ್ಲಿ ಪರ್ಪಸ್ಟವಲ್ಲಿಂದ ಮೂಗು ಮುಚ್ಚಿಕೊಂಡು ಯಜಮಾನರು ಹೊರಗೋಡಿದ್ದರು. ಚೆಂದದ ಸೀರೆ ಉಟ್ಟು ಗೆಳತಿಯರ ಮುಂದೆ ಮೆರೆಯುವ, ಉಡಿ ತುಂಬುವ ಉತ್ಸಾಹದಲ್ಲಿ ಅವರ ಮಾತನ್ನು ನಜರ್ ಅಂದಾಜ್ಮಾಡಿದ್ದೆ. ಆದ್ರೆ ನಮ್ಮನೇಗ್ ಬಂದ ಹೆಂಗೆಳೇರೆಲ್ಲಾ ಉಡಿ ತುಂಬಿಸ್ಕೊಂಡು ಔಸ್ರದಲ್ಲಿ ಜಾಗ ಖಾಲಿ ಮಾಡ್ತಿದ್ದರು. “ಈದ್ಯಾವ ಸೀರೆ ಕಣ್ರೀ ನೋಡೇ ಇಲ್ಲ, ನೀವ್ಬಲೂ ಚುಪಾರುಸ್ತುವ್ಕಣ್ರೀ ಯಾವಾಗ ತೊಗೊಂಡಿದ್ರೋ ಏನೋ ತೋರ್ಸೇ ಇಲ್ಲ” ರಾಗ ಎಳೀತಾ ಒಳಬಂದ ಲೀಲಾ ಸೀರೆ ಸೆರಗು ಹಿಡಿದು ಪರಿಶೀಲಿಸುವಾಗ ಮುಖ ಕಿವುಚಿದಳೇ? ಭ್ರಮೆಯಿರ್ಬೇಕು ಬಿಡಿ.

“ಬೇಗ ಉಡಿ ತುಂಬಿ, ಹೋಗ್ಬೇಕು’ ಹೋದ ಕಡೇಲೆಲ್ಲಾ ಕನಿಷ್ಟ ಅರ್ಧ ಗಂಟೆಯಾದರೂ ಕೂರೋ ಹೆಂಗಸಿಗೆ ಅವಸರವೇಕೆ ಎಂದುಕೊಳ್ಳುತ್ತಲೇ ಉಡಿ ತುಂಬಿದ್ದೇ ತಡ ಆಸಾಮಿ ಕಾಲ್ಕಿತ್ತಿದ್ರು. ಸರಬರ ಓಡಾಡ್ತಾ ಉಡಿ ತುಂಬೋ ಕಾರ್ಯಕ್ರಮದ ನಡುವೆಯೇ ಉಡಿ ತುಂಬಿಸ್ಕೊಳ್ಳೋಕೂ ಹೋಗ್ಬೇಕಿತ್ತು. ’ತಾಳಿ, ನಾನೂ ಬರ್ತೀನಿ’ ಎದುರು ಮನೆ ಗಂಗಾ ಸಮೀಪ ಬಂದವರೇ ’ಅಯ್ಯೋ, ಪಲ್ಲವಿ ಬರ್ತೀನಿ ಅಂದಿದ್ರು ಅವರಿಗೆ ಉಡಿ ತುಂಬಿ ಬರ್ತೀನಿ, ನೀವು ಹೋಗಿರಿ” ವಾಪಸ್ಸು ಹೋದದ್ದೇಕೋ.

ಅಂದ್ಹಾಗೆ ಸಂಜೆ ಏಳು ಗಂಟೆಯಿಂದ ಎಂಟು ಗಂಟೆ ಉಡಿ ತುಂಬಿಸ್ಕೊಳ್ಳೋಕೆ ’ಪೀಕ್ ಅವರ್”. ಒಟ್ಟೊಟ್ಟಿಗೇ ಗೆಳತಿಯರೆಲ್ಲಾ ಬರೋ ಸಮಯ, ಕೂರೋಕೆ ಜಾಗ ಸಾಲಲ್ಲ. ಆದ್ರೂ ಒಬ್ಬರಿಗೊಬ್ಬರು ಅಂಟಿಕೊಂಡೇ ನಾಲ್ಕು ಜನರ ಜಾಗದಲ್ಲಿ ಏಳು ಜನ ಕೂರ್ತಾರೆ. ಈ ವಿಷಯದಲ್ಲಿ ಬಹಳ ಒಗ್ಗಟ್ಟು. ಹಾಗೇ ಪುರುಸೊತ್ತು ಮಾಡಿಕೊಂಡು ಕವಿತಳ ಮನೆಗೆ ಹೋದಾಗ ಇಂತಹದ್ದೊಂದು ಸೀನು. ನಾನಿನ್ನೂ ಸೋಫಾದಲ್ಲಿ ಕೂರ್ತಿದ್ದಂತೇ ಅಕ್ಕಪಕ್ಕ ಕೂತ ವಿಮಲಾ, ರೇಖಾ ಲಕ್ಷ್ಮಮ್ಮಂಗೆ ಆರ್ತಿ ಮಾಡೋ ನೆಪದಲ್ಲಿ ಹೋದವ್ರು ಬೇರೆಡೆ ಕೂತದ್ದೇಕೆ? ನನ್ನ ಸ್ಥಿತಿ ಕಳ್ಳನ ಮನಸ್ಸು ಹುಳ್ಳಗೆ ಅಂತಿತ್ತೇ ಗೊತ್ತಿಲ್ಲ.

ನೇರನುಡಿಯ ಕವಿತಾ ಕೇಳೇಬಿಟ್ರು “ಏನ್ರೀ, ನೀವುಟ್ಟಿರೋದು ಯಾವ್ಕಾಲದ್ಸೀರೆ? ನೋಡೇ ಇಲ್ಲ. ಒಂಥರಾ ವಾಸ್ನೆ (ದುರ್ವಾಸ್ನೆ ಅನ್ನದೇ ಇದ್ದದ್ದು ನನ್ನ ಪುಣ್ಯ) ಇದ್ಯಲ್ವಾ ಬಿಸಿಲಿಗಾದ್ರೂ ಹಾಕ್ಬೇಕಿತ್ತೇನೋ” ಇದೀಗ ಯಜಮಾನರ ಮೇಲೆ ಕೆಟ್ಟ ಕೋಪ ಬಂದಿತ್ತು. ಗಟ್ಟಿಸಿ ಹೇಳಬಾರದಿತ್ತೇ ಆ ಸೀರೆ ಉಡಬೇಡ್ವೇ ಜಿರಳೇ ಕುರಣೆ ವಾಸನೆ ಅಂತ. ನಾನೇನೋ ಸೀರೆ ಉಟ್ಟು ಮ್ಯಾಚಿಂಗ್ ವಡವೆ ಹೇರ್ಕೊಳ್ಳೋ ಗಡಿಬಿಡೀಲಿ ಇದ್ನಪ್ಪ. ಅವರಿಗೇನಾಗಿತ್ತು ಹೇಳೋಕೆ? ಒಂದು ಕೈಯಲ್ಲಿ ಮೊಬೈಲು, ಇನ್ನೊಂದು ಕೈಯಲ್ಲಿ ರಿಮೋಟು ಹಿಡ್ಕೊಂಡು ಸೋಫಾದಲ್ಲಿ ಉತ್ಸವ ಮೂರ್ತಿಯಂತೆ ಕೂರೋದು ಬಿಟ್ಟು ಬೇರೆ ಕೆಲ್ಸ ಏನಿದೆ? ಇರೋ ಒಂದು ಹೆಂಡತೀ ಮಾನ ಕಾಪಾಡೋ ಬಾಧ್ಯತೆಯೂ ಇಲ್ಲವಾಯ್ತೇ? ಈಗ್ನೋಡಿ, ನಂಗೆಂಥಾ ಘೋರ ಅಪಮಾನ ಅದೂ ತುಂಬಿದ ಸಭೆಯಲ್ಲಿ!

ಗೊತ್ತಿದ್ದೂ ಗೊತ್ತಿದ್ದೂ ಆ ವಾಸನೆ ಸೀರೆ ಉಟ್ಟಿದ್ಯಾಕೋ ಅಂತ ವ್ಯಂಗ್ಯ ಬೇಡ. ಸತ್ಯವಾಗ್ಲೂ ಆ ವಾಸ್ನೇನ ನನ್ನ ಬಂದ್ನಾಸಿಕ (ಬಂದ್ದರ್ವಾಜಾ ಅಂತ ಕಾದಂಬರಿ ಹೆಸರು ಇದ್ಯಲ್ವಾ ಹಾಗೇನೇ ಈ ಪದ) ಘ್ರಾಣಿಸಲಿಲ್ಲ ಕಣ್ರೀ ಗೊತ್ತಿದ್ದರೆ ನಾನ್ಯಾಕೆ ಉಡ್ತಿದ್ದೆ. (ಇದಪ್ಪಾ ವರ್ಸೆ) ಸತ್ಯವಾಗ್ಲೂ ಹೇಳ್ತಿದ್ದೀನಿ ಕಣ್ರೀ, ಇನ್ನೊಬ್ರಿಗೆ ತೊಂದ್ರೆ ಕೊಡೋ ಜಾಯಮಾನದವ್ಳು ನಾನಂತೂ ಅಲ್ವೇ ಅಲ್ಲ ನೀವಾದ್ರೂ ನಂಬಿ ಪ್ಲೀಸ್ !

■

## ಟೋಪಿಗಳು ಸಾರ್!

ಡಾ॥ ಸಹನ ಪ್ರಸಾದ್

"ಒಂದೈವತ್ತು ಕೊಟ್ಟಿರಿ, ಸಂಬಳ ಬಂದ ತಕ್ಷಣ ಹಿಂದಿರುಗಿಸುವೆ" ಒಂದಿಪ್ಪತ್ತು ವರುಷದ ಹಿಂದೆ ನನ್ನ ಬಳಿ ಈ ರೀತಿ ಕೇಳುವವರು ಜಾಸ್ತಿ ಇದ್ದರು. ಎಷ್ಟು ಐವತ್ತು ನೋಟುಗಳು ಪರ್ಸಿನಿಂದ ಗಾಯಬ್ ಆದವೋ, ಲೆಕ್ಕವಿಲ್ಲ. ಮನೆ ಕೆಲಸದವರು, ಆಫೀಸಿನ ಹೌಸ್ ಕೀಪಿಂಗ್ ಮಂದಿ, ಆಟೋದವ, ಸೊಪ್ಪು ಮಾರುವಾತ, ಹೂವಾಡಗಿತ್ತಿ.. ಹೀಗೆ ಸುಮಾರು ಜನರು ನನ್ನ ಬಳಿ ಹಣ ಸಾಲ ಮಾಡಿ, ತಲೆ ಮೇಲೆ ಟೋಪಿ ಇಟ್ಟು ಪರಾರಿ ಆಗಿರುವರೋ ಲೆಕ್ಕವಿಲ್ಲ. ಈಗ ಐವತ್ತು ಐನೂರು ಕೆಲವೊಮ್ಮೆ 5000 ಆಗಿರುವುದೇ ಬದಲಾವಣೆ. ಟೋಪಿಗಳ ಸೈಜು ಕೊಂಚ ದೊಡ್ಡದಾಗಿವೆ ಅಷ್ಟೇ. ಅದಕ್ಕೆ ಕಾರಣ , ನನ್ನ ಅತಿ ಒಳ್ಳೆಯ ಗುಣ.ಅಥವಾ ಈಗಿನ ಕಾಲದವರ ಪ್ರಕಾರ ಪೆದ್ದುತನ. ಇಂಗ್ಲೀಷಿನಲ್ಲಿ "ಪೀಪಲ್ ಪ್ಲೀಸರ್ಸ್" ಅಂದರೆ ಸದಾ ಕಾಲ ಬೇರೆಯವರನ್ನು ಮೆಚ್ಚಿಸಿ, ಅವರ ಹತ್ತಿರ ಒಳ್ಳೆಯವಳು ಎನಿಸಿಕೊಳ್ಳಬೇಕೆಂಬ ಹಂಬಲ.

"ಈ ಸಲ ಪ್ರೋಗ್ರಾಮ್ ನಿರ್ವಹಣೆ ನಿಮ್ಮದೇ, ಎಲ್ಲವೂ ರೆಡಿ ಮಾಡಿಕೊಳ್ಳಿ" ಬಾಸ್ ಮಾತಿಗೆ ಎದುರಾಡಲು ಆಗದೆ ಗೋಣಾಡಿಸಿ ಬಂದು ಗಂಡನಿಗೆ ಫೋನ್ ಮಾಡಿದಾಗ ಸಿಕ್ಕಾಪಟ್ಟೆ ಸಿಟ್ಟಾದರು "ಅವತ್ತು ನನ್ನ ಸಹೋದ್ಯೋಗಿಗಳ ಜತೆ ಟ್ರಿಪ್ ಕಾರ್ಯಕ್ರಮ ಇದೆ, ಮರೆತು ಹೋಯ್ತಾ? 3000 ರೂಪಾಯಿ ಕಟ್ಟಿ ಎಲ್ಲವೂ ಬುಕ್ ಆಗಿದೆ. ಹೇಳುವುದಕ್ಕೆ ಆಗೋಲ್ಲವಾ, ಆ ದಿನ ಊರಿನಲ್ಲಿ ಇರುವುದಿಲ್ಲ, ಮೊದಲೇ ಪ್ಲಾನ್ ಆಗಿದೆ ಅಂತ" ಒಂದೇ ಸಮನೆ ಮಾತನಾಡುತ್ತಿದ್ದ ಅವರ ಮಾತಿನ ಮಧ್ಯೆ "ಇಲ್ಲ, ಆಗಲ್ಲ ಅನ್ನುವುದು ನನ್ನ ಕೈಲಿ ಆಗೋಲ್ಲ" ಎಂದು ಹೇಳುವುದಕ್ಕೆ ಆಗಲೇ ಇಲ್ಲ. "ನಿನ್ನ ಜೋರು ನನ್ನ ಬಳಿ ಮಾತ್ರ. ಬೇರೆಯವರ ಮುಂದೆ ಇಲಿ, ಗಂಡನ ಮುಂದೆ ಹುಲಿ!"

ಆ ದಿನ ಗಂಡ ಎಲ್ಲರ ಜತೆ ಟೂರ್ ಹೋದಾಗ, ನಾನು ರಿಹರ್ಸಲ್ ಮಾಡಿ, ಟೆನ್ಷನ್ ಮಾಡಿಕೊಂಡು, ತೀವ್ರ ಒತ್ತಡದಲ್ಲಿ ವೇದಿಕೆ ನಿರ್ವಹಣೆ ಮಾಡುತ್ತಾ ಇಡೀ ದಿನ ಕಳೆದೆ. ಬಹಳಷ್ಟು ಮಂದಿ ಸಹೋದ್ಯೋಗಿಗಳು ಕಾರ್ಯಕ್ರಮದ ದಿನ ಕಚೇರಿಗೆ ರಜೆ ಇದ್ದಿದ್ದರಿಂದ ಹಾಯಾಗಿ ತಮ್ಮ ಸಂಸಾರದ ಜತೆ ಆರಾಮಾಗಿ ಕಳೆದಿದ್ದು ಇನ್ನೂ ಬೇಸರವಾಯಿತು." ನನ್ನೂ ಕೇಳಿದರು ಕಣೆ. ಆಗುವುದೇ ಇಲ್ಲ ಸರ್. ನನಗೆ ವೇದಿಕೆ ಹತ್ತಿದರೆ ಹೆದರಿಕೆ ಎಂದು ತಪ್ಪಿಸಿಕೊಂಡೆ" ಗೆಳತೀ ನಕ್ಕು ಹೇಳಿದಾಗ ನನ್ನ ಮೇಲೆ ನನಗೆ ಸಿಟ್ಟು ಬಂತು. ಎಲ್ಲ ಮುಗಿಯುವ ಹೊತ್ತಿಗೆ ಊಟದ ಮನೆ ಖಾಲಿ. "ಮಜ್ಜಿಗೆ ಪಾಕೆಟ್ ಹಾಗೂ ಮಿಕ್ಕಿರುವ ಹೂವಿನ ಬೊಕೆ ತೆಗೆದುಕೊಂಡು ಹೋಗಿ" ಎಂದಾಗ " ಏನೂ ಬೇಡ" ಎನ್ನುವ ಬದಲು, "ಆಯ್ತು ಸರ್, ಥಾಂಕ್ ಯೂ " ಎಂದು ಹೊರಟೆ!

"ನನ್ನ ಮಗಳು ಪರೀಕ್ಷೆ ಕೊಠಡಿ ಹೊರಗೆ ನಿಂತಿದ್ದಾಳೆ. ಅವಳಿಗೆ ಒಂದೈದು ಸಾವಿರ ಅರ್ಜೆಂಟ್ ಕಳುಹಿಸಿ ಮೇಡಂ" ಎಂದು ಪರಿಚಯ ದನಿ ಫೋನ್‌ನಲ್ಲಿ "ಯಾರಿದು" ಎಂದದ್ದಕ್ಕೆ "ನಾನೇ ಮೇಡಂ, ರಸ್ತೆ ಮೂಲೆಯಲ್ಲಿ ಅಂಗಡಿ ಇಟ್ಟಿದೀನಲ್ಲ, ನನ್ನ ಮಗಳು ಪರೀಕ್ಷೆ ಫೀಸ್ ಕಟ್ಟಿಲ್ಲ ಅಂತ ಹೊರಗೆ ನಿಲ್ಲಿಸಿದ್ದಾರೆ. ದಯವಿಟ್ಟು

ಹಣ ಕಳುಹಿಸಿ. ಸಂಜೆ ನಿಮ್ಮ ಮನೆಗೆ ಬಂದು ಮಾತನಾಡುವೆ"ಎಂದಾಗ ನೆನಪಾಯಿತು. ಮೊನ್ನೆ ಸಕ್ಕರೆ ತರಲು ಹೋದಾಗ ಟೈಟ್ ಪ್ಯಾಂಟ್ ಹಾಕಿ ನಿಂತ ಅಂಗಡಿಯವರ ಮಗಳನ್ನು ಕುರಿತು "ಎಷ್ಟು ಮುದ್ದಾಗಿ ಇದಾಳೆ ನಿಮ್ಮ ಮಗಳು, ಚೆನ್ನಾಗಿ ಓದಿಸಿ" ಅಂತ ಹೇಳಿದ ನೆನಪಾಯಿತು. ಅವರನ್ನು ಮೆಚ್ಚಿಸಲು ಆಡಿದ ಮಾತು ಇಂದು ನನಗೆ 5000 ದಂಡ ವಿಧಿಸುತ್ತದೆ ಎಂದು ಅರಿವಾಯಿತು.

"ನಮ್ಮ ಮನೆಯಲ್ಲಿ ಸುಮಾರು ಉಪಯೋಗಿಸದ ಸಾಮಾನುಗಳಿವೆ. ಯಾವುದು ಬೇಕೋ ತೆಗೆದುಕೊಂಡು ಹೋಗಿ" ಎಂದು ನಮ್ಮ ರೋಡಿನಲ್ಲಿ ಕೆಲಸ ಮಾಡುವ ಹೆಂಗಸರಿಗೆ ಹೇಳಿಕಳುಹಿಸಿದೆ. ಎಲ್ಲರೂ ಬಂದು ತಮಗೆ ಬೇಕಾದದ್ದನ್ನು ಆಯ್ಕೆ ಮಾಡಿ, ಎಲ್ಲವೂ ಗೂರಾಡಿ, ಮನೆಯೆಲ್ಲಾ ಹರಡಿ ಹೋದರು. ಆರಿಸಿ ಬಿಟ್ಟ ಎಲ್ಲಾ ಸಾಮಾನು ಎತ್ತಿಡುವುದು ಅಲ್ಲದೆ "ನಮಗೆ ಬೇಕಾದದ್ದು ಸಿಗಲಿಲ್ಲ" ಎನ್ನುವ ಮಾತು ಸಹ ಕೇಳಬೇಕಾಯಿತು!

"ನಮ್ಮತ್ತೆಗೆ ನಿಮ್ಮನ್ನು ಕಂಡರೆ ತುಂಬಾ ಇಷ್ಟ. ನಾವೆಲ್ಲರೂ ನಾರ್ಥ್ ಇಂಡಿಯಾ ಟೂರ್ ಮುಗಿಸಿ ಬರುವವರೆಗೆ ಕೊಂಚ ಮನೆ ಕಡೆ, ಅತ್ತೆಯ ಕಡೆ ನಿಗಾ ಇಡುತ್ತೀರಾ? ನಮ್ಮೆಜಮಾನರಂತೂ ನಿಮ್ಮನ್ನು ಹೊಗಳುತ್ತಲೇ ಇರುತ್ತಾರೆ. ಎಷ್ಟು ಒಳ್ಳೆಯವರು ನಮ್ಮ ನೆರೆಮನೆಯವರು ಎಂದು!" ಹೊನ್ನ ಶೂಲಕ್ಕೆ ಏರಿದ ನಾನು ಅವರ ಮನೆ ತೋಟ, ನಾಯಿ ಹಾಗೂ ಅವರತ್ತೆಯನ್ನು ನಿಭಾಯಿಸಿ ಸುಸ್ತು ಹೊಡೆದೆ. ಸೊಸೆಯ ಎದುರು ಬಾಯಿ ಮುಚ್ಚಿ ಇರುತ್ತಿದ್ದ ಆಕೆಯ ಅತ್ತೆ ನನ್ನ ಜೀವ ಹೈರಾಣು ಮಾಡಿಬಿಟ್ಟರು. ಅವರ ನಾಯಿಯ ಊಟ, ತಿಂಡಿ, ವಾಕಿಂಗ್ ಸಂಭ್ರಮದಲ್ಲಿ ನನ್ನ ಮನೆಯತ್ತ ಗಮನ ಕೊಡಲು ಸಾಧ್ಯವಾಗದೆ ಬೈಸಿಕೊಂಡೆ. ಅವರ ಗಿಡಗಳಿಗೆ ನೀರುಣಿಸಿ ನಮ್ಮ ಮನೆಯ ಗಿಡಗಳು ಒಣಗಿದವು." ಮನೆಗೆ ಮಾರಿ, ಪರರಿಗೆ ಉಪಕಾರಿ "ಎಂಬ ಗಾದೆಗೆ ಸರಿಯಾಗಿ ವರ್ತಿಸಿ, ಅವರಿಂದ ಮತ್ತೂ ಹೊಗಳಿಕೆಗೆ ಪಾತ್ರಳಾಗುವ ಆಸೆ" ನಿಮ್ಮನ್ನು ನಂಬಿ ಹೊರಟ್ವಿ. ನೀವು ಸರಿಯಾಗಿ ನೋಡಿಕೊಂಡೇ ಇಲ್ಲ!" ಎಂಬ ದೂಷಣೆಯಿಂದ ಅಂತ್ಯವಾಯಿತು!

"ಒಂದು ರೀತಿಯ ಪ್ರಾಬ್ಲಮ್ ಇದು. ಎಲ್ಲರನ್ನೂ ಮೆಚ್ಚಿಸಿ ನಿನ್ನ ಮೈ ಮೇಲೆ ತೊಂದರೆ ಎಳೆದುಕೊಳ್ಳುವ ಪರಿ. "ಹೌ ಟು ಸೆ ನೋ" ಇಲ್ಲ ಎನ್ನುವುದು ಹೇಗೆ ಎಂಬ ಪುಸ್ತಕ ತಂದಿಟ್ಟರು ಯಜಮಾನರು. ಓದಬೇಕು, ತಿದ್ದಿಕೊಳ್ಳಬೇಕು ಎಂದು ಹವಣಿಸುತ್ತಲೆ ಇರುವೆ!

■

**ಹೌದು, ಹಾಗೆ ಅಂದ್ಕೊಂಡಿದ್ದು...!**

ಬಸ್ಸಿನಲ್ಲಿ ತುಂಬಾ ರಷ್ ಇತ್ತು. ಆಗ ಮುಂದಿನ ಸ್ಟಾಪ್ ನಲ್ಲಿ ಒಬ್ಬ ಮಹಿಳೆಯು ಬಸ್ಸೇರಿದಾಗ, ಕುಳಿತಿದ್ದ ಒಬ್ಬ ಯುವಕನು ಆಕೆಗೆ ತನ್ನ ಜಾಗವನ್ನು ಕೊಡಲು ಬಂದಾಗ, ಆಕೆಯು – ರೀ ಮಿಸ್ಟರ್ , ನನ್ನ ಬದಲಿಗೆ ಯಾರಾದರೂ ಒಬ್ಬರು ವಯಸ್ಸಾದ ಮುದುಕಿಯು ಹತ್ತಿದ್ದರೂ ನೀವು ಹೀಗೆ ಜಾಗ ಬಿಟ್ಟುಕೊಡುತ್ತಿದ್ರಾ? ಎಂದು ಪ್ರಶ್ನಿಸಿದಾಗ, ಆ ಚೂಟಿ ಯುವಕನು – ಹೌದು ಮೇಡಂ, ನಾನು ನಿಮಗೂ ಹಾಗೆ ಅಂದ್ಕೊಂಡೇ ಜಾಗ ಬಿಡಲು ತಯಾರಾದದ್ದು ಎಂದಾಗ, ಆಕೆಯ ಪರಿಸ್ಥಿತಿ ಇಂಗು ತಿಂದ ಮಂಗನಂಗೆ ಆಗಿತ್ತು....!

# ನನ್ನ ಪ್ರೀತಿಯ ಅಪ್ಪ

**ಮಂಗಳ ಎಂ ನಾಡಿಗ್**

ಅಪ್ಪನೆಂದರೆ ಅದ್ಭುತ. ಯಾವುದಕ್ಕೂ, ಯಾರಿಗೂ ಹೋಲಿಕೆ ಮಾಡಲಾಗದವನು. "ಅಪ್ಪನೆಂದರೆ ಅಪ್ಪ", ಅದಕ್ಕೆ ಬೇರೆ ಪದವಿಲ್ಲ. ನನ್ನ ಅಪ್ಪನೆಂದರೆ ಬಹಳ ಹೆಮ್ಮೆ ನನಗೆ. ಅಪ್ಪ ಬಹಳ ಕಷ್ಟ ಜೀವಿ. ಬಡತನವಿದ್ದರೂ ಪ್ರೀತಿ ತೋರುವುದರಲ್ಲಿ ಸಿರಿವಂತ ನನ್ನಪ್ಪ. ಕೊನೆಯ ಹಾಗೂ ಹೇಳಿದ್ದು ಕೇಳಿಕೊಂಡಿರುವ ಮಗಳಾದ್ದರಿಂದ ಒಮ್ಮೆಯೂ ಪೆಟ್ಟು ತಿಂದದ್ದಾಗಲೀ, ಬೈಸಿಕೊಂಡಿದ್ದಾಗಲೀ ನೆನಪಿಲ್ಲ. ಏನಾದರೂ ಹೇಳುವುದಾದರೂ ಧ್ವನಿ ಎತ್ತರಿಸದೆ, ನಿಧಾನಕ್ಕೆ ಹೀಗಲ್ಲ ಹೀಗೆ ಎಂದು ತಿಳಿಸುತ್ತಿದ್ದರು ನನ್ನಪ್ಪ. ಹುಷಾರಿಲ್ಲದಾಗ ಹೆಗಲ ಮೇಲೆ ಹೊತ್ತುಕೊಂಡು ಪೇಟೆಯ ಆಸ್ಪತ್ರೆಗೆ ಕರೆದೊಯ್ದಿದ್ದು ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಹಾಲಿನಲ್ಲಿ ಬ್ರೆಡ್ ಚೂರು ಮಾಡಿ ಹಾಕಿ ತಿನ್ನಿಸಿದ್ದು, ತಿಂಡಿ ಕೊಟ್ಟಾಗ ನನಗಿಷ್ಟವೆಂದು ಅವರ ತಟ್ಟೆಯಿಂದ ನನಗೆ ಸ್ವಲ್ಪ ಹಾಕಿದ್ದು, ಭತ್ತದ ಗದ್ದೆಗೆ ಹಂದಿ ಬರುತ್ತವೆಂದು ರಾತ್ರಿ ಗದ್ದೆ ಕಾಯಲು ಅಪ್ಪನ ಜೊತೆ ಹೋಗಿ ಮಂಚಿಗೆಯಲ್ಲಿ ಮಲಗುತ್ತಿದ್ದುದು, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬಹುಮಾನ ಬಂದಾಗ ನನ್ನೆದುರಿಗೆ ಹೊಗಳದಿದ್ದರೂ ಬೇರೆಯವರ ಮುಂದೆ ಹೆಮ್ಮೆಯಿಂದ ಹೇಳಿಕೊಂಡಿದ್ದು ಅವರ ಬಾಯಿಂದ ಕೇಳಿದಾಗ ಅಪ್ಪನ ಮೇಲಿನ ಅಭಿಮಾನ ಉಕ್ಕಿ ಹರಿದದ್ದಂತೂ ಸತ್ಯ.

ಈಗಲೂ ಏನಾದರೂ ಸಮಾರಂಭಗಳಾದಾಗ ನಾನು ಹೋಗದಿದ್ದುದನ್ನು ನೆನೆಸಿಕೊಂಡು, ಮುಖ ಸಪ್ಪಗೆ ಮಾಡಿಕೊಂಡಿದ್ದಾರೆ ಎಂದು ಅಮ್ಮ ಹೇಳಿದಾಗ ಅವರ ಮುಖ ನೆನೆಸಿಕೊಂಡು ಇಲ್ಲಿಯೇ ಕಣ್ಣೀರು ಹಾಕುತ್ತೇನೆ ಹೋಗಲಾಗದ ನನ್ನ ಅಸಹಾಯಕತೆಗೆ. ದಿನಕ್ಕೊಮ್ಮೆ, ಎರಡು ದಿನಕ್ಕೊಮ್ಮೆ ಕರೆ ಮಾಡಿ ಮಾತನಾಡುತ್ತೇನೆ. ಅಮ್ಮ ಕೈಹಿಡಿದು ಮೊದಲು ಅಕ್ಷರ ಕಲಿಸಿದರೆ, ಆ ಅಕ್ಷರ ಬರೆಯಲು ಸ್ಲೇಟು – ಬಳಪ ತಂದುಕೊಟ್ಟವನು ಅಪ್ಪ. ಹೀಗೆ ನನ್ನ ಜ್ಞಾನದ ಅರಿವಿಗೆ, ಇಂದು ನಾನೇನೋ ಚೂರು ಬರೆಯುತ್ತೇನೆ ಎಂದರೆ ಅದಕ್ಕೆ ಮುನ್ನುಡಿ ಬರೆದವನು ನನ್ನಪ್ಪ.

ಜಾತ್ರೆ ಬಂದ್ರೆ ಅಪ್ಪ, ಬಳೆ ತಗೊಳ್ಳಿ ಅಂತ ದುಡ್ಕೊಡ್ತಿದ್ರು. ಪ್ರತಿ ವರ್ಷ ಬೆಂಡು –ಬತ್ತಾಸು, ಬಳೆ ಜೊತೆಗೆ ಬಲೂನಂತೂ ತಪ್ಪುಸ್ತಿರ್ಲಿಲ್ಲ. ಅದೇನೋ ಬಲೂನ್ ಅಂದ್ರೆ ಅಷ್ಟ್ ಇಷ್ಟ. ಚಿಕ್ಕ ವಯಸ್ಸಲ್ಲಿ ಅಜ್ಜ ಬೇಕಾದಷ್ಟು ಬಲೂನ್ ತಂದುಕೊಟ್ಟು ಅದನ್ನೇ ಅಭ್ಯಾಸ ಮಾಡಿಸಿದ್ದರು. ಹಾಗಾಗೇ ಇರಬೇಕು ಬಲೂನ್ ಅಂದ್ರೆ ಅಷ್ಟು ಇಷ್ಟ. ಎಂಗೇಜ್ಮೆಂಟ್ ಆದ ಮೇಲೂ ಜಾತ್ರೆಯಲ್ಲಿ ಬೇಕಾಗಿದ್ದೆಲ್ಲ ತೆಗೆದುಕೊಂಡು ಹೊರಟವಳು ಮತ್ತೆ ಕೊನೆಯಲ್ಲಿ ಒಂದು ಬಲೂನ್ ಕೊಂಡುಕೊಂಡೇ ಬಂದದ್ದು.

ಅಪ್ಪ ಹಾಗೂ ನನ್ನ ಇಬ್ಬರ ಇಷ್ಟವಾದ ಜಾಗ ಅಂದ್ರೆ ಬಚ್ಚಲಿನ ಒಲೆ ಬುಡ. ಅವರು ಈಗಲೂ ಜಾಸ್ತಿ ಸಮಯ ಕಳೆಯುವುದು ಅಲ್ಲಿಯೇ. ನಾನು ಈಗ ಊರಿಗೆ ಹೋದರೂ ಮೊದಲು ಹೋಗಿ ಕೂರುವುದು ಒಲೆಬುಡದಲ್ಲೇ. ನಾಲಕ್ಕು ಗಂಟೆಗೇ ಎದ್ದು ಒಲೆ ಉರಿ ಹಾಕಿ ನೀರು ಕಾಯಿಸಿದರೆ ಐದೂವರೆ/ಆರಕ್ಕೆಲ್ಲ ಹಸುಗಳಿಗೆ ಬೆಚ್ಚಗಿನ ನೀರಿನಲ್ಲಿ ಕಲಗಚ್ಚು, ನೆನೆಸಿದ ಹಿಂಡಿ ಎಲ್ಲಾ . ಹಸುಗಳು, ಗದ್ದೆ, ತೋಟ ಇವುಗಳೇ ಅವರ ಪ್ರಪಂಚ. ಒಲೆಬುಡದಲ್ಲಿ ಕೂತು ಅಮ್ಮ ಕೊಟ್ಟ ಕಾಫಿ ಕುಡಿಯುತ್ತಾ, ಕುರುಕಲು( ಹಲಸಿನಕಾಯಿ ಚಿಪ್ಸ್ ,ಹಲಸಿನ ಹಪ್ಪಳ, ಇತ್ಯಾದಿ)

ತಿನ್ನುತ್ತಾ, ಕಳೆದ ದಿನಗಳ ಬಗ್ಗೆ, ಈಗಿನ ಊರ ಸುದ್ದಿ, ಅದೂ ಇದೂಂತ ಹರಟುತ್ತಿದ್ದರೆ ಆಹಾ, ಎಂಥಾ ಸುಖ, ಅನುಭವಿಸಿದವರಿಗೇ ಗೊತ್ತು ಅಂತಾರಲ್ಲ ಹಾಗೆ. ಈ ವಿಷಯದಲ್ಲಿ ನಾನು ಭಾಗ್ಯವಂತೆ.

ನಮ್ಮೂರಿನ ಪೇಟೆಯ ಮಧ್ಯ ಭಾಗದಲ್ಲಿ ಪ್ರತೀ ವರ್ಷ ದೊಡ್ಡದಾದ ಗಣೇಶ ಇಡುತ್ತಿದ್ದರು ( ಈಗಲೂ ಇಡುತ್ತಾರೆ)ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಇದ್ದೇ ಇರುತ್ತಿತ್ತು. (ಆರ್ಕೆಸ್ಟ್ರಾ, ಹರಿಕಥೆ ಹೀಗೆ ಏನಾದರೊಂದು) ಅದು ಮುಗಿಯುವಾಗ ರಾತ್ರಿ ಹತ್ತೂವರೆಗೂ ಹೆಚ್ಚು. ಹೋಗಲು ಆಸೆ, ಆದರೆ ಆಗ ನಾವು ಗುಡ್ಡ ಇಳಿದು, ಹಳ್ಳ, ಗದ್ದೆ, ಕಾಡುದಾರಿ ಮತ್ತೆ ಇನ್ನೊಂದು ಗುಡ್ಡ ಹತ್ತಿ ಹೋದರೆ ನಂತರ ಪೇಟೆ. ಒಮ್ಮೆ ಹೀಗೇ ಆಸೆಪಟ್ಟು ಹೋಗಿದ್ದಾಯಿತು. ಬರುವಾಗ ನನಗೆ ಸಿಕ್ಕಾಪಟ್ಟೆ ನಿದ್ದೆ. ಅಂತೂ ಮನೆ ತಲುಪುವವರೆಗೂ ಅಪ್ಪ ಬ್ಯಾಟರಿ ಹಿಡಿದು ಬರುತ್ತಿದ್ದರೂ, ದಿನಾ ಓಡಾಡಿ ಅಭ್ಯಾಸವಾಗಿದ್ದ ದಾರಿಯಾದ್ದರಿಂದ ಗುಡು ಗುಡು ಓಡುತ್ತಲೇ ಅವರಿಗಿಂತ ಹತ್ತು ಹೆಜ್ಜೆ ಮುಂದೆಯೇ ಇರುತ್ತಿದ್ದೆ. ಯಾಕೆ ಗೊತ್ತಾ, ಆಗೆಲ್ಲ ನನಗೆ ಹತ್ತು ಗಂಟೆಯೆಂದರೆ ಅರ್ಧ ರಾತ್ರಿಯಂತೆ. ಅಷ್ಟು ನಿದ್ದೆ, ಎಷ್ಟೊತ್ತಿಗೆ ಮನೆಗೆ ಹೋಗಿ ಮಲಗುತ್ತೇನೋ ಎನಿಸಿಬಿಟ್ಟಿತ್ತು. ಕೊನೆಗೂ ಅಪ್ಪ ಕೇಳಿಯೇ ಬಿಟ್ಟರು. ಅಷ್ಟೊಂದ್ ನಿದ್ದೆ ಬರುತ್ತೆ ಅಂದ್ಮೇಲೆ ಯಾಕ್ ಹೋಗ್ಬೇಕಿತ್ತು ಅಂತ. ಏನ್ಮಾಡೋದು, ಅಕ್ಕಿಯ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ ಅಂತಾರಲ್ಲ ಹಾಗಾಗಿತ್ತು ನನ್ ಕಥೆ.

ಗುಡ್ಡದ ಮೇಲೆ ಮನೆ. ಕೆಳಗೆ ಗದ್ದೆಯ ಹತ್ತಿರದ ಹಳ್ಳದಿಂದ ನೀರು ತರಬೇಕಿತ್ತು. ಪಾಪ, ಅಪ್ಪ, ಬೆಳಿಗ್ಗೆ ಸಂಜೆ ಎರಡೂ ಹೊತ್ತು ನೀರು ಹೊತ್ತು ತರುತ್ತಿದ್ದರು. ನಾವೆಲ್ಲ ಆಗ ಚಿಕ್ಕವರು. ಸ್ವಲ್ಪ ದೊಡ್ಡವಳಾದ ನಂತರ ಸಂಜೆ ನಾನೇ ಹಂಡೆ, ಬಾನಿ ,ಅಡುಗೆ ಮನೆ ಎಲ್ಲದಕ್ಕೂ ನೀರು ತುಂಬಿಸುತ್ತಿದ್ದೆ. ಬೆಳಿಗ್ಗೆ ಅಪ್ಪನ ಕೆಲಸ, ಸಂಜೆ ನನ್ನ ಕೆಲಸ. ಅದೊಂದು ದಿನ ತವರಿಗೆ ಹೋದಾಗ ಇದನ್ನೇ ಲೆಕ್ಕ ಹಾಕುತ್ತಿದ್ದರು. ಒಂದು ದಿನಕ್ಕೆ ಇಷ್ಟು ಕೊಡಪಾನ ನೀರು ತಂದರೆ ಇಪ್ಪತ್ತು ವರ್ಷಕ್ಕೆ ಎಷ್ಟ್ ಆಯ್ತು ಅಂತ. ಆಮೇಲೆ ಮೋಟಾರು ಎಲ್ಲಾ ವ್ಯವಸ್ಥೆ ಆಯ್ತು. ಈಗ ಬೇಕಾದಷ್ಟು ನೀರು ಎಲ್ಲಾ ಕಡೆಗೂ ಬಂದು ಸುರಿದು ಬೀಳುತ್ತದೆ. ಆಗ ಕಷ್ಟಪಟ್ಟರೇ ಹೊರತು ಅದಕ್ಕೆ ಕಾರಣರಾದವರನ್ನು ಒಂದು ದಿನಕ್ಕೂ ಬೈದವರಲ್ಲ, ಬೇಸರಿಸಿಕೊಂಡವರಲ್ಲ. ತನ್ನ ಅಸಹಾಯಕತೆಗೆ ತಾನೇ ಶಿಕ್ಷೆಯಂತೆ ಅನುಭವಿಸಿದರು.

ಈಗಂತೂ ಎಲ್ಲಾ ಅನುಕೂಲವಿದೆ. ಹಲಸು, ಮಾವು, ಸಪೋಟ, ಗೇರು, ಸೀಬೆ ಎಲ್ಲಾ ಮನೆ ಮಟ್ಟಿಗಾಗುವಷ್ಟಾದರೆ ಅನಾನಸ್ಸು, ಬಾಳೆಹಣ್ಣು ಮಾರಾಟ ಮಾಡುವಷ್ಟು ಸಿಗುತ್ತದೆ. ಅದರಲ್ಲೂ ಬಾಳೆಹಣ್ಣಂತೂ ಸದಾ ಇರುತ್ತದೆ. ಮಾರಾಟಕ್ಕಿಂತ ಹೆಚ್ಚಾಗಿ ಮನೆಗೆ ಬಂದವರಿಗೆ, ನೆಂಟರಿಷ್ಟರಿಗೆಂದು ತೆಗೆದುಕೊಂಡು ಹೋಗಿ ಕೊಡುವುದೇ ಹೆಚ್ಚು. ಸಂಬಂಧಿಕರು, ಒಡಹುಟ್ಟಿದವರು ಬಂದಾಗ ಆ ಸಮಯದಲ್ಲಿ ಯಾವ ಹಣ್ಣು ಇರುತ್ತದೋ ಅದನ್ನು ಧಾರಾಳವಾಗಿ ಕೈಯ್ಯೆತ್ತಿ ಕೊಡುತ್ತಾರೆ. ಅಲ್ಲದೇ ಏಲಕ್ಕಿ, ಕಾಳುಮೆಣಸು, ಅಡಿಕೆ, ಅಕ್ಕಿ , ಕರಿಬೇವು ಹೀಗೆ ಎಲ್ಲವನ್ನೂ ನಿಮಗೆ ಏನು ಬೇಕು ಎಂದು ಕೇಳಿ ಕೇಳಿ ಒಂದಷ್ಟು ಕೊಟ್ಟು ಕಳಿಸುತ್ತಾರೆ. ಯಾರದಾದರೂ ಮನೆಯಲ್ಲಿ ಮದುವೆ, ಮುಂಜಿ ಏನಾದರೂ ಸಮಾರಂಭವಿದ್ದರೆ ತೋರಣ, ಚಪ್ಪರಕ್ಕೆ ಮಾವಿನೆಲೆ, ಬಾಳೆ ಕಂಬ, ವೀಳೆದೆಲೆ ಇತ್ಯಾದಿ ತಮ್ಮ ಕೈಲಾದದ್ದು ಮಾಡುವುದರಲ್ಲೇ ಖುಷಿ ಕಾಣುತ್ತಾರೆ. ನನಗಂತೂ ಊರಿಗೆ ಹೋದರೆ ಹೊರಡುವ ಹಿಂದಿನ ದಿನದಿಂದ ಅದು ತಗೊಂಡ್ಹೋಗು, ಇದು ತಗೊಂಡ್ಹೋಗು ಎಂದು ಎಲ್ಲವನ್ನೂ ಒಂದು ಕಡೆ

ಜೋಡಿಸಿಡುತ್ತಾರೆ. ಹೊರಡುವ ಸಮಯದಲ್ಲಿ ದೊಡ್ಡ ದೊಡ್ಡ ಎಲೆಯ ಕರಿಬೇವನ್ನು ಬಾಳೆ ಎಲೆಯಲ್ಲಿ ಸುತ್ತಿಕೊಟ್ಟಿದ್ದನ್ನು ತಂದು ಫ್ರಿಡ್ಜ್ ಲ್ಲಿಟ್ಟರೆ ಹದಿನೈದು ದಿನ ತಿಂಗಳಾದರೂ ಹಸಿರಾಗಿ ನಳನಳಿಸುತ್ತಿರುತ್ತದೆ. ಎಷ್ಟೋ ಬಾರಿ ಕೆಲವೊಂದನ್ನು ಬೇಡ, ಹೋದ ಸಲ ಕೊಟ್ಟಿದ್ದೇ ಇದೆ ಎಂದು ಹೇಳುತ್ತೇನೆ. ಕಷ್ಟಪಟ್ಟು ದುಡಿದದ್ದನ್ನು ಅನಾವಶ್ಯಕವಾಗಿ ಇಸಿದುಕೊಂಡು ಬರುವುದಿಲ್ಲ. ಒಂದ್ಹತ್ ಸೇರ್ ಅಕ್ಕಿ ತಗೊಂಡ್ಹೋಗು (ಮಲೆನಾಡಿನ ಕೆಂಪಕ್ಕಿ) ಮೊನ್ನೆಯಷ್ಟೆ ಹೊಸ್ದಾಗಿ ಮಾಡ್ಸಿದೀವಿ, ಇನ್ನೇನ್ ಬೇಕು, ಕಾಫಿ ಪುಡಿ ಬೇಕಾ, ಕೊಬ್ರಿ, ಕೊಬ್ರಿ ಎಣ್ಣೆ, ಬಾಳೆ ಗೊನೆ, ಹಲಸಿನ ಹಣ್ಣು, ಅನಾನಸ್ ಹೀಗೆ. ಡಿಕ್ಕಿಯಲ್ಲಿ ಜಾಗವೇ ಇಲ್ಲದಷ್ಟು, ತುಂಬಿ ಕಳಿಸುತ್ತಾರೆ. ಇನ್ನೇನು ಹೇಳಲಿ ಅವರ ಪ್ರೀತಿಗೆ, ಅದರ ರೀತಿಗೆ.

ನಾನು ಪ್ರಾಥಮಿಕ ಶಾಲೆಯಲ್ಲಿದ್ದಾಗ ಅಲ್ಲಿ ಪ್ರತಿ ವರ್ಷ ಗಣೇಶ ಇಡುತ್ತಿದ್ದರು. ಅಪ್ಪ ಮತ್ತು ಅವರ ಸ್ನೇಹಿತರು ಸೇರಿ "ಹಳೇ ವಿದ್ಯಾರ್ಥಿ ಸಂಘ" ಎಂದು ಮಾಡಿಕೊಂಡು ಅದರ ಮೂಲಕ ಎಲ್ಲಾ ಮಕ್ಕಳಿಗೂ ಒಂದು ದಿನ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡುತ್ತಿದ್ದರು. ಅಪ್ಪ, ನಾನು ಓದಿದ ಶಾಲೆಗೆ ಈಗ ಶತಮಾನದ ಸಂಭ್ರಮ. ಕರೋನಾ ಬರುವುದಕ್ಕೆ ಮುಂಚೆಯೇ ಬಹಳ ಸಂಭ್ರಮದಿಂದ ಆಚರಿಸುವ ತಯಾರಿ ನಡೆದಿತ್ತು. ಕರೋನದಿಂದಾಗಿ ಸಾಧ್ಯವಾಗಲಿಲ್ಲ. ನಾನು ಊರಿಗೆ ಹೋದಾಗ ಅಪ್ಪ, ನನ್ನ ಮಕ್ಕಳು ಹಾಗೂ ಅಣ್ಣನ ಮಗಳ ಜೊತೆ ಶಾಲೆಗೆ ಭೇಟಿ ನೀಡಿ ಈಗಿರುವ ಶಿಕ್ಷಕರನ್ನು ಮಾತನಾಡಿಸಿ (ಫೋನ್ ಮೂಲಕ ಮೊದಲೇ ಒಂದಿಬ್ಬರ ಪರಿಚಯ ಆಗಿತ್ತು) ಬದಲಾದ ವ್ಯವಸ್ಥೆಗಳನ್ನು ನೋಡಿಕೊಂಡು ಬಂದೆವು. ನನ್ನ ಮಕ್ಕಳಿಗೂ ನಾನು ಓದಿದ ಶಾಲೆ ಎಂದು ತೋರಿಸುವಲ್ಲಿ ಏನೋ ಒಂದು ತರದ ಹೆಮ್ಮೆಯಂತೂ ಖಂಡಿತಾ ಇತ್ತು. ಅಪ್ಪ, ಈಗಲೂ ಮನೆಯ ಹತ್ತಿರದ ಶಾಲೆಗೆ ಪ್ರತಿ ವರ್ಷ ಸಿಹಿ ಹಂಚಿ ಬರುತ್ತಾರೆ . ಅಲ್ಲಿ ಪ್ರತೀ ವರ್ಷ ಗಣೇಶನ ಪೂಜೆಯೂ ಅವರದೇ.

ಒಮ್ಮೆ ಊರಿಗೆ ಹೋದಾಗ ಯಾಕೋ ಅಲ್ಲಿ ಕಳೆದ ದಿನಗಳ ಬಗ್ಗೆ ಒಂದು ಕವನ ಬರೆಯಬೇಕೆನಿಸಿತು. "ಹಳೆಯ ನೆನಪು" ಎಂದು ಬರೆಯಲು ಶುರು ಮಾಡಿದೆ. ಮುಗಿದ ಮೇಲೆ ಅಪ್ಪನಿಗೆ ಹೇಳಿದೆ. ಅವರು ಮನೆಯ ಮುಂದೆ ನಿಂತಿದ್ದರು. ಆಗ ಸರಿ ಸುಮಾರು ಅವರಿಗೆ ಎಪ್ಪತ್ತು ವರ್ಷ. ತಕ್ಷಣವೇ ಅವರು ಒಂದೊಂದೇ ಸಾಲು ಹೇಳುತ್ತಾ ಹೊರಟರು. ನಾನೂ ಮರೆತು ಹೋಗುತ್ತದೆಂದು ಬರೆದುಕೊಳ್ಳಲು ಪ್ರಾರಂಭಿಸಿದೆ. ಹಾಗೆ ಶುರುವಾದ ಅವರ ಸಾಲುಗಳು ಹತ್ತು ನಿಮಿಷಕ್ಕೆ ಒಂದು ಒಳ್ಳೆಯ ಕವನವಾಗಿ ಮಾರ್ಪಟ್ಟಿತ್ತು. ಮಗಳು ಆಷಾಢದಲ್ಲಿ ತವರಿಗೆ ಬಂದಾಗ ಅಲ್ಲಿ ಏನೇನು ನೋಡುತ್ತಾಳೆ, ಎಷ್ಟು ಖುಷಿ ಪಡುತ್ತಾಳೆ ಎಂಬುದನ್ನು ಅವರು ಹೇಳಿದ್ದರು. ಬಹುಶಃ ಅದು ನಾನು ಬರೆಯಬೇಕಾಗಿದ್ದು, ನನ್ನ ಮನಸ್ಸು ಅರಿತು ಅವರ ಹೃದಯಾಯಾಂತರಾಳದಿಂದ ಬಂದಿತ್ತು. ಅದಕ್ಕೇ ಅಲ್ಲವೇ , ತಂದೆ– ಮಗಳದ್ದು ಭಾವನಾತ್ಮಕವಾಗಿ ಬೆಸೆದ ಸಂಬಂಧ ಎನ್ನುವುದು. ಹಾಗಾಗೇ, ಈ ಬರಹ ಎನ್ನುವುದು ನನಗೆ ರಕ್ತದಲ್ಲೇ ಬಂದಿದೆ ಎಂದರೆ ಅತಿಶಯೋಕ್ತಿಯಲ್ಲ. ಅಲ್ಲಿಯವರೆಗೆ ಅವರಲ್ಲಿ ಈ ಒಂದು ಕಲೆ, ಪ್ರತಿಭೆ ಇದೆ ಎನ್ನುವುದೇ ಯಾರಿಗೂ ತಿಳಿದಿರಲಿಲ್ಲ. ಬದುಕಿಡೀ ಒಂದಲ್ಲಾ ಒಂದು ಜವಾಬ್ದಾರಿ, ಕಷ್ಟಗಳಿಗೆ ಸಿಲುಕಿ ಅದರ ಜಂಜಾಟದಲ್ಲೇ ಮುಳುಗಿದವರಿಗೆ ಅದನ್ನು ಸಂಭಾಳಿಸುವುದರಲ್ಲೇ ಸಾಕಾಗಿತ್ತು. ಇದಕ್ಕೆಲ್ಲಾ ಪುರುಸೊತ್ತೂ ಇರಲಿಲ್ಲ . ಅಲ್ಲದೇ ಅವರ ಇಷ್ಟ, ಕಷ್ಟ ಕೇಳಿ ಅದಕ್ಕೆ ಸ್ಪಂದಿಸಿ ಪ್ರೋತ್ಸಾಹ ನೀಡುವವರೂ

ಸಿಗಲಿಲ್ಲ. ಒಂದು ದಿನವೂ ತನಗಿಂತದ್ದು ಇಷ್ಟ ಎಂದು ಬಾಯಿ ಬಿಟ್ಟು ಹೇಳಿದವರಲ್ಲ, ತನಗೇನಾದರೂ ಬೇಕು ಎಂದು ಕೇಳಿದವರಲ್ಲ.

ಬೇರೆ ಊರಿಗೆ ಹೋಗಲು ಹೆಚ್ಚು ಇಷ್ಟಪಡದ ಅಪ್ಪನಿಗೆ ಮನೆಯೇ ಸ್ವರ್ಗ. ಯಾವುದಾದರೂ ಕಾರ್ಯಕ್ರಮಗಳಿಗೆ ಹೋದರೂ ಮೂರು, ನಾಲ್ಕು ಗಂಟೆ ಆಗುವಷ್ಟರಲ್ಲಿ ಅವರ ಜೀವ ಮನ ಕಡೆಯೇ ಎಳೆಯುತ್ತಿರುತ್ತದೆ. ದನಗಳಿಗೆ ಕಲಗಚ್ಚು ಕೊಡಬೇಕು, ಹುಲ್ಲು ಹಾಕಬೇಕು, ಹಾಲು ಕರೆಸಬೇಕು, ತಡ ಆಯ್ತು ಹೀಗೆ. ಮನೆ ತಲುಪುವವರೆಗೂ ಅವರು ಚಡಪಡಿಸುತ್ತಲೇ ಇರುತ್ತಾರೆ. ದನಕರಗಳನ್ನು ಹೊರಗೆ ಕಟ್ಟುವಾಗ ಅವು ಎಳೆದುಕೊಂಡು ಹೋಗಿ ಹಗ್ಗ ಕಾಲಿಗೆ, ಮೈಗೆ ಸುತ್ತಿಕೊಂಡು ಗಾಯವಾಗಿದ್ದೂ ಇದೆ. ಅವುಗಳ ಶಕ್ತಿಯ ಮುಂದೆ ವಯಸ್ಸಾದ ಅಪ್ಪನಿಗೆ ಈಗ ಅವೆಲ್ಲಾ ಸ್ವಲ್ಪ ಕಷ್ಟವೇ. ಕೆಲಸದವರು, ಮನೆಯವರು ಎಷ್ಟು ಮಾಡಿದರೂ ಅವರಿಗೆ ಇದನ್ನೆಲ್ಲ ತಾವೇ ಮಾಡಬೇಕೆಂಬ ಹಪಾಹಪಿ. ಇಷ್ಟು ವರ್ಷ ಕಷ್ಟ ಪಟ್ಟಿದ್ದೀರಿ, ಹಾಲು ತಂದರಾಯಿತು. ಇನ್ನು ಮುಂದಾದರೂ ಸುಖವಾಗಿರಿ ಎಂದರೆ ಸುತಾರಾಂ ಒಪ್ಪುವುದಿಲ್ಲ. ಏಕೆಂದರೆ, ಅವರ ಖುಷಿ, ತೃಪ್ತಿ ಎಲ್ಲಾ ಅದರಲ್ಲೇ. ಸರಿ, ಈ ಇಳಿ ವಯಸ್ಸಿನಲ್ಲಿ ಅವರಿಗೆ ಯಾವುದರಲ್ಲಿ ಖುಷಿ ಸಿಗುತ್ತದೆಯೋ ಹಾಗೇ ಇರಲಿ ಎಂದು ಎಲ್ಲರೂ ತಮ್ಮ ಕೈಲಾದಂತೆ ಅವರಿಗೆ ಸಹಕರಿಸುತ್ತೇವೆ. ಅವರಿಷ್ಟಪಟ್ಟ ನೆಮ್ಮದಿ ಬದುಕಿಗಿಂತ ಅವರಿಗೆ ನಾವಿನ್ನೇನು ಕೊಡಲು ಸಾಧ್ಯ...?

ನನ್ನಪ್ಪ, ಇಷ್ಟು ವರ್ಷಗಳ ಕಾಲ ಒಮ್ಮೆಯೂ ಒಬ್ಬರ ಬಗ್ಗೆಯೂ ಕೆಟ್ಟದಾಗಿ ಮಾತನಾಡಿದ್ದಾಗಲಿ, ಅವರು ಹಾಗೆ, ಇವರು ಹೀಗೆ ಎಂದಿದ್ದಾಗಲಿ ನಾನು ಕಂಡಿಲ್ಲ. ನಾಲ್ಕು ಜನ ಸೇರಿದಾಗ ಅಲ್ಲಿ ಯಾರ ಬಗ್ಗೆಯಾದರೂ ಕೆಟ್ಟದಾಗಿ ಮಾತನಾಡುತ್ತಿದ್ದರೆ, ಅಪ್ಪ ಅಲ್ಲಿಂದ ಎದ್ದು ಹೋಗುತ್ತಾರೆ. ಅವರ ಕೈಲಾದರೆ ಸಹಾಯ ಮಾಡುತ್ತಾರೆ. ಪ್ರತಿದಿನವೂ ದೇವರಿಗೆ ನಮಸ್ಕರಿಸುವಾಗ ಜಗತ್ತಿನ ಎಲ್ಲರಿಗೂ ಮೂರು ಹೊತ್ತಿನ ಊಟ ಕೊಡಪ್ಪ ಎಂದೇ ಕೇಳುವುದು. ತನಗಾಗಿಯಾಗಲಿ, ಹೆಂಡತಿ ಮಕ್ಕಳಿಗಾಗಿಯಾಗಲಿ ಏನೂ ಕೇಳಿದ್ದು ನಾ ನೋಡಿಲ್ಲ. ಅಪ್ಪನ ಬಗ್ಗೆ ಬರೆಯಲು ಹೋದರೆ ಅದು ಮುಗಿಯದ ಬರಹ...

ಇಂದಿಗೂ ಯಾವುದಕ್ಕಾದರೂ ಅಪ್ಪ ಇದ್ದಾರೆ ಎಂಬ ಭರವಸೆಯೇ ನನಗೆ ಶಕ್ತಿ,ಸ್ಫೂರ್ತಿಎಲ್ಲವೂ. ಅವರು ನಡೆದ ದಾರಿಯೇ ನನಗೆ ಆದರ್ಶ. ಇಂಥ ಅಪ್ಪನನ್ನು ಪಡೆದ ನಾನೇ ಪುಣ್ಯವಂತೆ. "ನಿನ್ನಂತ ಅಪ್ಪ ಇಲ್ಲಾ, ನಿನಗೆ ಸರಿಸಾಟಿ ಜಗದಲ್ಲಿ ಯಾರೂ ಇಲ್ಲ". ನಿನ್ನ ಪ್ರೀತಿಯ ಕಡಲಲ್ಲಿ ಸದಾ ನಗುತ್ತಿರುವೆ ಅಪ್ಪಾ. ನನ್ನಪ್ಪ ಯಾವಾಗಲೂ ಸದಾ ಖುಷಿಖುಷಿಯಾಗಿರಲೆಂದೇ ದೇವರಲಿ ಬೇಡುವೆನು. ■

**ಹೊಸ ಸರ್ಕಾರದ ಎಫೆಕ್ಟ್**

ಮೊದಲೆಲ್ಲಾ ಹೆಂಡತಿ ರೀ ನಾನು ಎರಡು ದಿನದ ಮಟ್ಟಿಗೆ ತವರು ಮನೆಗೆ ಹೋಗಿ ಬರ್ತೀನಿ ಅಂತ ಗಂಡನಿಗೆ ಹೇಳಿ ಹೋಗೋಳು. ಆದರೆ ಈಗ ರೀ ನಾನು ತವರು ಮನೆಗೆ ಹೋಗಿ ಅಲ್ಲಿಂದ ಅಮ್ಮ, ತಂಗಿ, ಚಿಕ್ಕಮ್ಮ, ದೊಡ್ಡಮ್ಮ ಎಲ್ಲರನ್ನು ಕರೆದುಕೊಂಡು ಧರ್ಮಸ್ಥಳ, ಉಡುಪಿ, ಮುರುಡೇಶ್ವರ, ಮಂಗಳೂರು, ಕಟೀಲು ಎಲ್ಲಾ ಕಡೆ ಹೋಗಿ ಬರ್ತಿನಿ. ಬರೋದು ಎಷ್ಟು ದಿನ ಆಗುತ್ತೋ ಗೊತ್ತಿಲ್ಲ. ಮನೆ ಕಡೆ ಜೋಪಾನ ಅಂದು ಹೊರಟುಹೋಗುತ್ತಾಳೆ.